ಜಿಲ್ಲಾ ಪಂಚಾಯತ್, ಹಾಸನ ವತಿಯಿಂದ ಪ್ರಕಟಿಸಲಾಗಿದೆ. 2020-21ನೇ ಸಾಲಿನ ವಾರ್ಷಿಕ ವರದಿ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಹಾಸನ.

2020-21ನೇ ಸಾಲಿನ ವಾರ್ಷಿಕ ಆಡಳಿತ ವರದಿ

Zilla Panchayath, Hassan.

2020-21 ANNUAL ADMINISTRATIVE REPORT



ಬಿ.ಎ. ಪರಮೇಶ್, ಕೆ.ಐ.ಎಸ್.
ಮುಖ್ಯಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಹಾಸನ.

ಪ್ರಸ್ತಾವನೆ

ಹಾಸನ ಜಿಲ್ಲಾ ಪಂಚಾಯಿತಿಯ 2020-21ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ತಮ್ಮ ಮುಂದಿಡಲು ಹರ್ಷಿಸುತ್ತೇವೆ. ಮಹಾತ್ಮ ಗಾಂಧೀಜಿಯವರ ಕನಸಾದ **"ಗ್ರಾಮ ಸ್ವರಾಜ್ಯದ"** ಧ್ಯೇಯವನ್ನು ಗಮನದಲ್ಲಿಟ್ಟುಕೊಂಡು ಹಾಸನ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ, ಪ್ರಸ್ತುತ ರಾಜ್ಯ ಮತ್ತು ಕೇಂದ್ರ ವಲಯ ಅನುದಾನದಿಂದ ವಿವಿಧ ಇಲಾಖೆಗಳ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ಮತ್ತು ಯೋಜನೇತರ (ವೇತನ ಮತ್ತು ವೇತನೇತರ) ಗುರಿಗಳನ್ನು ಸಕಾಲದಲ್ಲಿ ಸಮರ್ಪಕವಾಗಿ ಹಾಗೂ ಗುಣಾತ್ಮಕವಾಗಿ ಭೌತಿಕ ಮತ್ತು ಆರ್ಥಿಕ ಗುರಿ ಸಾಧನೆಗಳನ್ನು ಅನುಷ್ಠಾನಗೊಳಿಸಲಾಗಿರುವ ಮಾಹಿತಿಯನ್ನು ಈ ವರದಿಯಲ್ಲಿ ನೀಡಲಾಗಿದೆ.

ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಗುರಿ ತಲುಪಲು ಸಹಕರಿಸಿದ ಹಾಸನ ಜಿಲ್ಲಾ ಪಂಚಾಯಿತಿ ಇಲಾಖಾ ಮುಖ್ಯಸ್ಥರುಗಳು ಮತ್ತು ಅಧೀನ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಅಭಿನಂದನೆಗಳು.

ಹಾಸನ ಜಿಲ್ಲಾ ಪಂಚಾಯಿತಿ 2020-21ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ತಯಾರಿಸುವಲ್ಲಿ ಶ್ರಮ ವಹಿಸಿದ ಹಾಸನ ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಮತ್ತು ಸಿಬ್ಬಂದಿಯವರ ಸೇವೆ ಪ್ರಶಂಸನೀಯ.

ಬಿ.ಎಸ್. ಶ್ವೇತಾದೇವರಾಜ್ (ದೇಶಾಣಿ), ಬಿ.ಎ.,
ಅಧ್ಯಕ್ಷರು
ಜಿಲ್ಲಾ ಪಂಚಾಯತ್, ಹಾಸನ.

ಹೆಚ್.ಪಿ. ಸ್ವರೂಪ್, ಬಿ.ಇ.,
ಉಪಾಧ್ಯಕ್ಷರು,
ಜಿಲ್ಲಾ ಪಂಚಾಯತ್, ಹಾಸನ.



ಶ್ರೀಮತಿ ಬಿ.ಎಸ್. ಶ್ವೇತಾದೇವರಾಜ್ (ದೇಶಾಣಿ), ಬಿ.ಎ.,

ಅಧ್ಯಕ್ಷರು,

ಜಿಲ್ಲಾ ಪಂಚಾಯತ್, ಹಾಸನ.

ದಿನಾಂಕ : 01-04-2019 ರಿಂದ 31-03-2020



ಶ್ರೀ ಹೆಚ್.ಪಿ. ಸ್ವರೂಪ್, ಬಿ.ಇ.,

ಉಪಾಧ್ಯಕ್ಷರು,

ಜಿಲ್ಲಾ ಪಂಚಾಯತ್, ಹಾಸನ.

ದಿನಾಂಕ : 24-05-2019 ರಿಂದ 31-03-2020

2020-21 ನೇ ಸಾಲಿನ ಆಡಳಿತ ವರದಿ

ಜಿಲ್ಲಾ ಪಂಚಾಯತ್, ಹಾಸನ.



ಜಿಲ್ಲಾ ಪಂಚಾಯತ್, ಆಡಳಿತ ಕಛೇರಿ.

ವಿಷಯ ಸೂಚಿ

1.	ಹಾಸನ ಜಿಲ್ಲಾ ಪಂಚಾಯತ್ ಆಡಳಿತ ವರದಿ	1–11
2.	ಮಾಹಿತಿ ಹಕ್ಕು ಅಧಿನಿಯಮದ ಆದೇಶ	12–14
3.	ಕೃಷಿ ಇಲಾಖೆ	15
4.	ತೋಟಗಾರಿಕೆ ಇಲಾಖೆ	16–19
5.	ರೇಷ್ಮೆ ಇಲಾಖೆ	20–21
6.	ಮೀನುಗಾರಿಕೆ ಇಲಾಖೆ	22–29
7.	ಸಾಮಾಜಿಕ ಅರಣ್ಯ ಇಲಾಖೆ	30–36
8.	ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ಇಲಾಖೆ	37–39
9.	ಸಮಾಜ ಕಲ್ಯಾಣ ಇಲಾಖೆ	40–42
10.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	43–57
11.	ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ	58–61
12.	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	62–66
13.	ಕೈಮಗ್ಗ ಮತ್ತು ಜವಳಿ ಇಲಾಖೆ	67–68
14.	ಕೈಗಾರಿಕೆ ಇಲಾಖೆ	69
15.	ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ	70
16.	ಸಾರ್ವಜನಿಕ ಶಿಕ್ಷಣ ಇಲಾಖೆ	71–75
17.	ಪಂಚಾಯತ್ ರಾಜ್ ಇಂಜಿನಿಯರ್ ವಿಭಾಗ, ಹಾಸನ / ಚನ್ನರಾಯಪಟ್ಟಣ	76–81
18.	ಜಿಲ್ಲಾ ಆಯುಷ್ ಇಲಾಖೆ	82–85
19.	ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ	86–106
20.	ಸಹಕಾರ ಇಲಾಖೆ	107–108
21.	ಅನುಬಂಧಗಳು	109–125

2020–21ನೇ ಸಾಲಿನ ಹಾಸನ ಜಿಲ್ಲಾ ಪಂಚಾಯತ್, ವಾರ್ಷಿಕ ಆಡಳಿತ ವರದಿ

ಅನುಬಂಧ

1. ಜಿಲ್ಲಾ ಪಂಚಾಯತ್ ವ್ಯಾಪ್ತಿ (ಪ್ರಕರಣ 158)			
1. ಪ್ರದೇಶ		:	6814 ಚ.ಕಿ.ಮೀ
2. ಜನಸಂಖ್ಯೆ		:	17,76,421
2. ಒಟ್ಟು ಸ್ಥಾನಗಳು (ಪ್ರಕರಣ 159)			
ಅ)	ಚುನಾಯಿತ ಸದಸ್ಯರ ಸಂಖ್ಯೆ	:	40
ಆ)	ಲೋಕಸಭಾ ಸದಸ್ಯರ ಸಂಖ್ಯೆ	:	01
ಇ)	ವಿಧಾನಸಭಾ ಸದಸ್ಯರ ಸಂಖ್ಯೆ	:	07
ಈ)	ವಿಧಾನ ಪರಿಷತ್ ಸದಸ್ಯರ ಸಂಖ್ಯೆ	:	02
ಉ)	ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಸಂಖ್ಯೆ	:	08
ಏ)	ಜಿಲ್ಲಾ ಪಂಚಾಯತ್ ಸದಸ್ಯರ ಸಭಾ ಭತ್ಯೆ	:	ರೂ. 150568=00
			ಒಟ್ಟು ರೂ. 150568=00

3. ಪ್ರಕರಣ 177,178,179ಕ್ಕೆ ಸಂಬಂಧಪಟ್ಟ ವಿವರಗಳು	1) ಅಧ್ಯಕ್ಷರ ಹೆಸರು	ಶ್ರೀಮತಿ ಬಿ.ಎಸ್. ಶ್ವೇತಾದೇವರಾಜ್ ದಿ. 01–04–2020 ರಿಂದ 31–03–2021ರ ವರೆಗೆ
	2) ಉಪಾಧ್ಯಕ್ಷರ ಹೆಸರು	ಶ್ರೀ ಹೆಚ್.ಪಿ. ಸ್ವರೂಪ್ ದಿ : 24–05–2020 ರಿಂದ 31–03–2021ರ ವರೆಗೆ
3. ಪಾವತಿಸಿದ ವೇತನ ಮತ್ತು ಭತ್ಯೆಗಳು		ಅಧ್ಯಕ್ಷರು ರೂ. 8,59,992/– ಉಪಾಧ್ಯಕ್ಷರು ರೂ. 3,25,000/– ಸದಸ್ಯರು ರೂ. 24,20,000/–
4. ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ		ಅಧ್ಯಕ್ಷರು ರೂ. 2,72,000/– ಉಪಾಧ್ಯಕ್ಷರು ರೂ. 63,500/–
5. ಉಪಾಧ್ಯಕ್ಷರಿಗೆ ನೀಡಲಾದ ಅಧಿಕಾರ		ಇಲ್ಲ
6. ಅವಿಶ್ವಾಸ ನಿರ್ಣಯಗಳು ಇದ್ದಲ್ಲಿ		ಇಲ್ಲ
ಅ) ಅಧ್ಯಕ್ಷರ ವಿರುದ್ಧ		ಇಲ್ಲ
ಆ) ಉಪಾಧ್ಯಕ್ಷರ ವಿರುದ್ಧ		ಇಲ್ಲ
ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯು ಸ್ಪರ್ಧಾತ್ಮಕವೇ ? ಅಥವಾ ವಿವಾದಾತ್ಮಕವೇ ?		ಸ್ಪರ್ಧಾತ್ಮಕ
4. ಪ್ರಕರಣ 196, 197ಕ್ಕೆ ಸಂಬಂಧಪಟ್ಟ ವಿವರ		
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	ಶ್ರೀ ಬಿ.ಎ. ಪರಮೇಶ್, ಕೆ.ಜಿ.ಎಸ್.	01–04–2020 ರಿಂದ 04–12–2020
	ಶ್ರೀಮತಿ ಡಿ. ಭಾರತಿ, ಐ.ಎ.ಎಸ್.	05–12–2020 ರಿಂದ 16–02–2021
	ಶ್ರೀ ಬಿ.ಎ. ಪರಮೇಶ್, ಕೆ.ಜಿ.ಎಸ್.	17–02–2021 ರಿಂದ 31–03–2021
2. ಉಪ ಕಾರ್ಯದರ್ಶಿ (ಆಡಳಿತ)	ಶ್ರೀ ಎಂ.ಸಿ. ಚಂದ್ರಶೇಖರ್	01–04–2020 ರಿಂದ 31–03–2021
3. ಉಪ ಕಾರ್ಯದರ್ಶಿ (ಅಭಿವೃದ್ಧಿ)	ಶ್ರೀ ಎಸ್.ಸಿ. ಮಹೇಶ್	01–04–2020 ರಿಂದ 31–03–2021
4. ಮುಖ್ಯ ಯೋಜನಾಧಿಕಾರಿ	ಶ್ರೀ ಹೆಚ್.ವಿ. ನಾಗರಾಜ	01–04–2020 ರಿಂದ 31–03–2021
5. ಮುಖ್ಯ ಲೆಕ್ಕಾಧಿಕಾರಿ	ಶ್ರೀಮತಿ ಪ್ರಿಯಾಂಕ ನೀಷ್ಮಡಿ'ಕೋಷ್ಟ	01–04–2020 ರಿಂದ 31–03–2021
6. ಯೋಜನಾ ನಿರ್ದೇಶಕರು	ಶ್ರೀ ಎಸ್.ಸಿ. ಮಹೇಶ್	01–04–2020 ರಿಂದ 31–03–2021

******

5. ಚುನಾವಣೆಗಳು (ಪ್ರಕರಣ 160)		
1. ಸಾರ್ವತ್ರಿಕ ಚುನಾವಣೆ	ಇದೆ	
2. ಉಪ ಚುನಾವಣೆಗಳೇನಾದರೂ ಆಗಿದ್ದಲ್ಲಿ ದಿನಾಂಕ ಕಾರಣ ಮತ್ತು ಫಲಿತಾಂಶ	ಇಲ್ಲ	
3. ಜಿಲ್ಲಾ ಪಂಚಾಯತ್‌ನ ಅಧಿಕಾರಾವಧಿಯನ್ನು ವಿಸ್ತರಿಸಲಾಗಿರುವ ಬಗ್ಗೆ	ಇಲ್ಲ	
4. ಚುನಾವಣಾ ವೆಚ್ಚ	ಇಲ್ಲ	
5. ಚುನಾವಣಾ ವ್ಯಾಜ್ಯಗಳು ಇದ್ದಲ್ಲಿ	ಇಲ್ಲ	
6. ಜಿಲ್ಲಾ ಪಂಚಾಯತ್ ಸಭೆಗಳು ಮತ್ತು ಹಾಜರಿ (ಪ್ರಕರಣ 180)		
1. ಸಾಮಾನ್ಯ ಸಭೆಗಳ ಸಂಖ್ಯೆ	02	
2. ವಿಶೇಷ ಸಭೆಗಳ ಸಂಖ್ಯೆ	01	
3. ಮುಂದೂಡಲಾದ ಸಭೆಗಳ ಸಂಖ್ಯೆ	0	
4. ಸಭೆಗಳನ್ನು ಕ್ರಮಬದ್ಧವಾಗಿ ನಡೆಸಿರುವ ಬಗ್ಗೆ	ನಡೆಸಲಾಗಿದೆ	
5. ಕೋರಂ ಇಲ್ಲದೇ ಮುಂದೂಡಲಾದ ಸಭೆಗಳ ಸಂಖ್ಯೆ	02	
6. ಸಭಾ ನಡವಳಿ ನಿಯಮಗಳ ಪಾಲನೆ	ನಿಯಮಗಳ ಪಾಲನೆಯಾಗುತ್ತಿದೆ.	
7. ಸ್ಥಾಯಿ ಸಮಿತಿಗಳು ಮತ್ತು ಇತರೆ ಸಮಿತಿಗಳು (ಪ್ರಕರಣ 186, 187, 188)		
1. ರಚಿಸಲಾದ ಸ್ಥಾಯಿ ಸಮಿತಿ ಹಾಗೂ ಇತರೆ ಸಮಿತಿಗಳ ಸಂಖ್ಯೆ	05	
2. ಸಮಿತಿಗಳಿಗೆ ಚುನಾವಣಾ ನಡೆದ ದಿನಾಂಕ	08–09–2020	
3. ಸ್ಥಾಯಿ ಸಮಿತಿಯ ಸದಸ್ಯರುಗಳ ಸಂಖ್ಯೆ	ಪ್ರತಿ ಸ್ಥಾಯಿ ಸಮಿತಿ ಸದಸ್ಯರ ಸಂಖ್ಯೆ 07	
4. ಸ್ಥಾಯಿ ಸಮಿತಿಗಳ ಸಭೆಗಳ ವಿವರ		
ಅ) ಸಾಮಾನ್ಯ ಸ್ಥಾಯಿ ಸಮಿತಿ	02	
ಆ) ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ	02	
ಇ) ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ	04	
ಈ) ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ	02	
ಉ) ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ	02	
8. ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣೆ (ಪ್ರಕರಣ 196 ಹಾಗೂ 197 ರಂತೆ)		
1. ಜಿಲ್ಲಾ ಪಂಚಾಯತ್‌ಗೆ ಮಂಜೂರಾದ ಒಟ್ಟು ಹುದ್ದೆಗಳು	108	
2. ಖಾಲಿ ಇರುವ ಹುದ್ದೆಗಳು	61	
3. ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನ ಲಕ್ಷ ರೂಗಳಲ್ಲಿ	2515 ಯೋಜನೆಗಳು	137.00
4. ಸಿಬ್ಬಂದಿಯ ವೆಚ್ಚಗಳು (ಲಕ್ಷಗಳಲ್ಲಿ)	2515 ಯೋಜನೇತರ	150.00
5. ಸಿಬ್ಬಂದಿ ವೆಚ್ಚಗಳು (ಲಕ್ಷಗಳಲ್ಲಿ)	3451 ಯೋಜನೇತರ	67.00
6. ಕಛೇರಿ ಸಾದಿಲ್ವಾರು	3451 ಯೋಜನೆ	21.00
7. ನೈಸರ್ಗಿಕ ಸಂಪನ್ಮೂಲ (ಮಾಹಿತಿ ನಿರ್ವಹಣೆ)	3425 ಯೋಜನೆ	5.00

9. ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಪಟ್ಟ ವಸ್ತು ಪ್ರದರ್ಶನ ವಿಚಾರಗೋಷ್ಠಿ ಸಮ್ಮೇಳನ ಬಗ್ಗೆ ವಂತಿಕೆ (ಪ್ರಕರಣ 191)	
1. ಅಖಿಲ ಭಾರತ ಒಕ್ಕೂಟ ಸಂಘಗಳು	–
2. ರಾಜ್ಯಮಟ್ಟದ ಒಕ್ಕೂಟ ಸಂಘಗಳು	–
3. ಅಂತರ ರಾಜ್ಯ ಮಟ್ಟದ ಒಕ್ಕೂಟ ಸಂಘಗಳು	–
4. ಹಣಕಾಸಿನ ಒಕ್ಕೂಟ ಸಂಘಗಳು	–
5. ಇತರೆ ಸಂಘ ಸಂಸ್ಥೆಗಳಿಗೆ ವಂತಿಕೆ	–
	ಯೋಜನೆ
10. ಸಮಾಜ ಕಲ್ಯಾಣ ಇಲಾಖೆ (ರೂ. ಲಕ್ಷಗಳಲ್ಲಿ)	ರೂ. 5284.06
10 ಎ) ಹಿಂದುಳಿದ ವರ್ಗಗಳ ಕಲ್ಯಾಣ	ರೂ. 4982.75
11. ಜಿಲ್ಲಾ ಪಂಚಾಯತ್‌ಯಿಂದ ಎತ್ತಿದ ಸಾಲಗಳು	–
12. ಬಜೆಟ್ ವ್ಯಾಪ್ತಿಯಲ್ಲಿ ಬಾರದ ಜಿಲ್ಲಾ ಪಂಚಾಯತ್ ನಿಂದ ಖರ್ಚಾಗಿರುವ ಹಣ	–
13. ಬಜೆಟ್‌ನ್ನು ಸಕಾಲದಲ್ಲಿ ಮಂಡಿಸಲಾಯಿತೇ	ಹೌದು
ಅ) ಬಜೆಟ್ ಮಂಡಿಸಿದ ದಿನಾಂಕ	17–05–2018
ಆ) ಬಜೆಟ್ ಅನುಮೋದಿಸಿದ ದಿನಾಂಕ	
ಇ) ಆಯವ್ಯಯದ ಒಟ್ಟು ಮೊತ್ತ ಲಕ್ಷಗಳಲ್ಲಿ	ಯೋಜನೆ ಯೋಜನೇತರ ರೂ. **ಒಟ್ಟು 1,08,774.46 ಲಕ್ಷಗಳು**
14. ಲೆಕ್ಕ ಪತ್ರಗಳ ರವಾನೆ ಸಕಾಲದಲ್ಲಿ ಆಗಿದೆಯೇ	ಆಗಿದೆ
15. ವಸೂಲಾಗದ ಹಣವನ್ನು ಲೆಕ್ಕದಿಂದ ಮನ್ನಾ ಮಾಡುವ ಬಗ್ಗೆ	–
ಅ) ಜಿಲ್ಲಾ ಪಂಚಾಯಿತಿಯಿಂದ	ಯಾವುದು ಇರುವುದಿಲ್ಲ
ಆ) ಸರ್ಕಾರದಿಂದ ಪೂರ್ಣ ಮಂಜೂರಾತಿ ಪಡೆದು	ಯಾವುದು ಇರುವುದಿಲ್ಲ
ಇ) ಲೆಕ್ಕ ಪರಿಶೋಧಿಸಿದ ದಿನಾಂಕ	ಕಾರ್ಯಕ್ರಮ ರೂಪಿಸಬೇಕಾಗಿದೆ
ಈ) ಲೆಕ್ಕ ಪರಿಶೋಧಕರಿಂದ ನಿರಾಕರಿಸಲ್ಪಟ್ಟ ಐಟಂಗಳ ಸಂಖ್ಯೆ ಮತ್ತು ಅದರ ಬಗ್ಗೆ ಜಿ.ಪಂ. ಆದೇಶ	–
ಉ) 1. ಲೆಕ್ಕ ಪರಿಶೋಧಕರಿಂದ ನಿರಾಕರಿಸುವುದು	ಇಲ್ಲ
2. ಸಂಗ್ರಹಿಸಿದ ಮತ್ತು ಅದರ ಮೇಲಿನ ಬಡ್ಡಿ ಸಂಗ್ರಹ	ಇಲ್ಲ
16. ಗ್ರಾಮ ಪಂಚಾಯಿತಿಗಳಿಂದ ಪ್ರಕರಣ 234ರ ಮೇರೆಗೆ ಮಾಹಿತಿಯನ್ನು ತರಿಸಲಾಗುತ್ತಿದೆಯೇ ?	ಇಲ್ಲ
17. ಪ್ರಕರಣ 237 ರಂತೆ ಗ್ರಾಮ ಪಂಚಾಯತ್ ನಿರ್ಣಯಗಳನ್ನು ಅಮಾನತ್ತುಗೊಳಿಸಲಾಗಿದೆಯೇ ?	ಇಲ್ಲ
18. ಪ್ರಕರಣ 268 ರ ಮೇರೆಗೆ ಗ್ರಾಮ ಪಂಚಾಯತ್‌ನ್ನು ಜಿಲ್ಲಾ ಪಂಚಾಯತ್‌ನಿಂದ ರದ್ದುಗೊಳಿಸಲಾಗಿದೆಯೇ ?	ಇಲ್ಲ
19. ಗ್ರಾಮ ಪಂಚಾಯತ್ ಆದೇಶಗಳ ವಿರುದ್ಧ ಜಿಲ್ಲಾ ಪಂಚಾಯತ್ ಮೇಲ್ಮನವಿ ಸಲ್ಲಿಸಿದ ಬಗ್ಗೆ ಹಾಗೂ ಅದರ ನಿರ್ಣಯಗಳು	ಇಲ್ಲ
20. ಜಿಲ್ಲಾ ಪಂಚಾಯತ್‌ನಿಂದ ಹೊರಡಿಸಿದ ಪರಿಷ್ಕೃತ ಆದೇಶಗಳ ಸಂಖ್ಯೆ	ಇಲ್ಲ
21. ಸ್ಥಾಯಿ ಸಮಿತಿಗಳು ಮಾಡಿದ ತೀರ್ಮಾನದ ಮೇಲೆ ಪರಿಷ್ಕರಣೆಗೆ ಸಲ್ಲಿಸಿದ ಮನವಿಗಳ ಸಂಖ್ಯೆ	ಇಲ್ಲ
22. ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿಗಳ ತೀರ್ಮಾನದ ಮೇಲೆ ಜಿಲ್ಲಾ ಪಂಚಾಯತ್ ಬದಲಾವಣೆ ಮಾಡಿದ ಸಂಖ್ಯೆ	ಇಲ್ಲ

23. ಜಿಲ್ಲಾ ಪಂಚಾಯತ್ ರಚಿಸಿದ ಉಪನಿಬಂಧನೆಗಳ ಸಂಖ್ಯೆ ಹಾಗೂ ಸರ್ಕಾರದ ಪೂರ್ವಾನುಮತಿ ಪಡೆಯಲಾಗಿದೆಯೇ	ಇಲ್ಲ
24. ಗ್ರಾಮ ಪಂಚಾಯತ್‌ಗಳು ರಚಿಸಿದ ಉಪನಿಬಂಧನೆಗಳು ಹಾಗೂ ಜಿಲ್ಲಾ ಪಂಚಾಯತ್ ಪೂರ್ವಾನುಮತಿ ನೀಡಿರುವ ಸಂಖ್ಯೆ	ಇಲ್ಲ

2020–21ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ವಾರ್ಷಿಕ ಜಮಾ ಮತ್ತು ಖರ್ಚಿನ ವಿವರಗಳ ಘೋಷ್ವಾರೆ	
ಆರಂಭ ಶಿಲ್ಕು (ವಾರ್ಷಿಕ ಲೆಕ್ಕದಂತೆ)	**(ರೂ ಲಕ್ಷಗಳಲ್ಲಿ)**
1. 2019–20ನೇ ಸಾಲಿಗೆ	20721.77
ಸ್ವೀಕೃತಿ	
ಸರ್ಕಾರದಿಂದ ಬಂದ ಅನುದಾನಗಳು	47612.83
1. ಯೋಜನೆ	00.0
2. ಯೋಜನೇತರ	39800.41
3. ವಿಶೇಷ ಅನುದಾನಗಳು (ಲಿಂಕ್ ಪುಸ್ತಕ ಹೊರತು ಪಡಿಸಿ)	2926.28
4.ಕೇಂದ್ರ ಸರ್ಕಾರದಿಂದ ಚೆಕ್ ಮೂಲಕ ಪಡೆದ ಅನುದಾನ	4886.14
ವೆಚ್ಚಗಳು	
1. ಯೋಜನೆ : ಲಿಂಕ್ ಹೊರತು ಪಡಿಸಿ 2921.54 ಬ್ಯಾಂಕ್ 2947.80	5869.34
2. ಯೋಜನೇತರ	37029.62
ಅಂತಿಮ ಶಿಲ್ಕು ಅಮಾನತು ಲೆಕ್ಕಗಳು	
(31–03–2021ರಲ್ಲಿ ಇದ್ದಂತೆ) ವಾರ್ಷಿಕ ಲೆಕ್ಕದಂತೆ	22907.71

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ 2020–21ನೇ ಸಾಲಿಗೆ ಜಿಲ್ಲಾ ಪಂಚಾಯತ್ ನಿಧಿ ಸ್ಥಬ್ದ ಚಿತ್ರವನ್ನು ನಿರ್ಮಿಸಲು		
ಕ್ರ.ಸಂ.	ವಿವರ	ಮೊತ್ತ (ರೂ. ಲಕ್ಷಗಳಲ್ಲಿ)
	ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ 2019–20ನೇ ಸಾಲಿಗೆ	
1.	ಜಿಲ್ಲಾ ಪಂಚಾಯತ್ ನಿಧಿ ಸ್ಥಬ್ದ ಚಿತ್ರವನ್ನು ನಿರ್ಮಿಸಲು ಕಾರ್ಯಪಾಲಕ ಅಭಿಯಂತರರು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ, ಹಾಸನ ಇವರಿಗೆ	1.00

*****

ಜಿಲ್ಲಾ ಪಂಚಾಯತ್, ಹಾಸನ.
ಅಭಿವೃದ್ಧಿ ಶಾಖೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾದ ವಿವರ

- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2020–21ನೇ ಸಾಲಿನಲ್ಲಿ ನಗದಿಪಡಿಸಲಾದ 55.00 ಲಕ್ಷ ಮಾನವ ದಿನಗಳ ಗುರಿಗೆ 53.63 ಲಕ್ಷ ಮಾನವ ದಿನಗಳನ್ನು ಸೃಜನೆ ಶೇ. 97.50ರಷ್ಟು ಪ್ರಗತಿ ಸಾಧಿಸಲಾಗಿದೆ
- ಆರ್ಥಿಕ ರೂ.26520.65 ಲಕ್ಷಗಳ ಗುರಿಗೆ ರೂ. 190003.83 ಲಕ್ಷಗಳಷ್ಟು ವೆಚ್ಚ ಭರಿಸಿ ಶೇ 71.65 ರಷ್ಟು ಪ್ರಗತಿ ಸಾಧಿಸಲಾಗಿದೆ.
- ಪರಿಶಿಷ್ಟ ಜಾತಿ/ಪಂಗಡಗಳ 329333 ವಾರ್ಷಿಕ ಮಾನವ ದಿನಗಳ ಗುರಿಗೆ 692408 ಮಾನವ ದಿನಗಳು ಸೃಜನೆ ಮಾಡಲಾಗಿ ಶೇ.240.28 ರಷ್ಟು ಪ್ರಗತಿ ಸಾಧಿಸಲಾಗಿದೆ.
- ಮಹಿಳೆಯರಿಂದ 2580614 ಮಾನವ ದಿನಗಳು ಸೃಜನೆಮಾಡಲಾಗಿದೆ.
- 13447 ವೈಯಕ್ತಿಕ ಫಲಾನುಭವಿಗಳಿಗೆ ವಿವಿಧ ಚಟುವಟಿಕೆಗಳಡಿ ಕೃಷಿ ಅರಣ್ಯ, ತೋಟಗಾರಿಕೆ ಬೆಳೆಗಳಾದ ತೆಂಗು, ಮಾವು ದಾಳಿಂಬೆ ಕಾಳು ಮೆಣಸು, ಕೃಷಿ ಇಲಾಖೆಯಡಿ ಬದು ನರ್ಮಾಣ, ಕೃಷಿಹೊಂಡ, ಕಾಮಗಾರಿಗಳನ್ನು ಹಾಗೂ ಗ್ರಾಮ ಪಂಚಾಯಿತಿಗಳಿಂದ ಕೊಟ್ಟಿಗೆ ನರ್ಮಾಣ, ವಸತಿ ಯೊಜನೆಯ ಅರ್ಹ ಫಲಾನುಭವಿಗಳಿಗೆ ನರೇಗಾ ಒಗ್ಗೂಡಿಸುವಿಕೆಯೊಂದಿಗೆ 90 ಮಾನವ ದಿನಗಳ ಕೂಲಿ ನೀಡಲಾಗಿದೆ.
- ಸಮುದಾಯ ಕಾಮಗಾರಿಗಳಡಿ 44 ಕೊಳವೆಬಾವಿ ಮರುಪೂರಣ ಘಟಕ, 1793 ನಮ್ಮೂರಕೆರೆ ಅಭಿವೃದ್ಧಿ, 199 ಹೊಲಗಳಿಗೆ ಹೋಗುವ ರಸ್ತೆಗಳನ್ನು ಅನುಷ್ಠಾನ ಮಾಡಲಾಗಿದೆ.
- ರಾಜೀವ್‌ಗಾಂಧಿ ವಸತಿ ನಗಮದಿಂದ ಅನುಷ್ಠಾನಗೊಳಿಸುವ ವಸತಿ ಯೋಜನೆಯ 919 ವೈಯಕ್ತಿಕ ಫಲಾನುಭವಿಗಳಿಗೆ 90 ಮಾನವ ದಿನಗಳ ಗುರಿಯಂತೆ 63308 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ.
- ಅನುಷ್ಠಾನ ಇಲಾಖೆಗಳಾದ ಕೃಷಿ ಇಲಾಖೆಯಿಂದ ಕೃಷಿ ಹೊಂಡ , ಬದು ನರ್ಮಾಣ ಕಾಮಗಾರಿಗಳನ್ನು ಅನುಷ್ಠಾನ ಮಾಡಿ 760587 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ.
- ತೋಟಗಾರಿಕೆ ಇಲಾಖೆಯಿಂದ ತೆಂಗು ಮಾವು ಸಪೋಟ ದಾಳಿಂಬೆ, ಕಾಳು ಮೇಣಸು ಕಾಮಗಾರಿಗಳನ್ನು ಅನುಷ್ಠಾನ ಮಾಡಿ 873870 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ.
- ಅರಣ್ಯ ಇಲಾಖೆಯಿಂದ ವೈಯಕ್ತಿ ಫಲಾನುಭವಿಗಳ ಜಮೀನಿನಲ್ಲಿ ಅರಣ್ಯೀಕರಣ ಹಾಗೂ ರಸ್ತೆ ಬದಿ ನೇಡು ತೋಪು ಕಾಮಗಾರಿಗಳನ್ನು ಅನುಷ್ಠಾನ ಮಾಡಿ 270636 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ.
- ರೇಷ್ಮೆ ಇಲಾಖೆಯಿಂದ ವೈಯಕ್ತಿ ಫಲಾನುಭವಿಗಳ ಜಮೀನಿನಲ್ಲಿ ರೇಷ್ಮೆ ಬೆಳೆ ಕಾಮಗಾರಿಗಳನ್ನು ಅನುಷ್ಠಾನ ಮಾಡಿ 59810 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ.

******

ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮ

2020–21ನೇ ಸಾಲಿನ ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮದಡಿ ಈ ಜಿಲ್ಲೆಗೆ 325 ಸ್ಥಾವರಗಳ ನಿರ್ಮಾಣದ ಭೌತಿಕ ಗುರಿಯನ್ನು ಸರ್ಕಾರ ನಿಗಧಿಪಡಿಸಿರುತ್ತದೆ. ಒಂದು ಸ್ಥಾವರ ನಿರ್ಮಿಸಲು ಸುಮಾರು ರೂ. 28000/–, 30000/–ರ ವರೆಗೆ ವೆಚ್ಚವಾಗುತ್ತಿದ್ದು, ಇದರಲ್ಲಿ ಪ್ರತಿ ಸ್ಥಾವರಕ್ಕೆ ಕೇಂದ್ರ ಸರ್ಕಾರದಿಂದ ರೂ. 12000/– ಮಾತ್ರ ಸಹಾಯಧನ ದೊರೆಯುತ್ತಿದ್ದು, ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡಿದವರಿಗೆ ರೂ. 1000/– ಗಳು ಹೆಚ್ಚುವರಿಯಾಗಿ ಸಹಾಯಧನ ದೊರೆಯುತ್ತಿದೆ. 2020–21ನೇ ಸಾಲಿನಲ್ಲಿ ರಾಜ್ಯ ಸಹಾಯಧನ ಲಭ್ಯವಾಗದೆ ಇರುವ ಕಾರಣ, ಫಲಾನುಭವಿಗಳು ಪ್ರತಿ ಘಟಕಕ್ಕೆ ಸುಮಾರು 16000–18000/– ವೆಚ್ಚಮಾಡಿ ಸ್ಥಾಪರ ನಿರ್ಮಿಸಿಕೊಳ್ಳಬೇಕಾಗಿದ್ದರಿಂದ ಯಾವ ಫಲಾನುಭವಿಯು ಸ್ಥಾವರ ನಿರ್ಮಿಸಿಕೊಳ್ಳಲು ಮುಂದೆ ಬಂದಿರುವುದಿಲ್ಲ. ಆದುದರಿಂದ 2020–21ನೇ ಸಾಲಿನಲ್ಲಿ ಭೌತಿಕ ಪ್ರಗತಿಯಾಗಿರುವುದಿಲ್ಲ.

ಅಜೀವಿಕಾ ಗ್ರಾಮೀಣ ಎಕ್ಸ್‌ಪ್ರೆಸ್ ಯೋಜನೆಯಡಿ ಜಿಲ್ಲೆಯ 01 ಗ್ರಾಮ ಪಂಚಾಯಿತಿಗೆ ವಾಹನ ಖರೀದಿಗಾಗಿ ರೂ. 8.5 ಲಕ್ಷ ಬಿಡುಗಡೆಯಾಗಿ ವಾಹನ ಖರೀದಿಯಾಗಿರುತ್ತದೆ.

*****

ಯೋಜನಾ ಶಾಖೆ

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (20 ಅಂಶಗಳು ಸೇರಿದಂತೆ)

ಮಾಸಿಕ ಕೆ.ಡಿ.ಪಿ ಸಭೆಯನ್ನು ಮಾನ್ಯ ಅಧ್ಯಕ್ಷರು ಜಿಲ್ಲಾ ಪಂಚಾಯತ್, ಹಾಸನ ಇವರ ಅಧ್ಯಕ್ಷತೆಯಲ್ಲಿ ಮತ್ತು ತ್ರೈಮಾಸಿಕ ಕೆ.ಡಿ.ಪಿ ಸಭೆಯನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶದಂತೆ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಮಾಸಿಕ ಮತ್ತು ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲಾಗುತ್ತದೆ. ಕಡಿಮೆ ಪ್ರಗತಿ ಸಾಧಿಸಿರುವ ಇಲಾಖೆಗಳಿಗೆ ಉತ್ತಮ ಪ್ರಗತಿ (ಅಭಿವೃದ್ಧಿ) ಸಾಧಿಸಲು ಸೂಚಿಸಲಾಗುತ್ತಿದೆ.

ಮಾಸಿಕ ಬಹುಮಟ್ಟದ ವರದಿ (MMR)

ರಾಜ್ಯ ಸರ್ಕಾರದಿಂದ 2019–20ನೇ ಸಾಲಿನಲ್ಲಿ ಜಿಲ್ಲಾ ವಲಯಕ್ಕೆ ಸಂಬಂಧಿಸಿದ ಅನುದಾನ ವಿವರಗಳು ಬಿಡುಗಡೆಯಾದ ಕೂಡಲೇ ವಿವಿಧ ಇಲಾಖೆಗಳೊಡನೆ ಕೂಲಂಕುಷವಾಗಿ ಚರ್ಚೆ ಮಾಡಲಾಯಿತು. ಅನುಮೋದನೆಯಾದ ಯೋಜನೆಯನ್ನು ಅನುಷ್ಠಾನ ಮಾಡಲು ತಿಂಗಳುವಾರು ಆರ್ಥಿಕ ಮತ್ತು ಭೌತಿಕ ಗುರಿಯನ್ನು ನಿಗಧಿಪಡಿಸಿ ಯೋಜನಾ ಶಾಖೆಗೆ ಸೂಚಿಸಿರುವ (MPIC) ನಮೂನೆಯಲ್ಲಿ ಮಾಹಿತಿಯನ್ನು ಕಳುಹಿಸಲು ಆಯಾ ಇಲಾಖೆಗಳಿಗೆ ಮಾರ್ಗದರ್ಶನ ನೀಡಲಾಯಿತು. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖೆಗಳು (MPIC) ವರದಿಗಳನ್ನು ಆನ್‌ಲೈನ್ ನಲ್ಲಿ ಡಿ.ಎಸ್.ಎಸ್. ವೆಬ್‌ಸೈಟ್‌ನಲ್ಲಿ ಪರಿಶೀಲಿಸಿ ಕ್ರೋಢೀಕರಿಸಿದ ವರದಿಯನ್ನು ಪ್ರತಿ ಮಾಹೆ ಯೋಜನಾ ವಿಭಾಗ, ಬೆಂಗಳೂರು ರವರಿಗೆ ಕಳುಹಿಸುತ್ತಿವೆ.

<u>ಜಿಲ್ಲಾ ಯೋಜನಾ ಸಮಿತಿ :</u>

ಕರ್ನಾಟಕ ಸರ್ಕಾರದ ಸುತ್ತೋಲೆಯಂತೆ ದಿನಾಂಕ : **25–05–2017** ರಂದು ಹಾಸನ ಜಿಲ್ಲೆಯಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಿದ್ದು ಅದರ ರಚನೆ ಈ ಕೆಳಕಂಡಂತಿರುತ್ತದೆ.

1. ಜಿಲ್ಲೆಯ ಉಸ್ತುವಾರಿ ಸಚಿವರು	ಅಧ್ಯಕ್ಷರು
2. ಜಿಲ್ಲಾ ಪಂಚಾಯತ್ ಅಧ್ಯಕ್ಷರು	ಸದಸ್ಯರು
3. 57 ಜನ ಜಿಲ್ಲಾ ಪಂಚಾಯಿತಿ ಸದಸ್ಯರು	ಸದಸ್ಯರು
4. 15 ಜನಪ್ರತಿನಿಧಿಗಳು	ಸದಸ್ಯರು
5. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು	ಕಾರ್ಯದರ್ಶಿಗಳು
6. ಜಿಲ್ಲೆಯ ಎಲ್ಲಾ ವಿಧಾನಸಭಾ ಸದಸ್ಯರು	ಖಾಯಂ ಆಹ್ವಾನಿತರು
7. ವಿಧಾನಪರಿಷತ್ ಸದಸ್ಯರು	ಖಾಯಂ ಆಹ್ವಾನಿತರು
8. ಜಿಲ್ಲಾಧಿಕಾರಿಗಳು	ಖಾಯಂ ಆಹ್ವಾನಿತರು

****

ಜಿಲ್ಲಾ ಯೋಜನಾ ಸಮಿತಿ

ಕರ್ನಾಟಕ ಸರ್ಕಾರ ಸುತ್ತೋಲೆಯಂತೆ ದಿನಾಂಕ : 25–05–2017ರಂದು ಹಾಸನ ಜಿಲ್ಲೆಯಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಿದ್ದು ಅದರ ರಚನೆ ಈ ಕೆಳಕಂಡಂತಿರುತ್ತದೆ.

1	ಸಂಬಂಧಪಟ್ಟ ಜಿಲ್ಲೆಯ ಉಸ್ತುವಾರಿ ಸಚಿವರು	ಅಧ್ಯಕ್ಷರು
2	ಜಿಲ್ಲಾ ಪಂಚಾಯಿತಿ ಅಧ್ಯಕ್ಷರು	1 ಸದಸ್ಯರು
3	ತಾಲ್ಲೂಕು ಯೋಜನೆ ಹಾಗೂ ಅಭಿವೃದ್ಧಿ ಸಮಿತಿಯ ಪದನಿಮಿತ್ತ ಕೋ ಚೇರ್‌ಪರ್ಸನ್ ಆಗಿರುವ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು	8 ಸದಸ್ಯರು
4	ಜಿಲ್ಲೆಯಲ್ಲಿನ ಪ್ರತಿಯೊಂದು ತಾಲ್ಲೂಕಿನಿಂದ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ವೈಸ್ ಚೇರ್‌ಪರ್ಸನ್ (ಗ್ರಾಮ ಪಂಚಾಯತಿಯ ಮೂಲಕ ಚುನಾಯಿತರಾದವರು)	8 ಸದಸ್ಯರು
5	ಜಿಲ್ಲೆಯಲ್ಲಿರುವ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನಸಂಖ್ಯೆಯ ನಡುವಣ ಪ್ರಮಾಣಾನುಸಾರದಂತೆ ಜಿಲ್ಲೆಯಲ್ಲಿರುವ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಪಟ್ಟಣ ಪಂಚಾಯತ್, ಸದಸ್ಯರುಗಳ ಮತ್ತು ಜಿಲ್ಲೆಯಲ್ಲಿರುವ ಪೌರನಿಗಮಗಳ ಮತ್ತು ಪುರಸಭಾ ಪರಿಷತ್‌ಗಳ ಕೌನ್ಸಿಲ್‌ರಗಳ ಪೈಕಿ ಗೊತ್ತುಪಡಿಸಿದ ವಿಧಾನದಲ್ಲಿ ಚುನಾಯಿತರಾದ, ಸರ್ಕಾರವು ನಿರ್ದಿಷ್ಟ ಪಡಿಸಬಹುದಾದಂಥ ಸಮಿತಿಯ ಸದಸ್ಯರುಗಳ ಒಟ್ಟು ಸಂಖ್ಯೆ ಐದನೇ ನಾಲ್ಕು ಭಾಗಕ್ಕಿಂತ ಕಡಿಮೆ ಇರದಂತಹ ಸಂಖ್ಯೆಯಲ್ಲಿರುವ ವ್ಯಕ್ತಿಗಳನ್ನು ಹೊಂದಿರತಕ್ಕದ್ದು.	57 ಗ್ರಾಮೀಣ 15 ನಗರ ಸದಸ್ಯರು

ಜಿಲ್ಲಾ ಪಂಚಾಯತ್, ಹಾಸನ

2020–21ನೇ ಸಾಲಿನ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯಿತಿ/ಗ್ರಾಮ ಪಂಚಾಯಿತಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಿರುವ ಅನುದಾನಗಳ ವಿವರಗಳು

ಕ್ರ ಸಂ	ಯೋಜನೆಯ ವಿವರಗಳು	ರೂ. ಲಕ್ಷಗಳಲ್ಲಿ							
		ನಿಗಧಿಯಾದ ಅನುದಾನ				ಎಸ್.ಸಿ.ಪಿ	ಟಿ.ಎಸ್.ಪಿ	ವೇತನ	ವೇತನೇತರ
		ಜಿ.ಪಂ.	ತಾ.ಪಂ.	ಗ್ರಾ.ಪಂ.	ಒಟ್ಟು				
1.	2059–ಲೋಕೋಪಯೋಗಿ ಇಲಾಖೆ	774.87	0.00	0.00	774.87	0.00	0.00	585.94	188.93
2.	2202–ಪ್ರಾಥಮಿಕ ಮತ್ತು ಸೆಕೆಂಡರಿ ಸಾಮಾನ್ಯ ಶಿಕ್ಷಣ	14109.97	61397.27	0.00	75507.24	1345.09	196.16	60632.34	14874.90
3.	2202–ಲೋಕ ಶಿಕ್ಷಣ	13.49	0.00	0.00	13.49	0.00	0.00	0.00	13.49
4.	2205–ಯುವಜನ ಸೇವೆಗಳು ಮತ್ತು ಕ್ರೀಡೆಗಳು	116.06	0.00	0.00	116.06	0.00	0.00	8.59	107.47
5.	2210ವೈದ್ಯಕೀಯ ಮತ್ತು ಜನ ಆರೋಗ್ಯ ಸೇವೆಗಳು ಗ್ರಾಮೀಣ	7001.65	138.16	0.00	7139.81	0.00	0.00	5260.02	1879.79
6.	2210–ಭಾರತೀಯ ವೈದ್ಯ ಪದ್ಧತಿ (ಆಯುಷ್)	827.64	72.28	0.00	899.92	0.00	0.00	647.54	232.38
7.	2211–ಕುಟುಂಬ ಕಲ್ಯಾಣ ಕಾರ್ಯಕ್ರಮಗಳು	3280.90	0.00	0.00	3280.90	0.00	0.00	2442.84	836.06
8.	2215–ಗ್ರಾಮೀಣ ನೀರು ಪೂರೈಕೆ	0.00	25.00	100.24	125.24	0.00	0.00	0.00	125.24
9.	2225–ಸಮಾಜ ಕಲ್ಯಾಣ	3033.65	2179.58	0.00	5213.23	0.00	0.00	1155.13	4058.10
10.	2225–ವಿಶೇಷ ಘಟಕ ಯೋಜನೆ	0.00	0.00	0.00	0.00	0.00	0.00	0.00	0.00
11.	2225–ಗಿರಿಜನ ಉಪ ಯೋಜನೆ	0.00	12.00	0.00	12.00	0.00	12.00	0.00	12.00
12.	2225–03–ಹಿಂದುಳಿದ ವರ್ಗಗಳ ಕಲ್ಯಾಣ	5027.54	53.21	0.00	5080.75	0.00	0.00	987.27	4093.48
13.	2225–ಅಲ್ಪಸಂಖ್ಯಾತರ ಕಲ್ಯಾಣ	350.51	0.00	0.00	350.51	0.00	0.00	48.12	302.39
14.	2235–ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ	125.25	5529.41	0.00	5654.66	0.00	0.00	412.68	5241.98
15.	2235–ಅಂಕವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ	38.00	0.00	0.00	38.00	0.00	0.00	0.00	38.00
16.	2236–ಪೌಷ್ಟಿಕ ಆಹಾರ	0.00	4008.00	0.00	4008.00	1106.00	111.00	0.00	4008.00
17.	2435–ಕೃಷಿ ಇಲಾಖೆ	430.38	387.39	0.00	8117.77	0.00	0.00	718.46	99.31
18.	2435–ತೋಟಗಾರಿಕೆ ಇಲಾಖೆ	644.37	2.00	0.00	646.37	1.00	0.50	534.78	111.59
19.	2402– ಭೂಸಾರ ಮತ್ತು ಜಲ ಸಂರಕ್ಷಣೆ	145.59	1.22	0.00	146.81	0.00	0.00	132.73	14.08
20.	2403–ಪಶು ಸಂಗೋಪನೆ	408.78	2942.40	0.00	3351.18	0.00	0.00	2940.93	410.25
21.	2405–ಮೀನುಗಾರಿಕೆ	219.74	0.00	0.00	219.84	3.00	2.00	114.01	105.83
22.	2406–ಅರಣ್ಯ ಮತ್ತು ವನ್ಯ ಜೀವನ	771.58	0.00	0.00	771.58	0.00	0.00	210.40	561.18
23.	2425–ಸಹಕಾರ	12.00	18.41	0.00	30.41	18.41	0.00	0.00	30.41
24.	2501–ಗ್ರಾಮೀಣ ಅಭಿವೃದ್ಧಿ ವಿಶೇಷ ಕಾರ್ಯಕ್ರಮಗಳು	0.00	0.00	0.00	0.00	0.00	0.00	0.00	0.00
25.	2515–ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು	424.70	3737.26	0.00	4161.96	0.00	0.00	3514.67	647.29
26.	2702–ಸಣ್ಣ ನೀರಾವರಿ	337.06	0.00	0.00	337.06	0.00	0.00	0.00	337.06
27.	2810–ಗ್ರಾಮೀಣ ಇಂದನ ಕಾರ್ಯಕ್ರಮಗಳು	0.00	0.00	0.00	0.00	0.00	0.00	0.00	0.00
28.	2851–ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮಗಳು	70.77	0.00	0.00	70.77	1.16	0.00	34.41	36.36
29.	2851–ರೇಷ್ಮೆ	392.61	5.00	0.00	397.61	0.59	0.44	146.77	250.84
30.	2851–ಕೈ ಮಗ್ಗ (ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮಗಳು)	28.48	0.00	0.00	28.48	0.50	0.50	15–96	12.52
31.	2852–ಕೈಗಾರಿಕೆಗಳು (ಉದ್ಯಮಗಳು)	2.67	0.00	0.00	2.67	0.00	0.00	0.00	2.67
32.	3054–ರಸ್ತೆ ಮತ್ತು ಸೇತುವೆಗಳು	0.00	0.00	0.00	0.00	0.00	0.00	0.00	0.00
33.	3425–ವಿಜ್ಞಾನ ಮತ್ತು ಸಂಶೋಧನೆ	18.00	0.00	0.00	18.00	0.00	0.00	0.00	18.00
34.	3451–ಸಚಿವಾಲಯ ಆರ್ಥಿಕ ಸೇವೆಗಳು ಜಿಲ್ಲಾ ಘಟಕ	103.15	0.00	0.00	103.15	0.00	0.00	55.69	47.46
35.	3475–ಕೃಷಿ ಮಾರುಕಟ್ಟೆ	3.30	0.00	0.00	3.30	0.00	0.00	0.00	3.30
	ಜಿ.ಪಂ./ ತಾ.ಪಂ. ಕಾರ್ಯಕ್ರಮಗಳ ಒಟ್ಟು ಅನುದಾನ	**38712.81**	**80508.59**	**100.24**	**119321.64**	**2475.75**	**322.60**	**80619.28**	**38702.36**

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ

ಯೋಜನೆ ಉದ್ದೇಶ:

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆಯಡಿ 2013–14ನೇ ಸಾಲಿನಿಂದ ಎನ್.ಆರ್.ಎಲ್.ಎಂ. ಯೋಜನೆ ಅನುಷ್ಠಾನದಲ್ಲಿದ್ದು, ಸದರಿ ಹೊಸ ಯೋಜನೆಯು ಕರ್ನಾಟಕದಲ್ಲಿ ಸಂಜೀವಿನಿ ಎಂಬ ಹೆಸರಿನಲ್ಲಿ ಅನುಷ್ಠಾನಗೊಳ್ಳಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಸಬಲೀಕರಣಕ್ಕೆ ಹೆಚ್ಚು ಹೊತ್ತು ನೀಡಿದ್ದು, ಎನ್.ಆರ್.ಎಲ್.ಎಂ. ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ರಚಿತವಾದ ಮಹಿಳಾ ಸ್ವಸಹಾಯ ಸಂಘಗಳನ್ನು ಜಿಲ್ಲೆಯ 8 ತಾಲ್ಲೂಕಿನ 267 ಗ್ರಾಮ ಪಂಚಾಯಿತಿಯಲ್ಲಿ 11925 ಮಹಿಳಾ ಸ್ವ ಸಹಾಯ ಗುಂಪುಗಳನ್ನು ಎನ್.ಆರ್.ಎಂ.ಎಲ್.ಎಂಐಎಸ್ ತಂತ್ರಾಂಶದಲ್ಲಿ ಅಳವಡಿಸಲಾಗಿದೆ.

2020–21ನೇ ಸಾಲಿನಲ್ಲಿ ಎನ್.ಆರ್.ಎಲ್.ಎಂ. ಯೋಜನೆಯಡಿ 146 ಗ್ರಾಮಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ಸಮುದಾಯ ಬಂಡವಾಳ ನಿಧಿಗಾಗಿ 1513.35 ಲಕ್ಷಗಳು ಬಿಡುಗಡೆಯಾಗಿದ್ದು, ಒಕ್ಕೂಟದ ವ್ಯಾಪ್ತಿಯಲ್ಲಿ ಆದಾಂಯೋತ್ಪನ್ನ ಚಟುವಟಿಕೆಗಳನ್ನು ಒಕ್ಕೂಟಗಳ ಮೂಲಕ ಸ್ವಸಹಾಯ ಗುಂಪುಗಳಿಗೆ ನೀಡಿ ಅನುಷ್ಠಾನಗೊಳಿಸಲಾಗುತ್ತಿದೆ.

2020–21ನೇ ಸಾಲಿನಲ್ಲಿ ಎನ್.ಆರ್.ಎಲ್.ಎಂ. ಅಭಿಯಾನದಡಿ ಒಕ್ಕೂಟಗಳ ಆಡಳಿತಾತ್ಮಕ ವೆಚ್ಚಕ್ಕಾಗಿ 267 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ತಲಾ ರೂ. 25000/– ಗಳಂತೆ ಆರಂಭಿಕ ನಿಧಿಯನ್ನು ಬಿಡುಗಡೆ ಮಾಡಿ ತನ್ಮೂಲಕ ಒಕ್ಕೂಟಗಳ ಕಾರ್ಯನಿರ್ವಹಣೆಗೆ ದಾರಿ ಮಾಡಿಕೊಟ್ಟಿದೆ.

ಅಜೀವಿಕಾ ಗ್ರಾಮೀಣ ಎಕ್ಸ್‌ಪ್ರೆಸ್ ಯೋಜನೆಯಡಿ ಜಿಲ್ಲೆಯ 01 ಗ್ರಾಮ ಪಂಚಾಯಿತಿಗೆ ವಾಹನ ಖರೀದಿಗಾಗಿ ರೂ. 8.5 ಲಕ್ಷ ಬಿಡುಗಡೆಯಾಗಿ ವಾಹನ ಖರೀದಿಯಾಗಿರುತ್ತದೆ.

*****

ಸಂ : ಗ್ರಾಅಪ 41 ಇತರೆ 2010

ಕರ್ನಾಟಕ ಸರ್ಕಾರ

ಕರ್ನಾಟಕ ಸಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ
ಬೆಂಗಳೂರು. ದಿನಾಂಕ : **30–05–2011.**

ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ ಗ್ರಾಅಪ 41 ಇತರೆ 2010, ದಿನಾಂಕ : 16–6–2010ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಮಾಹಿತಿ ಹಕ್ಕು ಅಧಿನಿಯಮ–2005ರ ಅನುಷ್ಠಾನದ ಮೇಲ್ವಿಚಾರಣೆಗಾಗಿ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತು ಪಂಚಾಯತ್ ರಾಜ್ ಇಲಾಖೆ, ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ 5628 ಗ್ರಾಮ ಪಂಚಾಯಿತಿಗಳು, 176 ತಾಲ್ಲೂಕು ಪಂಚಾಯಿತಿಗಳು ಹಾಗೂ 30 ಜಿಲ್ಲಾ ಪಂಚಾಯಿತಿಗಳಿದ್ದು, ಸದರಿ ಸಾರ್ವಜನಿಕ ಪ್ರಾಧಿಕಾರಗಳು, ಸಾರ್ವಜನಿಕರು ಮಾಹಿತಿ ಹಕ್ಕು ಅಧಿನಿಯಮ–2005ರ ಅಡಿಯಲ್ಲಿ ಬಯಸುವ ಮಾಹಿತಿಯನ್ನು ಒದಗಿಸುವುದು ಆಯಾಯ ಪ್ರಾಧಿಕಾರಗಳ ಜವಾಬ್ದಾರಿಯಾಗಿದ್ದು, ಈ ಪ್ರಕ್ರಿಯೆಯಲ್ಲಿ ಯಾವುದೇ ಲೋಪಗಳು ಕಂಡುಬಂದಲ್ಲಿ, ಆ ಬಗ್ಗೆ ಮೇಲ್ವಿಚಾರಣೆ ವಹಿಸಿ ಪ್ರತಿ ಪ್ರಕರಣದಲ್ಲೂ ರಾಜ್ಯ ಮಾಹಿತಿ ಆಯೋಗದ ಮುಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೋಡಲ್ ಅಧಿಕಾರಿಯಾಗಿ ನೇಮಕಗೊಂಡಿರುವ ಉಪ ಕಾರ್ಯದರ್ಶಿ (ಆಡಳಿತ), ಇವರೊಬ್ಬರೇ ಹಾಜರಾಗಿ ಲೋಪದೋಷಗಳ ಬಗ್ಗೆ ವಿವರಣೆ ನೀಡುವುದು ಕಷ್ಟಸಾಧ್ಯವಾಗಿರುವುದರಿಂದ, ಜಿಲ್ಲಾ ಮಟ್ಟದಲ್ಲಿ ಆಯಾಯ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ), ಇವರನ್ನು ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯಾಗಿ ನೇಮಿಸಿದೆ. ಸದರಿ ನೋಡಲ್ ಅಧಿಕಾರಿಯು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

1. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ / ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪಟ್ಟಯನ್ನು ನಿರ್ವಹಿಸುವುದು/ಕಾಲಕಾಲಕ್ಕೆ ಕಾಲೋಚಿತ (update) ಪ್ರಕಟಿಸುವುದು.
2. ಕರ್ನಾಟಕ ಮಾಹಿತಿ ಆಯೋಗಕ್ಕೆ ವಾರ್ಷಿಕ ವರದಿ ತಯಾರಿಸಲು ಬೇಕಾಗುವ ಎಲ್ಲಾ ಮಾಹಿತಿಯನ್ನು ಸರ್ಕಾರದ ಮಾಹಿತಿಯನ್ನು ಸರ್ಕಾರದ ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆಗೆ ಸಕಾಲದಲ್ಲಿ ಒದಗಿಸುವುದು.
3. ಮಾಹಿತಿ ಕೋರಿ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಸ್ವೀಕೃತವಾಗುವ ಅರ್ಜಿಗಳ ವಿಲೇವಾರಿಯ ಮೇಲ್ವಿಚಾರಣೆ ಮಾಡುವುದು ಹಾಗೂ ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯ ನಿಗದಿತ ಕಾಲಾವಧಿಯ ಒಳಗೆ ಅರ್ಜಿದಾರರು ಕೋರುವ ಮಾಹಿತಿಯನ್ನು ಒದಗಿಸುವಂತೆ ನೋಡಿಕೊಳ್ಳುವುದು.
4. ಸಾರ್ವಜನಿಕ ಮಾಹಿತಿ ಹಕ್ಕು ಅಧಿನಿಯಮ – 2005ರ ಅಡಿಯಲ್ಲಿ ಮಾಹಿತಿ ಕೋರಿ ಸಲ್ಲಿಸುವ ಅರ್ಜಿಗಳ ವಿಲೇವಾರಿ ಸಂಬಂಧದಲ್ಲಿ ಕರ್ನಾಟಕ ಮಾಹಿತಿ ಆಯೋಗವು ನೀಡುವ ಸೂಚನೆ/ ನಿರ್ದೇಶನಗಳ ಅನುಪಾಲನೆ ಮಾಡುವ ದಿಸೆಯಲ್ಲಿ ಕ್ರಮವಹಿಸುವುದು ಹಾಗೂ ಆ ದಿಸೆಯಲ್ಲಿ ಸಂಬಂಧಪಟ್ಟವರಿಗೆ ಸೂಕ್ತ ಸೂಚನೆಗಳನ್ನು ನೀಡುವುದು.



ಕರ್ನಾಟಕ ಸರ್ಕಾರ

ಕರ್ನಾಟಕ ಸಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ
ಬೆಂಗಳೂರು. ದಿನಾಂಕ : 30–05–2011.

ಸಂ : ಗ್ರಾಅಪ 41 ಇತರೆ 2010

ಅಧಿಸೂಚನೆ

2005ರ ಮಾಹಿತಿ ಹಕ್ಕು ಅಧಿನಿಯಮ (ಕೇಂದ್ರ ಕಾಯ್ದೆ ಸಂಖ್ಯೆ 22)ರ ಸೆಕ್ಷನ್ 5(1) ಸಹಮಾಚನ ಕಲಂ 19(1)ರಡಿಯಲ್ಲಿ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಕಾಲೋಚಿತಗೊಂಡ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹಾಗೂ ಮೇಲ್ಮನವಿ ಪ್ರಾಧಿಕಾರಗಳ ವಿವರಗಳನ್ನು ಈ ಮೂಲಕ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ನೇಮಕ ಮಾಡಲಾಗಿರುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ, ಅವರಿಂದ ಪಡೆಯಬಹುದಾದ ಮಾಹಿತಿ ಹಾಗೂ ಮೇಲ್ಮನವಿ :

ಕ್ರ. ಸಂ	ವಿಭಾಗದ ಹೆಸರು	ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ	ಪಡೆಯಬಹುದಾದ ಮಾಹಿತಿಯ ವಿವರ	ಮೇಲ್ಮನವಿ ಪ್ರಾಧಿಕಾರದ ವಿವರ
1.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಛೇರಿ	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಸಹಾಯಕ	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಛೇರಿಗೆ ಸಂಬಂಧಿಸಿದ ವಿವರಗಳು	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತಕಾರ್ಯದರ್ಶಿ
2.	ಆಡಳಿತ ವಿಭಾಗ	I) ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಬಿ ಮತ್ತು ಸಿ)	ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ)ಗೆ ಸೇರಿದ ಅಧಿಕಾರಿಗಳ ಹಾಗೂ ಜಿಲ್ಲಾ ಪಂಚಾಯತ್ ಸೇವೆಗೆ ಸೇರಿದ ನೌಕರರ ಸೇವಾ ಹಾಗೂ ಇತರೆ ಸಂಬಂಧಪಟ್ಟ ವಿಷಯಗಳು	ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ–1)
		II) ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ)	ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ತಾಂತ್ರಿಕ ಹಾಗೂ ತಾಂತ್ರಿಕೇತರ ಅಧಿಕಾರಿ/ನೌಕರರ ಸೇವಾ ವಿಷಯಗಳು ಮತ್ತು ಇತರ ಸಾಮಾನ್ಯ ಹಾಗೂ ಸಂಬಂಧಪಟ್ಟ ವಿಷಯಗಳು	
3.	ಆಂತರಿಕ ಸಲಹೆಗಾರರ ವಿಭಾಗ	I) ಲೆಕ್ಕಾಧಿಕಾರಿ II) ಶಾಖಾಧಿಕಾರಿ	ಆಯವ್ಯಯ ತಯಾರಿಕೆ, ಹಣಕಾಸು ಬಿಡುಗಡೆ ಹಾಗೂ ಲೆಕ್ಕಪರಿಶೋಧನಾ ಆಂತರಿಕ ಲೆಕ್ಕಪರಿಶೋಧನಾ	ಆಂತರಿಕ ಆರ್ಥಿಕ ಸಲಹೆಗಾರರು

4.	ಗ್ರಾಮೀಣ ಮೂಲಭೂತ ಸೌಲಭ್ಯ ವಿಭಾಗ	I) ಉಪನಿರ್ದೇಶಕರು (ಗ್ರಾಮೀಣ ಮೂಲಭೂತ ಸೌಲಭ್ಯ)	ರಸ್ತೆ, ಸೇತುವೆ, ಸಣ್ಣ ನೀರಾವರಿ ಕಟ್ಟಡಗಳ ನಿರ್ಮಾಣಗಳ ಉಸ್ತುವಾರಿ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ಮುಖ್ಯ ಮಂತ್ರಿ ಗ್ರಾಮ ಸಡಕ್ ಯೋಜನೆ, ಯೋಜನೆಗಳು	ನಿರ್ದೇಶಕರು (ಗ್ರಾಮೀಣ ಮೂಲಭೂತ ಸೌಲಭ್ಯ–1)
		II) ಯೋಜನಾ ನಿರ್ದೇಶಕರು ಸುವರ್ಣ ಗ್ರಾಮೋದಯ)	ಸುವರ್ಣ ಗ್ರಾಮೋದಯ ಯೋಜನೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ	ನಿರ್ದೇಶಕರು (ಗ್ರಾಮೀಣ ಮೂಲಭೂತ ಸೌಲಭ್ಯ–2)
5.	ರಾಷ್ಟ್ರೀಯ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಮಿಷನ್	ಉಪ ನಿರ್ದೇಶಕರು ಹಾಗೂ ಸರ್ಕಾರದ ಪದನಿಮಿತ್ತ ಅಧೀನ ಕಾರ್ಯದರ್ಶಿ	ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳು	ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಮಿಷನ್
6.	ಪಂಚಾಯತ್ ರಾಜ್ ವಿಭಾಗ	I) ಸರ್ಕಾರದ ಅಧೀನ ಕಾರ್ಯದರ್ಶಿ (ಜಿಲ್ಲಾ ಪಂಚಾಯತ್) II) ಪೀಠಾಧಿಕಾರಿ (ಗ್ರಾಮ ಪಂಚಾಯತ್) III) ಮುಖ್ಯ ಸಂಪಾದಕರು ಕರ್ನಾಟಕ ವಿಕಾಸ	ಶಾಸನಬದ್ಧ ಅನುದಾನ ಬಿಡುಗಡೆ, ಪಂ.ರಾಜ್ ಸಂಸ್ಥೆಗಳ ಸುಧಾರಣೆಗೆ ಸಂಬಂಧಿಸಿದಂತೆ ಹಾಗೂ ಕರ್ನಾಟಕ ವಿಕಾಸಕ್ಕೆ ವಿಷಯಗಳು	ನಿರ್ದೇಶಕರು (ಪಂಚಾಯತ್ ರಾಜ್)
7.	ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ	ಉಪ ನಿರ್ದೇಶಕರು ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ	ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವರದಿ ಹಾಗೂ ಅಂಕಿ ಅಂಶಗಳು	ನಿರ್ದೇಶಕರು (ಯೋಜನಾ) ಉಸ್ತುವಾರಿ ಮತ್ತು ಮಾಹಿತಿ)
8.	ಸ್ವ ಉದ್ಯೋಗ ಕಾರ್ಯಕ್ರಮ ವಿಭಾಗ	ಜಂಟಿ ನಿರ್ದೇಶಕರು ಅಪರ ಮುಖ್ಯಸ್ಥರು (ಕಾರ್ಯಾಚರಣೆ) (ಕಾರ್ಯಾಚರಣೆ) ಜಂಟಿ ನಿರ್ದೇಶಕರು 1, 2 ಹಾಗೂ ಮುಖ್ಯ ಹಣಕಾಸು ಅಧಿಕಾರಿ	ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಜೀತ ಕಾರ್ಮಿಕರ ವಿಮುಕ್ತ ಮಹಿಳಾ ಸಬಲೀಕರಣ, ರಾಷ್ಟ್ರೀಯ ಗ್ರಾಮೀಣ ಜೀವನ ನಿರ್ವಹಣ ಮಿಷನ್	ನಿರ್ದೇಶಕರು (ಸ್ವಉದ್ಯೋಗ ಕಾರ್ಯಕ್ರಮ) ಕಾರ್ಯಕ್ರಮ)
9.	ಗ್ರಾಮ ಸ್ವರಾಜ್ ಯೋಜನಾ ವಿಭಾಗ	ಉಪಕಾರ್ಯದರ್ಶಿ(ಆಡಳಿತ) ಕಛೇರಿ ವ್ಯಸ್ಥಾಪಕರು, ತಾಲ್ಲೂಕು ಪಂಚಾಯಿತಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ	ನಂಜುಂಡಪ್ಪ ವರದಿ ಅನುಸಾರ 39 ತಾಲ್ಲೂಕುಗಳ 1343 ಗ್ರಾಮ ಪಂಚಾಯಿತಿಗಳ ಸಬಲೀಕರಣ ಸಾಮರ್ಥ್ಯ ಸೌಧ ಸಂಬಂಧಿಸಿದ ವಿಷಯ	ಮುಖ್ಯಸ್ಥರು (ಗ್ರಾಮ ಸ್ವರಾಜ್ ಯೋಜನೆ)
10.	ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನಾ ವಿಭಾಗ	ಜಂಟಿ ನಿರ್ದೇಶಕರು 1, 2 ಹಾಗೂ ಮುಖ್ಯ ಹಣಕಾಸು ಅಧಿಕಾರಿ	ಗ್ರಾಮೀಣ ಪ್ರದೇಶದ ಅಕುಶಲ ಕಾರ್ಮಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ಒದಗಿಸುವ	ನಿರ್ದೇಶಕರು (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ)
11.	ಜಿಲ್ಲಾ ಪಂಚಾಯಿತಿಗಳು	ಉಪಕಾರ್ಯದರ್ಶಿ (ಆಡಳಿತ)	ಜಿಲ್ಲಾ ಪಂಚಾಯಿತಿ ಪ್ರಕಾರ್ಯಗಳು ಹಾಗೂ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯ	ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ
12.	ತಾಲ್ಲೂಕು ಪಂಚಾಯಿತಿಗಳು	ಕಛೇರಿ ವ್ಯವಸ್ಥಾಪಕರು ತಾಲ್ಲೂಕು ಪಂಚಾಯಿತಿ	ತಾಲ್ಲೂಕು ಪಂಚಾಯಿತಿ ಪ್ರಕಾರ್ಯಗಳು ಹಾಗೂ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳು	ಕಾರ್ಯ ನಿರ್ವಾಹಕ ಅಧಿಕಾರಿ
13.	ಗ್ರಾಮ ಪಂಚಾಯಿತಿಗಳು	ಗ್ರಾಮ ಪಂಚಾಯಿತಿ ಕಾರ್ಯದರ್ಶಿ	ಗ್ರಾಮ ಪಂಚಾಯಿತಿ ಪ್ರಕಾರ್ಯಗಳು ಹಾಗೂ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯ	ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು

ಜಿಲ್ಲಾ ಪಂಚಾಯತ್, ಹಾಸನ.

ಸಂ.ಜಿ.ಪಂ. ಹಾ/ಅಭಿ(6)/ಮಾಹ/40/2012–13 ದಿನಾಂಕ : 29–5–2012.

ಅಧಿಕೃತ ಜ್ಞಾಪನ

ವಿಷಯ : ಮಾಹಿತಿ ಹಕ್ಕು ಅಧಿನಿಯಮ–2005ರಡಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ.

ಮಾಹಿತಿ ಹಕ್ಕು ಅಧಿನಿಯಮ–2005ರ ನಿಯಮ 5(1)ರಡಿಯಲ್ಲಿ ಕೆಳಕಂಡಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಮೇಲ್ಮನವಿ ಪ್ರಾಧಿಕಾರಗಳನ್ನು ನೇಮಕ ಮಾಡಿ ವಿವರಗಳನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಕ್ರ.ಸಂ.	ಸಾರ್ವಜನಿಕ ಮಾಹಿತಿ ಅಧಿಕಾರಿ	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಮೇಲ್ಮನವಿ ಪ್ರಾಧಿಕಾರ
1.	ಉಪ ಕಾರ್ಯದರ್ಶಿ (ಆಡಳಿತ) ಜಿಲ್ಲಾ ಪಂಚಾಯತ್, ಹಾಸನ	ಸಹಾಯಕ ಕಾರ್ಯದರ್ಶಿ (ಆಡಳಿತ) ಜಿಲ್ಲಾ ಪಂಚಾಯತ್, ಹಾಸನ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ
2.	ಉಪ ಕಾರ್ಯದರ್ಶಿ (ಅಭಿವೃದ್ಧಿ) ಜಿಲ್ಲಾ ಪಂಚಾಯತ್, ಹಾಸನ	ಸಹಾಯಕ ಕಾರ್ಯದರ್ಶಿ (ಅಭಿವೃದ್ಧಿ) ಜಿಲ್ಲಾ ಪಂಚಾಯತ್, ಹಾಸನ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ
3.	ಮುಖ್ಯ ಲೆಕ್ಕಾಧಿಕಾರಿ ಜಿಲ್ಲಾ ಪಂಚಾಯತ್, ಹಾಸನ	ಲೆಕ್ಕಾಧಿಕಾರಿ ಜಿಲ್ಲಾ ಪಂಚಾಯತ್, ಹಾಸನ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ
4.	ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ	ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ
5.	ಯೋಜನಾ ನಿರ್ದೇಶಕರು ಡಿ.ಆರ್.ಡಿ.ಎ ಕೋಶ ಜಿಲ್ಲಾ ಪಂಚಾಯತ್, ಹಾಸನ	ಸಹಾಯಕ ಯೋಜನಾ ಅಧಿಕಾರಿ ಡಿ.ಆರ್.ಡಿ.ಎ ಕೋಶ ಜಿಲ್ಲಾ ಪಂಚಾಯತ್, ಹಾಸನ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ

ಕೃಷಿ ಇಲಾಖೆ

ಹಾಸನ ಜಿಲ್ಲೆಯು ವಿವಿಧ ಹವಾಮಾನ ಮತ್ತು ಭೌಗೋಳಿಕ ಪ್ರದೇಶಗಳನ್ನು ಒಳಗೊಂಡಿದ್ದು, ಮುಖ್ಯವಾಗಿ ಮಲೆನಾಡು, ಅರೆಮಲೆನಾಡು ಹಾಗೂ ಬಯಲು ಪ್ರದೇಶಗಳನ್ನು ಒಳಗೊಂಡಿರುತ್ತದೆ. ಅಲ್ಲದೆ ಜಿಲ್ಲೆಯ ಹವಾಮಾನವು ಕೂಡ ಸಮಶೀತೋಷ್ಣವಾಗಿರುವುದರಿಂದ ಹವಾಮಾನಕ್ಕನುಗುಣವಾಗಿ ವಿವಿಧ ರೀತಿಯ ಬೆಳೆಗಳನ್ನು ಅಂದರೆ ಕೃಷಿ, ತೋಟಗಾರಿಕೆ ಹಾಗೂ ಸಾಂಬಾರ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆಯು **1142 ಮಿ.ಮೀ** ಆಗಿದ್ದು, ಅತಿ ಕಡಿಮೆ ಮಳೆಯು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ **690 ಮಿ.ಮೀ** ಹಾಗೂ ಘಟ್ಟಪ್ರದೇಶಕ್ಕೆ ಸೇರಿದ ಸಕಲೇಶಪುರ ತಾಲ್ಲೂಕಿನಲ್ಲಿ ಅತಿಹೆಚ್ಚು **2247 ಮಿ.ಮೀ** ವಾಡಿಕೆ ಮಳೆ ಇರುತ್ತದೆ. ಮುಂಗಾರು ಮಳೆಯು ಜೂನ್ ಮೊದಲ ವಾರದಲ್ಲಿ ಪ್ರಾರಂಭವಾಗಿ ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಬೀಳುತ್ತದೆ. ಜಿಲ್ಲೆಯ ಸಾಗುವಳಿ ವಿಸ್ತೀರ್ಣವು **4,49,313 ಲಕ್ಷ ಹೆ.** ಆಗಿದ್ದು ಭೌಗೋಳಿಕ ವಿಸ್ತೀರ್ಣಕ್ಕೆ ಹೋಲಿಸಿದಲ್ಲಿ ಇದು **ಶೇ.67.81** ರಷ್ಟಾಗುತ್ತದೆ. ಸದರಿ ಸಾಗುವಳಿ ವಿಸ್ತೀರ್ಣದಲ್ಲಿ **1,06,157 (ಶೇ.26.60) ಹೆ.** ವಿಸ್ತೀರ್ಣವು ವಿವಿಧ ನೀರಾವರಿ ಮೂಲಗಳಿಂದ ನೀರಾವರಿಗೆ ಒಳಪಡುತ್ತಿದ್ದು, ಉಳಿದ ಪ್ರದೇಶದಲ್ಲಿ ಕೃಷಿಯು ಮಳೆಯನ್ನೇ ಅವಲಂಬಿಸಿರುತ್ತದೆ. ಜಿಲ್ಲೆಯಲ್ಲಿ ಕೃಷಿಗೆ ನೀರಾವರಿ ಮೂಲಗಳಾಗಿ ಹೇಮಾವತಿ ಜಲಾಶಯ, ಯಗಚಿ ಜಲಾಶಯ, ವಾಟೆಹೊಳೆ ಜಲಾಶಯ ಹೊಂದಿದ್ದು, ಉಳಿದಂತೆ ನೀರಾವರಿಗೆ ಸಣ್ಣ ಪ್ರಮಾಣದ ಕಟ್ಟೆಗಳಿಗೆ ಅವಲಂಬಿತವಾಗಿರುತ್ತದೆ ಹಾಗೂ ನೆರೆಯ ಕೊಡಗು ಜಿಲ್ಲೆಯ ಹಾರಂಗಿ ಜಲಾಶಯದಿಂದಲೂ ಸಹ ಈ ಜಿಲ್ಲೆಯ ಅರಕಲಗೂಡು ತಾಲ್ಲೂಕಿಗೆ ನೀರಾವರಿ ಸೌಲಭ್ಯ ಒದಗುತ್ತಿದೆ.

ಹಾಸನ ಜಿಲ್ಲೆಯಲ್ಲಿ 2020–21ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳು ಸೇರಿದಂತೆ ಒಟ್ಟು **231480** ಹೆ. ಬಿತ್ತನೆ ಗುರಿಯನ್ನು ನಿಗಧಿಪಡಿಸಲಾಗಿದ್ದು, ಮುಂಗಾರಿನ ಅಂತ್ಯದಲ್ಲಿ **228533** ಹೆ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಪ್ರಮುಖವಾಗಿ ಏಕದಳ ದಾನ್ಯಗಳ ಬೆಳೆ ವಿಸ್ತೀರ್ಣ **198102** ಹೆ ಇದ್ದು, ದ್ವಿದಳ ಧಾನ್ಯ ಬೆಳೆ ವಿಸ್ತೀರ್ಣ **17085** ಹೆ, ವಿವಿಧ ಎಣ್ಣೆಕಾಳು ಬೆಳೆಗಳ ವಿಸ್ತೀರ್ಣ **2475** ಹೆ ಹಾಗೂ ವಾಣಿಜ್ಯ ಬೆಳೆ **10871** ಹೆಕ್ಟೇರ್‌ಗಳು. ಹಾಸನ ಜಿಲ್ಲೆಯಲ್ಲಿ 2020–21 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ವಿವಿದ ಬೆಳೆಗಳು ಸೇರಿದಂತೆ ಒಟ್ಟು **19780** ಹೆ. ಗುರಿ ನಿಗದಿಪಡಿಸಲಾಗಿದ್ದು **11652** ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಅದೇ ರೀತಿ, ಬೇಸಿಗೆ ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳು ಸೇರಿದಂತೆ ಒಟ್ಟು **3845** ಹೆ. ಬಿತ್ತನೆ ಗುರಿಯನ್ನು ನಿಗಧಿಪಡಿಸಲಾಗಿ ನಾಲೆ, ಕೆರೆ ಆಶ್ರಯ, ಕೊಳವೆ ಬಾವಿ ಮತ್ತು ಇತರೆ ನೀರಾವರಿ ಮೂಲಗಳಿಂದ **897ಹೆ** ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿರುತ್ತದೆ.

2020–21 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುವ ವಿವಿಧ ಜಿಲ್ಲಾ ವಲಯ ಯೋಜನೆಗಳು

ಕೃಷಿ ಕಛೇರಿ ಕಟ್ಟಡಗಳು : –ಈ ಯೋಜನೆಯಡಿ **ರೂ.60.00** ಲಕ್ಷ ಬಿಡುಗಡೆಯಾಗಿದ್ದು, ಕೃಷಿ ಇಲಾಖೆಯ ವಿವಿಧ ಕಟ್ಟಡ ಕಾಮಗಾರಿಗಳಿಗೆ ಒಟ್ಟು **60.00** ಲಕ್ಷಗಳ ವೆಚ್ಚವಾಗಿರುತ್ತದೆ.

ಕೃಷಿ ತರಬೇತಿ ಶಾಲೆಗಳು:– ಅರಕಲಗೂಡು ತಾಲ್ಲೂಕಿನಲ್ಲಿ 6 ಎಕರೆಯಲ್ಲಿ ಬೀಜೋತ್ಪಾದನೆ ಕೇಂದ್ರವಿದ್ದು ಸದರಿ ಕೇಂದ್ರದಲ್ಲಿ ಬಿತ್ತನೆ ಬೀಜೋತ್ಪಾದನೆಗೆ ಮತ್ತು ಆಡಳಿತಾತ್ಮಕ ವೆಚ್ಚವಾಗಿ **11.79** ಲಕ್ಷ ರೂ. ಅನುದಾನ ಬಿಡುಗಡೆಯಾಗಿರುತ್ತದೆ. ಬೀಜೋತ್ಪಾದನಾ ಕೇಂದ್ರದ / ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕಾಂಪೌಂಡ್ ಕಾಮಗಾರಿ ಹಾಗೂ **3** ಎಕರೆ ವಿಸ್ತೀರ್ಣದಲ್ಲಿ ಭತ್ತದ/ರಾಗಿ ತಳಿಯ ಬೀಜೋತ್ಪಾದನೆ ಕಾಯಕ್ರಮ ಅನುಷ್ಠಾನಗೊಳಿಸಿ **11.79** ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದೆ.

ತೋಟಗಾರಿಕೆ ಇಲಾಖೆ

ಹಾಸನ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 6,62,602 ಹೆಕ್ಟೇರ್ ಇದ್ದು, ಇದರಲ್ಲಿ 421135 ಹೆಕ್ಟೇರ್ ಸಾಗುವಳಿ ಪ್ರದೇಶವಾಗಿದೆ. ಈ ಪೈಕಿ ತೋಟಗಾರಿಕೆ ಬೆಳೆಗಳನ್ನು 190846.96 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಹಾಸನ ಜಿಲ್ಲೆಯ ಹವಾಗುಣ ವಿವಿಧ ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗೆ ಹೆಚ್ಚು ಸಹಕಾರಿಯಾಗಿದ್ದು, ಪ್ರಮುಖ ಬೆಳೆಗಳಾದ ತೆಂಗು–106829 ಹೆಕ್ಟೇರ್, ಅಡಿಕೆ–7714 ಹೆಕ್ಟೇರ್, ಕಾಳುಮೆಣಸು–34107 ಹೆಕ್ಟೇರ್, ಏಲಕ್ಕಿ–3972 ಹೆಕ್ಟೇರ್, ಹಣ್ಣಿನ ಬೆಳೆಗಳು–7191 ಹೆಕ್ಟೇರ್, ಹೂ ಬೆಳೆ–887 ಹೆಕ್ಟೇರ್ ಮತ್ತು ತರಕಾರಿ ಬೆಳೆಗಳು–23613 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿದೆ.

ಜಿಲ್ಲೆಯಲ್ಲಿ ಒಟ್ಟು 18 ತೋಟಗಾರಿಕೆ ಕ್ಷೇತ್ರಗಳಿದ್ದು ಎಲ್ಲಾ ಕ್ಷೇತ್ರಗಳು ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯ ಅಧೀನದಲ್ಲಿ ಬರುತ್ತದೆ. ಜಿಲ್ಲೆಯ ತೋಟಗಾರಿಕೆ ಕ್ಷೇತ್ರಗಳ ಒಟ್ಟು ವಿಸ್ತೀರ್ಣ 1091.3 ಎಕರೆಗಳಿದ್ದು, 559.76 ಎಕರೆ ಪ್ರದೇಶದಲ್ಲಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಪ್ರತಿ ವರ್ಷ ಉತ್ತಮ ದರ್ಜೆಯ ಸಸಿ ಮತ್ತು ಕಸಿ ಗಿಡಗಳನ್ನು ಉತ್ಪಾದನೆ ಮಾಡಿ ಇಲಾಖಾ ದರದಲ್ಲಿ ರೈತರಿಗೆ ಮಾರಾಟ ಮಾಡಲಾಗುತ್ತಿದೆ.

ಜಿಲ್ಲೆಯನ್ನು ಹವಾಗುಣದ ಮೇಲೆ ನಾಲ್ಕು ವಲಯಗಳಾಗಿ ವಿಂಗಡಿಸಬಹುದು

ಕ್ರ ಸಂ	ವಿಭಾಗಗಳು	ತಾಲ್ಲೂಕುಗಳು	ಬೆಳೆಯುವ ಮುಖ್ಯ ತೋಟಗಾರಿಕೆ ಬೆಳೆಗಳು
1	ಮಲೆನಾಡು ಪ್ರದೇಶ	ಸಕಲೇಶಪುರ	ಕಾಫಿ, ಕಾಳುಮೆಣಸು, ಏಲಕ್ಕಿ, ಅಡಿಕೆ, ಬಾಳೆ
2	ದಕ್ಷಿಣ ಅರೆ ಮಲೆನಾಡು ಪ್ರದೇಶ	ಹೊಳೆನರಸೀಪುರ, ಅರಕಲಗೂಡು, ಹಾಸನ, ಆಲೂರು, ಬೇಲೂರು	ತೆಂಗು, ಅಡಿಕೆ, ಆಲೂಗಡ್ಡೆ, ಶುಂಠಿ, ಬಾಳೆ, ಹೂವುಗಳು ಹಾಗೂ ತರಕಾರಿಗಳು
3	ಮಧ್ಯದ ಒಣ ವಲಯ ಪ್ರದೇಶ	ಅರಸೀಕೆರೆ	ತೆಂಗು, ಬಾಳೆ, ಮಾವು, ತರಕಾರಿ ಬೆಳೆಗಳು
4	ದಕ್ಷಿಣ ಒಣ ವಲಯ ಪ್ರದೇಶ	ಚನ್ನರಾಯಪಟ್ಟಣ	ತೆಂಗು, ಮಾವು, ಸಪೋಟ, ಬಾಳೆ, ತರಕಾರಿ ಬೆಳೆಗಳು

2020–21 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ರೂ. 83.35892 ಲಕ್ಷ ಆರ್ಥಿಕ ಗುರಿ ಹಾಗೂ ತಾಲ್ಲೂಕು ಪಂಚಾಯತ್ ಯೋಜನೆಯಡಿ ರೂ 2.00 ಲಕ್ಷ ಆರ್ಥಿಕ ಗುರಿ, ಒಟ್ಟಾರೆ ಜಿಲ್ಲಾಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಯೋಜನೆಗಳು ಸೇರಿದಂತೆ ರೂ 85.35892 ಲಕ್ಷಗಳ ಆರ್ಥಿಕ ಗುರಿ ನಿಗಧಿಯಾಗಿದ್ದು, ಇದರಲ್ಲಿ ಜಿಲ್ಲಾ ಪಂಚಾಯತ್ ಯೋಜನೆಗಳಿಗೆ ಒಟ್ಟು ರೂ 57.65892 ಲಕ್ಷ ಬಿಡುಗಡೆಯಾಗಿದ್ದು, ರೂ. 57.56007 ಲಕ್ಷ ಖರ್ಚು ಭರಿಸಲಾಗಿದೆ ಹಾಗೂ ತಾಲ್ಲೂಕು ಪಂಚಾಯಿತಿ ಯೋಜನೆಗಳಿಗೆ ರೂ. 0.42 ಲಕ್ಷ ಬಿಡುಗಡೆಯಾಗಿದ್ದು, ರೂ. 0.35959 ಲಕ್ಷ ಖರ್ಚು ಭರಿಸಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲಾಗಿದೆ. ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಜಿಲ್ಲಾ ಪಂಚಾಯತ್ ಯೋಜನೆಗಳು

1.ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ : (2435–00–101–0–28):

ಈ ಯೋಜನೆಯ ಪ್ರಮುಖ ಉದ್ದೇಶ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಿದ ರೈತರಿಗೆ ಸಹಾಯಧನ ವಿತರಿಸುವುದು. ಹನಿನೀರಾವರಿ ಅಳವಡಿಸಿದ ಫಲಾನುಭವಿಗಳಿಗೆ 2.00 ಹೆಕ್ಟೇರ್ ವರೆಗೆ ಶೇ.90 ರಂತೆ ಸಹಾಯಧನವನ್ನು 2.00 ಹೆಕ್ಟೇರ್ ಮೇಲ್ಪಟ್ಟು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಹಾಗೂ ಇತರೆ ರೈತರಿಗೆ ಶೇ.40 ರಂತೆ 3.00 ಹೆಕ್ಟೇರ್ ವರೆಗೆ ವರೆಗೆ ಸಹಾಯಧನ ವಿತರಿಸಲಾಗುವುದು. ಪ್ರಸ್ತುತ ಸಾಲಿನಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.10.00 ಲಕ್ಷ ಅನುದಾನ ನಿಗಧಿಯಾಗಿದ್ದು, ಬಿಡುಗಡೆಯಾದ ರೂ.10.00 ಲಕ್ಷಕ್ಕೆ ರೂ. 9.96720 ಲಕ್ಷ ವೆಚ್ಚ ಭರಿಸಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲಾಗಿದೆ.

7. <u>ಜೇನು ಕೃಷಿ ಅಭಿವೃದ್ಧಿ ಯೋಜನೆ : (2851–00–107–0–33) :</u>

ಸದರಿ ಯೋಜನೆಯಡಿ ಜೇನು ಕೃಷಿಯಲ್ಲಿ ಆಸಕ್ತಿ ಹೊಂದಿರುವ ರೈತರಿಗೆ ತರಬೇತಿ ನೀಡುವುದು, ಮತ್ತು ಜೇನು ಪೆಟ್ಟಿಗೆ ಮತ್ತು ಜೇನು ಕುಟುಂಬ ಖರೀದಿಸಿದ ಸಾಮಾನ್ಯ ವರ್ಗ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಕ್ರಮವಾಗಿ ಶೇ.75 ಹಾಗೂ ಶೇ.90 ರ ಸಹಾಯಧನ ಒದಗಿಸಲು ಉದ್ದೇಶಿಸಲಾಗಿದ್ದು, ಸದರಿ ಯೋಜನೆಗೆ 2020–21 ನೇ ಸಾಲಿನಲ್ಲಿ ರೂ.4.95 ಲಕ್ಷ ಆರ್ಥಿಕ ಗುರಿ ನಿಗಧಿಪಡಿಸಿದ್ದು, ಬಿಡುಗಡೆಯಾದ ರೂ.4.95 ಲಕ್ಷ ಅನುದಾನಕ್ಕೆ ರೂ.4.94277 ಲಕ್ಷ ವೆಚ್ಚ ಭರಿಸಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲಾಗಿದೆ.

<u>ತಾಲ್ಲೂಕು ಪಂಚಾಯತ್ ಯೋಜನೆಗಳು</u>

<u>1. ರೈತರಿಗೆ ತರಬೇತಿ: (2435–00–101–0–64):</u>

ಈ ಯೋಜನೆಯಡಿ ಜಿಲ್ಲೆಯ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ತಾಲ್ಲೂಕು ಮಟ್ಟದಲ್ಲಿ ಸುಧಾರಿತ ತೋಟಗಾರಿಕೆ ಬೇಸಾಯ ಕ್ರಮದ ಬಗ್ಗೆ ಹಾಗೂ ತೋಟಗಾರಿಕೆಯಲ್ಲಿನ ಹೊಸ ತಾಂತ್ರಿಕತೆಗಳ ಬಗ್ಗೆ ತರಬೇತಿ ನೀಡಲಾಗಿರುತ್ತದೆ. ಸದರಿ ಯೋಜನೆಗೆ 2020–21 ನೇ ಸಾಲಿಗೆ ರೂ. 2.00 ಲಕ್ಷ ಆರ್ಥಿಕ ಗುರಿ ನಿಗಧಿ ಪಡಿಸಿದ್ದು, ರೂ. 0.42 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾನಕ್ಕೆ ರೂ.0.35959 ಲಕ್ಷ ವೆಚ್ಚ ಭರಿಸಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲಾಗಿದೆ.

ಅನುಬಂಧ–1

2020–21ನೇ ಸಾಲಿನ ಜಿಲ್ಲಾವಲಯ ಯೋಜನೆಗಳ ಗುರಿ ಸಾಧನೆ ವಿವರ

ಕ್ರ ಸಂ	ಯೋಜನೆಯ ವಿವರ	ಪರಿಮಾಣ	ಗುರಿ		ಬಿಡುಗಡೆ	ಸಾಧನೆ	
			ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ
ಜಿಲ್ಲಾ ಪಂಚಾಯತ್ ಯೋಜನೆಗಳು							
1	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿನೀರಾವರಿ ಸಹಾಯಧನ	ಹೆಕ್ಟೇರ್‌ಗಳಲ್ಲಿ	20	10.00	10.00	12.66	9.96720
2	ತೋಟಗಾರಿಕೆ ಕಟ್ಟಡಗಳು	ಸಂಖ್ಯೆಗಳಲ್ಲಿ	14	25.70	0	0	0
3	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಮತ್ತು ಮೂಲಭೂತ ಸೌಕರ್ಯ	ಸಂಖ್ಯೆಗಳಲ್ಲಿ	4	20.00	20.00	4	19.98814
4	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ	ಸಂಖ್ಯೆಗಳಲ್ಲಿ	47784	6.00	6.00	47784	5.95568
5	ಪ್ರಚಾರ ಮತ್ತು ಸಾಹಿತ್ಯ	ಸಂಖ್ಯೆಗಳಲ್ಲಿ	29001	12.00	12.00	29001	11.99736
6	ಶೈತ್ಯಾಗಾರಗಳಿಗೆ ಸಹಾಯಧನ	ಸಂಖ್ಯೆಗಳಲ್ಲಿ	4	4.70892	4.70892	4	4.70892
7	ಜೇನು ಕೃಷಿ ಅಭಿವೃದ್ಧಿ ಕಾರ್ಯಕ್ರಮ	ಸಂಖ್ಯೆಗಳಲ್ಲಿ	109	4.95	4.95	109	4.94277
	ಉಪ ಮೊತ್ತ–1		**76936**	**83.35892**	**57.65892**	**76914.66**	**57.56007**
ತಾಲ್ಲೂಕು ಪಂಚಾಯತ್ ಯೋಜನೆಗಳು							
1	ರೈತರಿಗೆ ತರಬೇತಿ	ಸಂಖ್ಯೆಗಳಲ್ಲಿ	500	2.00	0.42	90	0.35959
	ಉಪ ಮೊತ್ತ–2		**500**	**2.00**	**0.42**	**90**	**0.35959**
	ಒಟ್ಟು ನಿವ್ವಳ(1+2)		**77436**	**85.35892**	**58.07892**	**77004.66**	**57.91966**

ಸವಲತ್ತುಗಳ ಕುರಿತು ಮಾಹಿತಿ ನೀಡಲು ಪ್ರಚಾರ ಸಾಮಾಗ್ರಿಗಳ ಮುದ್ರಣ, ವಸ್ತು ಪ್ರದರ್ಶನ, ಆಟೋ ಪ್ರಚಾರ, ರೇಡಿಯೋ ಕಾರ್ಯಕ್ರಮ, ಫಲಪುಷ್ಪ ಪ್ರದರ್ಶನ ಹಾಗೂ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಯೋಜನೆಗೆ ರೂ. 12.00 ಲಕ್ಷಗಳ ಆರ್ಥಿಕ ಗುರಿ ನಿಗಧಿಯಾಗಿದ್ದು, ಬಿಡುಗಡೆಯಾದ ರೂ.12.00 ಲಕ್ಷಕ್ಕೆ ರೂ. 11.90112 ಲಕ್ಷ ವೆಚ್ಚ ಭರಿಸಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲಾಗಿದೆ.

7. <u>ಶೈತ್ಯಾಗಾರಿಕೆಗೆ ಸಹಾಯಧನ : (2435–00–101–0–39):</u>

ಈ ಯೋಜನೆಯಡಿ ತೋಟಗಾರಿಕೆ ಬೆಳೆಗಳು ಹಾಳಾಗದಂತೆ ಶೈತ್ಯಾಗಾರಗಳಲ್ಲಿ ಸಂರಕ್ಷಿಸುವಲ್ಲಿ ತೊಡಗಿಸಿಕೊಂಡಿರುವ ಶೈತ್ಯಾಗಾರಗಳು ಬಳಸುವ ಪ್ರತಿ ಯೂನಿಟ್ ವಿಧ್ಯುತ್‌ಚಕ್ತಿಗೆ ರೂ.1–00 ರಂತೆ ಸಹಾಯಧನ ಒದಗಿಸಲು ಉದ್ದೇಶಿಸಲಾಗಿದ್ದು, ಸದರಿ ಯೋಜನೆಯಡಿ 2019–20 ನೇ ಸಾಲಿನಲ್ಲಿ ರೂ.12.00 ಲಕ್ಷಗಳ ಆರ್ಥಿಕ ಗುರಿ ನಿಗಧಿಪಡಿಸಿದ್ದು, ಬಿಡುಗಡೆಯಾದ ರೂ.12.00 ಲಕ್ಷ ಅನುದಾನಕ್ಕೆ ರೂ.6.11293 ಲಕ್ಷ ಆರ್ಥಿಕ ವೆಚ್ಚ ಭರಿಸಲಾಗಿರುತ್ತದೆ.

8. <u>ಜೇನು ಕೃಷಿ ಅಭಿವೃದ್ಧಿ ಯೋಜನೆ : (2851–00–107–0–33) :</u>

ಸದರಿ ಯೋಜನೆಯಡಿ ಜೇನು ಕೃಷಿಯಲ್ಲಿ ಆಸಕ್ತಿ ಹೊಂದಿರುವ ರೈತರಿಗೆ ತರಬೇತಿ ನೀಡುವುದು, ಮತ್ತು ಜೇನು ಪೆಟ್ಟಿಗೆ ಮತ್ತು ಜೇನು ಕುಟುಂಬ ಖರೀದಿಸಿದ ಸಾಮಾನ್ಯ ವರ್ಗ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಕ್ರಮವಾಗಿ ಶೇ.75 ಹಾಗೂ ಶೇ.90 ರ ಸಹಾಯಧನ ಒದಗಿಸಲು ಉದ್ದೇಶಿಸಲಾಗಿದ್ದು, ಸದರಿ ಯೋಜನೆಗೆ 2019–20 ನೇ ಸಾಲಿನಲ್ಲಿ ರೂ.4.45 ಲಕ್ಷ ಆರ್ಥಿಕ ಗುರಿ ನಿಗಧಿಪಡಿಸಿದ್ದು, ಬಿಡುಗಡೆಯಾದ ರೂ.4.45 ಲಕ್ಷ ಅನುದಾನಕ್ಕೆ ರೂ.4.3431 ಲಕ್ಷ ವೆಚ್ಚ ಭರಿಸಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲಾಗಿದೆ.

<u>ತಾಲ್ಲೂಕು ಪಂಚಾಯತ್ ಯೋಜನೆಗಳು</u>

1. <u>ರೈತರಿಗೆ ಸಹಾಯ; (2435–00–101–0–62)</u>

ಸರ್ಕಾರಿ ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ:

ಸದರಿ ಯೋಜನೆಯಡಿ ಅಲಂಕಾರಿಕ ಗಿಡಗಳ ಅಭಿವೃದ್ಧಿ ಪಡಿಸಿದ್ದು, ಈ ಗಿಡಗಳನ್ನು, ಸರ್ಕಾರಿ ಅಥಿತಿ ಗೃಹಗಳ ಮುಂದಿಡಲು ವಿತರಿಸಲಾಗುತ್ತಿದೆ ಹಾಗೂ ಸರ್ಕಾರಿ ಸಭೆ/ಸಮಾರಂಭಗಳಿಗೆ ವೇದಿಕೆಯನ್ನು ಅಲಂಕರಿಸಲು ಜೋಡಣೆ ಮಾಡಲಾಗುವುದು. ಈ ಘಟಕದಡಿ 2019–20 ನೇ ಸಾಲಿಗೆ ರೂ. 2.30 ಲಕ್ಷ ಆರ್ಥಿಕ ಗುರಿ ನಿಗಧಿಪಡಿಸಲಾಗಿದ್ದು, ರೂ. 2.30 ಲಕ್ಷ ವೆಚ್ಚ ಭರಿಸಿ ನಿಗಧಿಪಡಿಸಿದ್ದ ಆರ್ಥಿಕ ಹಾಗೂ ಭೌತಿಕ ಪ್ರಗತಿಯನ್ನು ಸಾಧಿಸಲಾಗಿದೆ.

ಶೇ.50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿ ವಿತರಣೆ:

ಈ ಯೋಜನೆಯಡಿ, ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟಗಳ ನಿಯಂತ್ರಣಕ್ಕೆ ರೈತರು ಖರೀಧಿಸಿದ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಶೇ. 50 ರಂತೆ ಗರಿಷ್ಟ ರೂ. 2000/– ಪ್ರತಿ ಹೆಕ್ಟೇರಿಗೆ ಸಹಾಯಧನ ಒದಗಿಸಲಾಗಿದೆ. ಸದರಿ ಘಟಕದಡಿ 2019–20 ನೇ ಸಾಲಿಗೆ ರೂ. 2.24 ಲಕ್ಷ ಆರ್ಥಿಕ ಗುರಿ ನಿಗಧಿಯಾಗಿದ್ದು, ರೂ.2.24 ಲಕ್ಷ ವೆಚ್ಚ ಭರಿಸಿ ಭೌತಿಕ 89.78 ಹೆಕ್ಟೇರ್ ಪ್ರದೇಶಕ್ಕೆ ರೈತರಿಗೆ ಸಸ್ಯಸಂರಕ್ಷಣಾ ಔಷಧಿ ವಿತರಿರಿಸಲಾಗಿದೆ.

ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ:

ಈ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗಾಗಿ ವಿವಿಧ ವರ್ಗದ ರೈತರನ್ನು ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯತಿ ವತಿಯಿಂದ ಆಯ್ಕೆ ಮಾಡಿ ತೋಟಗಾರಿಕೆ ಬೆಳೆಯನ್ನು ಬೆಳೆಯಲು ಪ್ರೋತ್ಸಾಯಿಸಲು ಬಹುವಾರ್ಷಿಕ ಬೆಳೆಗಳಾದ ಸಪೋಟ, ಮಾವು ಮತ್ತು ತೆಂಗಿನ ಗಿಡಗಳನ್ನು ಉಚಿತವಾಗಿ ವಿತರಿಸಲಾಗಿದ್ದು, ರೂ2.00 ಲಕ್ಷ ಅನುದಾನವನ್ನು ವೆಚ್ಚ ಭರಿಸಿ ನಿಗಧಿಪಡಿಸಿದ ಭೌತಿಕ ಪ್ರಗತಿಯನ್ನು ಸಾಧಿಸಲಾಗಿದೆ.

ಸಾಮಾಜಿಕ ತೋಟಗಾರಿಕೆ:

ಈ ಯೋಜನೆಯಡಿ ಸಮುದಾಯ ಭೂಮಿಯಲ್ಲಿ ಶಾಲಾ ಆವರಣದಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳ ಆವರಣದಲ್ಲಿ ನೀರಿನ ಸೌಲಭ್ಯಗಳನ್ನಾಧರಿಸಿ, ಪರಿಸರ/ವನ ಸಂಪತ್ತು ಹೆಚ್ಚಿಸಲು ಹಣ್ಣಿನ ಕಸಿ/ಸಸಿ ಅಥವಾ ಇತರೆ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಗಿಡಗಳನ್ನು ವಿತರಿಸಿ ಕಿರು ತೋಟ ನಿರ್ಮಿಸುವುದು, ಯೋಜನೆಯ ಉದ್ದೇಶವಾಗಿದ್ದು, 2019–20 ನೇ ಸಾಲಿನಲ್ಲಿ ನಿಗಧಿಯಾಗಿದ್ದ ರೂ.0.46 ಲಕ್ಷ ಆರ್ಥಿಕ ಗುರಿಗೆ ಸಂಪೂರ್ಣ ವೆಚ್ಚ ಭರಿಸಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲಾಗಿದೆ.

2. ರೈತರಿಗೆ ತರಬೇತಿ: (2435–00–101–0–64):

ಈ ಯೋಜನೆಯಡಿ ಜಿಲ್ಲೆಯ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ತಾಲ್ಲೂಕು ಮಟ್ಟದಲ್ಲಿ ಸುಧಾರಿತ ತೋಟಗಾರಿಕೆ ಬೇಸಾಯ ಕ್ರಮದ ಬಗ್ಗೆ ಹಾಗೂ ತೋಟಗಾರಿಕೆಯಲ್ಲಿನ ಹೊಸ ತಾಂತ್ರಿಕತೆಗಳ ಬಗ್ಗೆ ತರಬೇತಿ ನೀಡಲಾಗಿರುತ್ತದೆ. ಸದರಿ ಯೋಜನೆಗೆ 2019–20 ನೇ ಸಾಲಿಗೆ ರೂ. 2.00 ಲಕ್ಷ ಆರ್ಥಿಕ ಗುರಿ ನಿಗಧಿ ಪಡಿಸಿದ್ದು, ಬಿಡುಗಡೆಯಾದ ರೂ. 2.00 ಲಕ್ಷ ಅನುದಾನಕ್ಕೆ ರೂ.2.00 ಲಕ್ಷ ವೆಚ್ಚ ಭರಿಸಿ ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಲಾಗಿದೆ.

ಅನುಬಂಧ–1
2019–20ನೇ ಸಾಲಿನ ಜಿಲ್ಲಾವಲಯ ಯೋಜನೆಗಳ ಗುರಿ ಸಾಧನೆ ವಿವರ

ಕ್ರ ಸ ಂ	ಯೋಜನೆಯ ವಿವರ	ಪರಿಮಾಣ	ಗುರಿ		ಬಿಡುಗಡೆ	ಸಾಧನೆ	
			ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ
ಜಿಲ್ಲಾ ಪಂಚಾಯತ್ ಯೋಜನೆಗಳು							
1	ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ	ಸಂಖ್ಯೆಗಳಲ್ಲಿ	92	2.00	2.00	92	2.00
2	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿನೀರಾವರಿ ಸಹಾಯಧನ	ಹೆಕ್ಟೇರ್‌ಗಳಲ್ಲಿ	20	10.00	10.00	17.54	9.99995
3	ತೋಟಗಾರಿಕೆ ಕಟ್ಟಡಗಳು	ಸಂಖ್ಯೆಗಳಲ್ಲಿ	18	30.00	0	0	0
4	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಮತ್ತು ಮೂಲಭೂತ ಸೌಕರ್ಯ	ಸಂಖ್ಯೆಗಳಲ್ಲಿ	4	20.00	20.00	4	19.95052
5	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ	ಸಂಖ್ಯೆಗಳಲ್ಲಿ	50142	6.00	6.00	50142	5.99999
6	ಪ್ರಚಾರ ಮತ್ತು ಸಾಹಿತ್ಯ	ಸಂಖ್ಯೆಗಳಲ್ಲಿ	52005	12.00	12.00	22745	11.90112
7	ಶೈತ್ಯಾಗಾರಗಳಿಗೆ ಸಹಾಯಧನ	ಸಂಖ್ಯೆಗಳಲ್ಲಿ	8	12.00	12.00	6	6.11293
8	ಜೇನು ಕೃಷಿ ಅಭಿವೃದ್ಧಿ ಕಾರ್ಯಕ್ರಮ	ಸಂಖ್ಯೆಗಳಲ್ಲಿ	97	4.45	4.45	97	4.3431
	ಉಪ ಮೊತ್ತ–1		**102386**	**96.45**	**66.45**	**73103.54**	**60.30761**
ತಾಲ್ಲೂಕು ಪಂಚಾಯತ್ ಯೋಜನೆಗಳು							
1	ರೈತರಿಗೆ ಸಹಾಯ		3356.78	7.00	7.00	3356.78	7.00
2	ರೈತರಿಗೆ ತರಬೇತಿ	ಸಂಖ್ಯೆಗಳಲ್ಲಿ	500	2.00	2.00	500	2.00
	ಉಪ ಮೊತ್ತ–2		**3856.78**	**9.00**	**9.00**	**3856.78**	**9.00**
	ಒಟ್ಟು ನಿವ್ವಳ(1+2)		**106242.78**	**105.45**	**75.45**	**76960.32**	**69.30761**

ರೇಷ್ಮೆ ಇಲಾಖೆ

ರೇಷ್ಮೆ ಕೃಷಿ ಚಟುವಟಿಕೆಗಳಿಗೆ ಹಾಸನ ಜಿಲ್ಲೆಯ ಹವಾಗುಣವು ಪೂರಕವಾಗಿದ್ದು, ದ್ವಿತಳಿ ಬಿತ್ತನೆ ಗೂಡುಗಳ ಉತ್ಪಾದನೆಗೆ ಅತ್ಯಂತ ಪ್ರಶಸ್ತವಾಗಿದೆ. ಜಿಲ್ಲೆಯ ರೇಷ್ಮೆ ಬೆಳೆಗಾರರು ದ್ವಿತಳಿ ರೇಷ್ಮೆ ಹುಳು ಸಾಕಾಣಿಕೆ ಮಾಡುತ್ತಿದ್ದು, 2020–2021ನೇ ಸಾಲಿನಲ್ಲಿ 175.60 ಹೆಕ್ಟೇರ್ ಪ್ರದೇಶದಲ್ಲಿ 244 ರೈತರು ರೇಷ್ಮೆ ಕೃಷಿ ಕೈಗೊಂಡಿರುತ್ತಾರೆ.2020–2021 ಸಾಲಿನ ಅಂತ್ಯಕ್ಕೆ 1712.81 ಹೆಕ್ಟೇರ್ ಪ್ರದೇಶದಲ್ಲಿ 2605 ರೈತರು ರೇಷ್ಮೆ ಕೃಷಿ ಕೈಗೊಂಡಿರುತ್ತಾರೆ. ಈ ಪೈಕಿ 167 ಪರಿಶಿಷ್ಟ ಜಾತಿ 24 ಪರಿಶಿಷ್ಟ ಪಂಗಡ 16 ಅಲ್ಪಸಂಖ್ಯಾತರು ಹಾಗೂ 491 ಮಹಿಳಾ ವರ್ಗಕ್ಕೆ ಸೇರಿದವರಾಗಿರುತ್ತಾರೆ.

ಜಿಲ್ಲೆಯಲ್ಲಿ ಉತ್ಪಾದನೆಯಾಗುತ್ತಿರುವ ಸಿ.ಎಸ್.ಆರ್. ಬೈವೋಲ್ಟೈನ್ ಶುದ್ದ ತಳಿ ಬಿತ್ತನೆ ಗೂಡು ರಾಜ್ಯದ ಎಲ್ಲಾ ಭಾಗಗಳಿಗೆ ಮಿಶ್ರತಳಿ ರೇಷ್ಮೆ ಮೊಟ್ಟೆಗಳ ತಯಾರಿಕೆಗಾಗಿ ಪೂರೈಕೆಯಾಗುತ್ತಿದೆ. 2020–2021ನೇ ಸಾಲಿನಲ್ಲಿ 15.10_ಲಕ್ಷ ರೇಷ್ಮೆ ಮೊಟ್ಟೆಗಳ ಸಾಕಾಣಿಕೆಯಿಂದ 1000.99 ಮೆಟ್ರಿಕ್ ಟನ್ ರೇಷ್ಮೆ ಗೂಡುಗಳನ್ನು ಉತ್ಪಾದಿಸಿ ಅಂದಾಜು **ರೂ:**45.00 ಕೋಟಿ ರೂಪಾಯಿಗಳ ಆದಾಯವನ್ನು ಪಡೆದಿರುತ್ತಾರೆ.

2020–2021ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಗಳಡಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಿದ ಒಟ್ಟು ರೂ:**28.69**ಲಕ್ಷ ಅನುದಾನದ ಪೈಕಿ ರೂ:**3.00** ಲಕ್ಷಗಳ ಅನುದಾನವನ್ನು ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ರುದ್ರಪಟ್ಟಣದಲ್ಲಿ 0.92ಲಕ್ಷ ಗೂಡುಗಳ ಉತ್ಪಾದನೆ, 1.00 ಲಕ್ಷ ಹಿಪ್ಪುನೇರಳೆ ಸಸಿಗಳ ಅಭಿವೃದ್ದಿಗೆ, ವಸ್ತು ಪ್ರದರ್ಶನಗಳನ್ನು ಏರ್ಪಡಿಸಲು **ರೂ:0.158** ಲಕ್ಷಗಳ ವೆಚ್ಚ ಭರಿಸಲಾಗಿದೆ. ರೇಷ್ಮೆ ಬೆಳೆಗಾರರಿಗೆ ರೋಗ ಮುಕ್ತ ವಾತಾವರಣದಲ್ಲಿ ಗೂಡನ್ನು ಬೆಳೆಯಲು ಕಾಲಕಾಲಕ್ಕೆ ಸೋಂಕು ನಿವಾರಣೆಯನ್ನು ಮಾಡಲು ರೂ:**25.530**ಲಕ್ಷ ಮೌಲ್ಯದ ಸೋಂಕು ನಿವಾರಕಗಳನ್ನು ಖರೀದಿಸಿ ಉಚಿತವಾಗಿ ಸರಬರಾಜು ಮಾಡಲಾಗಿದೆ.

ತಾಲ್ಲೋಕ್ ಪಂಚಾಯತ್ ಕಾರ್ಯಕ್ರಮದಡಿ ನಿಗಧಿಪಡಿಸಿದ ಒಟ್ಟು **5.00** ಲಕ್ಷಗಳ ಅನುದಾನದ ಪೈಕಿ ರೂ.**3.964** ಲಕ್ಷಗಳನ್ನು 17:21 ಎಕರೆಗೆ ಹೊಸದಾಗಿ ಹಿಪ್ಪುನೇರಳೆ ನಾಟಿ ಮಾಡಿದ ರೈತರಿಗೆ ಸಹಾಯಧನವಾಗಿ ನೀಡಲಾಗಿದೆ. ರೂ.**0.082** ಲಕ್ಷ ರೂ.ಗಳ ಅನುದಾನದಲ್ಲಿ ರೇಷ್ಮೆ ಇಲಾಖೆಯ ತಾಂತ್ರಿಕತೆಗಳು ಹಾಗೂ ಯೋಜನೆಗಳ ಬಗ್ಗೆ ಮಾಹಿತಿಯ ಕರಪತ್ರಗಳನ್ನು ಮುದ್ರಿಸಿ, ರೇಷ್ಮೆ ಕೃಷಿಕರುಗಳಿಗೆ ವಿತರಿಸಲಾಗಿದೆ. **0.05** ರೂ.ಲಕ್ಷಗಳ ಅನುದಾನದಲ್ಲಿ 01 ಕ್ಷೇತ್ರೋತ್ಸವವನ್ನು ಏರ್ಪಡಿಸಿ ವೆಚ್ಚ ಭರಿಸಲಾಗಿದೆ. **0.795** ಲಕ್ಷಗಳ ಅನುದಾನದಲ್ಲಿ 05 ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಸಾಕಾಣಿಕೆ ಉಪಕರಣಗಳಿಗೆ ಸಹಾಯಧನ ನೀಡಲಾಗಿದೆ.

ರೇಷ್ಮೆ ಕೃಷಿ ಚಟುವಟಿಕೆಗಳಿಗೆ ಬೇಲೂರು ತಾಲ್ಲೋಕು ಹಳೇಬೀಡು ಮಾದಿಹಳ್ಳಿ, ಕಸಬಾ ಹೋಬಳಿ ಹವಾಗುಣವು ಪೂರಕವಾಗಿದ್ದು, ದ್ವಿತಳಿ ಬಿತ್ತನೆ ಗೂಡುಗಳ ಉತ್ಪಾದನೆಗೆ ಅತ್ಯಂತ ಪ್ರಶಸ್ತವಾಗಿದೆ. ತಾಲ್ಲೋಕು ರೇಷ್ಮೆ ಬೆಳೆಗಾರರು ದ್ವಿತಳಿ ರೇಷ್ಮೆ ಹುಳು ಸಾಕಾಣಿಕೆ ಮಾಡುತ್ತಿದ್ದು, 2020–21ನೇ ಸಾಲಿನಲ್ಲಿ **128.05** ಹೆಕ್ಟೇರ್ ಪ್ರದೇಶದಲ್ಲಿ **203** ರೈತರು ರೇಷ್ಮೆ ಕೃಷಿ ಕೈಗೊಂಡಿರುತ್ತಾರೆ ಈ ಪೈಕಿ **33** ಪರಿಶಿಷ್ಟ ಜಾತಿ **02** ಪರಿಶಿಷ್ಟ ಪಂಗಡ **03** ಅಲ್ಪಸಂಖ್ಯಾತರು ಹಾಗೂ **34** ಮಹಿಳಾ ವರ್ಗಕ್ಕೆ ಸೇರಿದವರಾಗಿರುತ್ತಾರೆ.

ತಾಲ್ಲೋಕಿನಲ್ಲಿ ಉತ್ಪಾದನೆಯಾಗುತ್ತಿರುವ ಸಿ.ಎಸ್.ಆರ್. ಬೈವೋಲ್ಟೈನ್ ಶುದ್ದ ತಳಿ ಬಿತ್ತನೆ ಗೂಡು ಹಾಗೂ ದ್ವಿತಳಿ ಸಂಕರಣ ಉತ್ಪಾದನೆ ಮಾಡಲಾಗುತ್ತಿದೆ. 2020–21ನೇ ಸಾಲಿನಲ್ಲಿ **14:00** ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ಹಿಪ್ಪುನೇರಳೆ ವಿಸ್ತರಣೆ ಮಾಡಲಾಗಿದ್ದು, **203** ರೇಷ್ಮೆ ಬೆಳೆಗಾರರು, ಶುದ್ದ ತಳಿ **43.546** ಹಾಗೂ ಸಂಕರಣ **32,148** ಒಟ್ಟು **75,694** ಸಾವಿರ ರೇಷ್ಮೆ ಮೊಟ್ಟೆಗಳ ಸಾಕಾಣಿಕೆಯಿಂದ **45.862** ಮೆಟ್ರಿಕ್ ಟನ್ ರೇಷ್ಮೆ ಗೂಡುಗಳನ್ನು ಉತ್ಪಾದಿಸಿ ಅಂದಾಜು **ರೂ:2.29** ಕೋಟಿ ರೂಪಾಯಿಗಳ ಆದಾಯವನ್ನು ಪಡೆದಿರುತ್ತಾರೆ.

2020–2021ನೇ ಸಾಲಿನಲ್ಲಿ **28** ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನ ಮಾಡಿದ್ದು, **5030** ಮಾನವ ದಿನಗಳನ್ನು ಸೃಜನೆ ಮಾಡಿದ್ದು, ಒಟ್ಟು ರೂ.**14.06 ಲಕ್ಷ** ಕೂಲಿ ಮೊತ್ತವನ್ನು ಪಾವತಿಸಲಾಗಿದೆ. ಸಿಲ್ಕ್ ಸಮಗ್ರ ಯೋಜನೆಯಡಿಯಲ್ಲಿ **04** ರೇಷ್ಮೆ ಬೆಳೆಗಾರರಿಗೆ ಹುಳು ಸಾಕಾಣಿಕೆ ಮನೆಗೆ ರೂ.**12.00ಲಕ್ಷ** ಹಾಗೂ ರೂ.**3.60 ಸಾವಿರ** ವಿಶೇಷ ಘಟಕ ಯೋಜನೆಯಡಿ **01** ಫಲಾನುಭವಿಗೆ ಸಹಾಯಧನ ನೀಡಲಾಗಿದೆ. ಸಿಲ್ಕ್ ಸಮಗ್ರ ಯೋಜನೆಯಡಿಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗೆ **2.25** ಲಕ್ಷಗಳನ್ನು **19** ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ ಹಾಗೂ **03** ಫಲಾನುಭವಿಗಳಿಗೆ ವಿಶೇಷ ಘಟಕ ಯೋಜನೆಯಡಿ **0.675** ಲಕ್ಷ ಸಹಾಯಧನ ನೀಡಲಾಗಿದೆ.

2020–21ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (ವಿಶೇಷ ಘಟಕ ಯೋಜನೆ) ಹಿಪ್ಪುನೇರಳೆ ತೋಟದಲ್ಲಿ ಟ್ರಚ್ಚಿಂಗ್ ಮಲ್ಚಿಂಗ್‌ಗೆ **05** ಫಲಾನುಭವಿಗಳಿಗೆ **ರೂ.75000** ಸಾವಿರಗಳ ಸಹಾಯಧನ ನೀಡಲಾಗಿದೆ. ಹಾಗೂ ಮಣ್ಣಿನ ಫಲವತ್ತತೆಗೆ **05** ಫಲಾನುಭವಿಗಳಿಗೆ **ರೂ.44063** ಸಾವಿರಗಳ ಸಹಾಯಧನ ನೀಡಲಾಗಿದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ **7:00** ಹೆಕ್ಟೇರ್ ಪ್ರದೇಶದಲ್ಲಿ **09** ಫಲಾನುಭವಿಗಳಿಗೆ **ರೂ.6.50** ಲಕ್ಷಗಳ ಸಹಾಯಧನವನ್ನು ನೀಡಲಾಗಿರುತ್ತದೆ.

ತಾಲ್ಲೋಕ್ ಪಂಚಾಯತ್ ಕಾರ್ಯಕ್ರಮದಡಿ ನಿಗದಿಪಡಿಸಿದ **ರೂ.0.80** ಲಕ್ಷಗಳ ಅನುದಾನವನ್ನು ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಸಾಕಾಣೆ ಸಲಕರಣೆಗೆ ಸಹಾಯಧನ ನೀಡಲಾಗುವುದು. ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಬೆಳೆಗಳ ಸಂರಕ್ಷಣೆಗಾಗಿ **ರೂ.8.00** ಲಕ್ಷ ಮೌಲ್ಯದ ಹಾಸಿಗೆ ಹಾಗೂ ಸಾಮಾನ್ಯ ಸೋಂಕುನಿವಾರಕಗಳನ್ನು ಮತ್ತು ಸಸ್ಯ ಸಂವರ್ಧಕಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ

*****

ಮೀನುಗಾರಿಕೆ ಇಲಾಖೆ

ಹಾಸನ ಜಿಲ್ಲೆಯು ಮಲೆನಾಡು, ಅರೆಮಲೆನಾಡು ಮತ್ತು ಬಯಲು ಸೀಮೆಯ ಪ್ರದೇಶವನ್ನು ಒಳಗೊಂಡ ವೈವಿಧ್ಯಮಯ ಭೌಗೋಳಿಕ ಪ್ರದೇಶ ಹೊಂದಿದ ಜಿಲ್ಲೆಯಾಗಿದ್ದು ಈ ಜಿಲ್ಲೆಯಲ್ಲಿ ಮೀನುಗಾರಿಕೆಗೆ ವಿಫುಲ ಅವಕಾಶಗಳು ಇವೆ. ಜಿಲ್ಲೆಯಲ್ಲಿ ಒಟ್ಟು 3608 ಕೆರೆಗಳಿದ್ದು, ಅವುಗಳಲ್ಲಿ 172 ದೊಡ್ಡ ಕೆರೆಗಳು (ಇಲಾಖಾ ವ್ಯಾಪ್ತಿಯ ಕೆರೆಗಳು) ಮತ್ತು 3115 ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಕೆರೆಗಳು, 3 ಜಲಾಶಯಗಳು ಮತ್ತು 4 ನದಿಭಾಗಗಳು ಜಿಲ್ಲೆಯಲ್ಲಿ ಹರಿಯುತ್ತಿದ್ದು, ಸಾಕಷ್ಟು ಜಲಸಂಪನ್ಮೂಲಗಳು ಜಿಲ್ಲೆಯಲ್ಲಿ ಲಭ್ಯವಿದೆ.

ಕೆರೆಗಳ ಪೈಕಿ 40 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕಿಂತ ಹೆಚ್ಚಾಗಿರುವ ಕೆರೆಗಳನ್ನು ಇಲಾಖಾ ಕೆರೆಗಳೆಂದು ಮತ್ತು 40 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕಿಂತ ಕಡಿಮೆ ಇರುವ ಕೆರೆಗಳನ್ನು ಗ್ರಾಮಪಂಚಾಯಿತಿ ಕೆರೆಗಳೆಂದು ಸರ್ಕಾರ ವಿಂಗಡನೆ ಮಾಡಿದ್ದು, ಇಲಾಖಾ ಕೆರೆಗಳ ಮೀನುಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಿಂದ ನಿಯಾಮಾನುಸಾರ ವಿಲೇವಾರಿ ಮಾಡಲಾಗುವುದು.

2020–21 ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯಿಂದ ಜಿಲ್ಲಾ ವಲಯ, ರಾಜ್ಯ ವಲಯ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗಿದೆ. 2020–21 ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮಗಳಿಗೆ ಅಂದರೆ ಜಿಲ್ಲಾ ವಲಯ ಕಾರ್ಯಕ್ರಮಗಳಿಗಾಗಿ ರೂ. 94.55 ಲಕ್ಷಗಳು ಮತ್ತು ಕೇಂದ್ರ ವಲಯ ಮತ್ತು ರಾಜ್ಯ ವಲಯ ಕಾರ್ಯಕ್ರಮಗಳಿಗಾಗಿ ರೂ.93.10 ಲಕ್ಷಗಳು ವೆಚ್ಚ ಮಾಡಲಾಗಿದೆ.

2020–21 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಸಾಧಾರಣ ಮಳೆಯಾದ್ದರಿಂದ ಜಿಲ್ಲೆಯ ಜಲ ಸಂಪನ್ಮೂಲಗಳಲ್ಲಿ 163.00 ಲಕ್ಷ ಮೀನುಮರಿಗಳನ್ನು ದಾಸ್ತಾನು ಮಾಡಲು ಸಾಧ್ಯವಾಗಿದೆ.

ಮೀನುಗಾರಿಕೆ ಇಲಾಖೆ

ಜಿಲ್ಲಾ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯಲ್ಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರ

ಮಾರ್ಚ್–2021 ರ ಅಂತ್ಯಕ್ಕೆ

ಕ್ರ ಸಂ.	ಕಛೇರಿಯ ವಿವರ/ ವ್ಯಾಪ್ತಿ		ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ಷರಾ
1	2	4		5	6	7	8
1	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಹಾಸನ ಜಿಲ್ಲಾಮಟ್ಟದ ಕಛೇರಿ	1	ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು	1	1	–	–
		2	ಕಛೇರಿ ಅಧೀಕ್ಷಕರು	1	0	1	–
		3	ಪ್ರಥಮ ದರ್ಜೆ ಸಹಾಯಕರು	1	0	1	
		4	ದ್ವಿತೀಯ ದರ್ಜೆ ಸಹಾಯಕರು	2	1	1	–
		5	ಬೆರಳಚ್ಚುಗಾರರು	1	–	1	–
		6	ವಾಹನ ಚಾಲಕರು	1	–	1	–
		7	ಕಛೇರಿ ಸೇವಕರು	2	02	0	–
			ಒಟ್ಟು	9	04	05	
2	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)ಕಛೇರಿ, ಅರಸೀಕೆರೆ, ಅರಸೀಕೆರೆ ತಾಲ್ಲೂಕು.	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	01	0	–
		2	ಮೀನುಗಾರಿಕೆ ಕ್ಷೇತ್ರಪಾಲಕರು	2	02	0	
			ಒಟ್ಟು	3	03	0	
3	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)ಕಛೇರಿ,ಅರಕಲಗೂಡು	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	0	01	–
		2	ಮೀನುಗಾರಿಕೆ ಮೇಲ್ವಿಚಾರಕರು	1	1	0	–
		3	ಮೀನುಗಾರಿಕೆ ಕ್ಷೇತ್ರಪಾಲಕರು	4	–	4	–
		4	ಕಛೇರಿ ಸೇವಕ	1	–	1	–
			ಒಟ್ಟು	7	01	6	–
4	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)ಕಛೇರಿ, ಆಲೂರು, ಆಲೂರು ತಾಲ್ಲೂಕು.	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	1	–	–
		2	ಕಛೇರಿ ಸೇವಕ	1	–	1	–
			ಒಟ್ಟು	2	1	1	–
5	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)ಕಛೇರಿ, ಬೇಲೂರು, ಬೇಲೂರು, ತಾಲ್ಲೂಕು.	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	0	1	–
		2	ಮೀನುಗಾರಿಕೆ ಕ್ಷೇತ್ರಪಾಲಕರು	3	0	03	–
			ಒಟ್ಟು	4	01	04	–

1	2	3		4	5	6	
6	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2) ಕಛೇರಿ, ಚನ್ನರಾಯಪಟ್ಟಣ ಚನ್ನರಾಯಪಟ್ಟಣ ತಾಲ್ಲೂಕು.	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	0	01	–
		2	ಮೀನುಗಾರಿಕೆ ಕ್ಷೇತ್ರಪಾಲಕರು	2	0	02	–
			ಒಟ್ಟು	3	0	03	–
7	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)ಕಛೇರಿ,ಹೊಳೆನರಸೀಪುರ ಹೊಳೆನರಸೀಪುರ ತಾಲ್ಲೂಕು.	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	1	–	–
		2	ಮೀನುಗಾರಿಕೆ ಕ್ಷೇತ್ರಪಾಲಕರು	2	–	2	–
			ಒಟ್ಟು	3	1	2	–
8	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)ಕಛೇರಿ, ಹಾಸನ, ಹಾಸನ ತಾಲ್ಲೂಕು.	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	1	–	–
		2	ಮೀನುಗಾರಿಕೆ ಕ್ಷೇತ್ರಪಾಲಕರು	4	0	04	–
			ಒಟ್ಟು	5	1	04	–
9	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)ಕಛೇರಿ, ಸಕಲೇಶಪುರ ಸಕಲೇಶಪುರ ತಾಲ್ಲೂಕು.	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	–	01	–
		2	ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು	1	0	01	–
		3	ಮೀನುಗಾರಿಕೆ ಕ್ಷೇತ್ರಪಾಲಕರು	02	–	02	–
			ಒಟ್ಟು	04	0	04	–
10	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)ಕಛೇರಿ, ಗೊರೂರು ಹೇಮಾವತಿ ಜಲಾಶಯ ಮತ್ತು ಜಲಾಶಯದ ಹಿನ್ನೀರು ಭಾಗ	1	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	1	1	–	–
		2	ಮೀನುಗಾರಿಕೆ ಕ್ಷೇತ್ರಪಾಲಕರು	4	–	4	–
			ಒಟ್ಟು	5	1	4	–
			ಎಲ್ಲಾ ಒಟ್ಟು	45	12	33	–

ಜಿಲ್ಲಾ ಪಂಚಾಯತ್, ಹಾಸನ
(ಮೀನುಗಾರಿಕೆ ಇಲಾಖೆ)
2020-21 ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಕರ್ನಾಟಕ 20 ಅಂಶಗಳ ಕಾರ್ಯಕ್ರಮದಡಿ ಅನುಷ್ಠಾನ ಮಡಿದ ಕಾರ್ಯಕ್ರಮದ ವಿವಿಧ
(ಕೆರೆಗಳ ಅಭಿವೃದ್ಧಿ ಮತ್ತು ಮೀನುಮರಿ ಬಿತ್ತನೆ)

ಕ್ರ.ಸ	ಕಾರ್ಯಕ್ರಮದ ವಿವರ	ವಾರ್ಷಿಕ ಭೌತಿಕ ಗುರಿ	ಘಟಕ	ವಿವರ	ಗುರಿ	ಸಾಧನೆ	ಪ್ರತಿಶತ ಸಾಧನೆ	ಷರಾ
1	ಕೆಡಿಪಿಯಂತೆ ಕೆರೆಗಳ ಅಭಿವೃದ್ಧಿ		ಕೆರೆಗಳ ಸಂಖ್ಯೆ	1)ಇಲಾಖಾ ಕೆರೆಗಳ ಅಭಿವೃದ್ಧಿ	110	110	100	
				2)ಗ್ರಾಮಪಂಚಾಯಿತಿ ಕೆರೆಗಳು	120	79	66	
				3)ಮಹಾಮಂಡಳಿಯ ಕೆರೆಗಳು	0	0	0	
				4)ಖಾಸಗಿ ಸಣ್ಣ ಕೆರೆಗಳು	200 ಹೇ	49	25	
	ಒಟ್ಟು				**430**	**238**		
2	ಕೆಡಿಪಿಯಂತೆ ಮೀನುಮರಿ ಬಿತ್ತನೆ		ಮೀನುಮರಿ ಸಂಖ್ಯೆಗಳಲ್ಲಿ	1) ಇಲಾಖಾ ಕೆರೆಗಳಲ್ಲಿ	146.00	82.43	56	
				2)ಜಲಾಶಯಗಳಲ್ಲಿ	14.50	14.20	100	
				3)ಮಹಾಮಂಡಳಿಯ ಕೆರಗಳಲ್ಲಿ	-	-	-	
				4)ಗ್ರಾಮಪಂಚಾಯಿತಿ ಕೆರಗಳಲ್ಲಿ	35.00	30.70	87	
				5)ಖಾಸಗಿ ಸಣ್ಣ ಕೆರಗಳಲ್ಲಿ	8.00	6.00	80	
	ಒಟ್ಟು				**203.50**	**133.33**		

ಜಿಲ್ಲಾ ಪಂಚಾಯತ್, ಹಾಸನ
(ಮೀನುಗಾರಿಕೆ ಇಲಾಖೆ)
2020–21 ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಜಿಲ್ಲಾ ವಲಯ ಕಾರ್ಯಕ್ರಮಗಳ ಅನುಷ್ಠಾನ ಮಾಡಿದ ವಿವರ (ದಿನಾಂಕ:31.03.2021 ರ ಅಂತ್ಯದ ವರೆಗೆ)

ಕ್ರ.ಸಂ	ಕಾರ್ಯಕ್ರಮದ ವಿವರ	ವಾರ್ಷಿಕ ಗುರಿ		ಘಟಕದ ವಿವರ	ಬಿಡುಗಡೆಯಾದ ಅನುದಾನ	ವಾರ್ಷಿಕ ಸಾಧನೆ		ಪ್ರತಿಶತ ಸಾಧನೆ	
		ಆರ್ಥಿಕ	ಭೌತಿಕ			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	2	3	4	5	6	7	8	9	10
1	ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ 2405–00–101–0–28(090)	30.00	30	ಮೀನುಮರಿ ಸರಬರಾಜು	30.00	30.00	–	100	100
2	ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ 2405–00–101–0–28 (422)	3.00	30	ಫಲಾನುಭವಿಗಳು	3	3	30	100	100
3	ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ 2405–00–101–0–28 (423)	2.00	20	ಫಲಾನುಭವಿಗಳು	2	2	20	100	100
4	ಮೀನುಗಾರಿಕೆ ಕಟ್ಟಡಗಳು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ 2405–00–101–0–27(140)	22.53	12	ಕಾಮಗಾರಿಗಳು	22.53	22.53	22.53	100	100
5	ಮೀನುಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯಧನ 2405–00–101–0–30(100)	3.00	30	ಫಲಾನುಭವಿಗಳು	3.00	3.00	30	100	100
6	ವಸ್ತು ಪ್ರದರ್ಶನ ಮತ್ತು ತರಭೇತಿ 2405–00–101–0–32(090)	4.00	8	ಪ್ರದರ್ಶನಗಳು	4.00	3.00	2.999	100	100

ಇಲಾಖೆಯ ಹೆಸರು : ಮೀನುಗಾರಿಕೆ ಇಲಾಖೆ

ರಾಜ್ಯ ವಲಯ ಯೋಜನೆಗಳು

ಕ್ರ.ಸಂ	ಯೋಜನೆಯ ಹೆಸರು	ಆರ್ಥಿಕ ಸಾಧನೆ				ಬೌತಿಕ ಸಾಧನೆ			
		2020–21 ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	2020–21 ರ ಮಾರ್ಚ್ ಅಂತ್ಯಕ್ಕೆ ಖರ್ಚು	ಶೇಕಡ ಸಾಧನೆ	ಗುರಿ	ಸಾಧನೆ	ಶೇಕಡ ಸಾಧನೆ	ಷರಾ
1	2405–00–101–0–56(106) ಮೀನುಗಾರಿಕೆ ಫೈಬರ್ ಗ್ಲಾಸ್ ಹರಿಗೋಲಿಗೆ ಸಹಾಯಧನ	0	0	0	0	0	0	0	
2	2405–00–110–0–02(106) ಮೀನುಗಾರಿಕೆ ಸಲಕರಣೆ ಕಿಟ್ಟಿಗೆ ಸಹಾಯಧನ	8.40	8.40	8.40	100	84	84	100	
3	2405–00–109–0–01 ಸಂಶೋಧನೆ ವಿಸ್ತರಣೆ ವಸ್ತು ಪ್ರದರ್ಶನ ಮತ್ತು ತರಬೇತಿ	0	0	0	0	0	0	0	
4	2405–00–101–0–28–(106) ಒಳನಾಡು ಮೀನುಗಾರಿಕೆ ಮೀನುಮರಿ ಖರೀದಿಸಲು ನೆರವು	1.15	1.15	1.15	100	9	9	100	
5	2401–00–800–1–57(106) ಆರ್.ಕೆ.ವಿ.ವೈ ಮೀನುಗಾರಿಕೆ ಸಲಕರಣೆ ಕಿಟ್ಟಿಗೆ ಸಹಾಯಧನ	0	0	0	0	0	0	0	
6	2401–00–800–1–57(422) ಆರ್.ಕೆ.ವಿ.ವೈ ಮೀನುಗಾರಿಕೆ ಸಲಕರಣೆ ಕಿಟ್ಟಿಗೆ ಸಹಾಯಧನ	0.50	0.50	0.50	100	05	05	100	
7	2401–00–800–1–57(423) ಆರ್.ಕೆ.ವಿ.ವೈ ಮೀನುಗಾರಿಕೆ ಸಲಕರಣೆ ಕಿಟ್ಟಿಗೆ ಸಹಾಯಧನ	0	0	0	0	0	0	0	
8	2401–00–800–1–57(106) ಆರ್‌ಕೆವಿವೈ ಮೀನುಗಾರಿಕೆ ಫೈಬರ್ ಗ್ಲಾಸ್ ಹರಿಗೋಲಿಗೆ ಸಹಾಯಧನ	1.00	1.00	1.00	100	10	10	100	
9	2405–00–101–0–58(106) ಕೇಂದ್ರ ಪುರಸ್ಕೃತ ಯೋಜನೆ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆ	51.82	51.82	51.82	100	6	6	100	
10	2405–00–101–0–58(422) ಕೇಂದ್ರ ಪುರಸ್ಕೃತ ಯೋಜನೆ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆ	4.50	4.50	4.50	100	1	1	100	
11	2401–00–800–1–57(423) ಆರ್‌ಕೆವಿವೈ ಮೀನುಗಾರಿಕೆ ಫೈಬರ್ ಗ್ಲಾಸ್ ಹರಿಗೋಲಿಗೆ ಸಹಾಯಧನ	0	0	0	0	0	0	0	

12	ಆರ್‌ಕೆವಿವೈ ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ	12.36	12.36	12.36	100	3	3	100	
13	ರಾಜ್ಯ ವಲಯ ಯೋಜನೆ ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ 2405–00–101–0–54	0	0	0	0	0	0	0	
14	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದಿರುವ ಮೊತ್ತ 2405–00–101–0–66(422) 13 (ಚಿ) ಮೀನುಕೊಳ ನಿರ್ಮಾಣ ಹಾಗೂ ಹೂಡಿಕೆ ವೆಚ್ಚ	0	0	0	0	0	0	0	
	13 (ಛ)ಮೀನುಗಾರಿಕೆ ಸಲಕರಣೆ ಕಿಟ್ಟು ಹಾಗೂ ಫೈಬರ್‌ಗ್ಲಾಸ್ ಹರಿಗೋಲು ವಿತರಣೆ (422)	0	0	0	0	0	0	0	
	ಮೀನುಗಾರಿಕೆ ಸಲಕರಣೆ ಕಿಟ್ಟು ಹಾಗೂ ಫೈಬರ್‌ಗ್ಲಾಸ್ ಹರಿಗೋಲು ವಿತರಣೆ 13 (ಛಿ) 2405–00–101–0–66 (423)	0	0	0	0	0	0	0	
15	ರಾಜ್ಯವಲಯ ವಿಶೇಷ ಘಟಕ ಯೋಜನೆ 2405–00–101–0–66 (422) ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯ	0.70	0.70	0.70	100	2	2	100	
	ರಾಜ್ಯವಲಯ ವಿಶೇಷ ಘಟಕ ಯೋಜನೆ 2405–00–101–0–66 (423) ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯ	0.35	0.35	0.35	100	1	1	100	
	ತರಬೇತಿ ಮತ್ತಿ ಶೈಕ್ಷಣಿಕ ಪ್ರವಾಸ 2405–00–101–0–66(422)	0	0	0	0	0	0	0	
16	ರಾಜ್ಯ ವಲಯ ಗಿರಿಜನ ಉಪಯೋಜನೆ 2405–00–796–0–00 (423) ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯ	0	0	0	0	0	0	0	
17	ಮತ್ಸ್ಯ ಕೃಷಿ ಆಶಾ ಕಿರಣ	12.32	12.32	12.32	100	33	33	100	

2020–21 ನೇ ಸಾಲಿನ ಹಾಸನ ಜಿಲ್ಲೆಯ ಇಲಾಖಾ ಕೆರೆಗಳು, ಜಲಾಶಯಗಳು ಮತ್ತು ನದಿ ಭಾಗಗಳನ್ನು ವಿಲೇವಾರಿ ಮಾಡಿದ ವಿವರ ಈ ಕೆಳಗಿನಂತಿದೆ.

(ದಿನಾಂಕ 31.03.2021 ರ ಅಂತ್ಯಕ್ಕೆ)

ಕ್ರ.ಸಂ	ವಿವರ	ಗುತ್ತಿಗೆ		ಟೆಂಡರ್ ಕಂ ಹರಾಜು		ಪರವಾನಿಗೆ		ಒಟ್ಟು		ಷರಾ
		ಸಂಖ್ಯೆ	ಆದಾಯ	ಸಂಖ್ಯೆ	ಆದಾಯ	ಸಂಖ್ಯೆ	ಆದಾಯ	ಸಂಖ್ಯೆ	ಆದಾಯ	
1	2	3	4	5	6	7	8	9	10	–
1	ಇಲಾಖೆ ಕೆರೆ	16	312904	94	1419895	0	0	110	1732799	–
2	ಜಲಾಶಯ	–	–	–	0	295	845000	295	845000	–
3	ನದಿಭಾಗ	–	–	–	–	82	122500	82	122500	–

ಯೋಜನೇತರ ವೆಚ್ಚ:–

ಮೀನುಗಾರಿಕೆ ಇಲಾಖೆ ಹಾಸನ ಜಿಲ್ಲೆಗೆ 2020–21 ನೇ ಸಾಲಿನಲ್ಲಿ ಯೋಜನೇತರ ಕಾರ್ಯಕ್ರಮಗಳಿಗಾಗಿ ಲಿಂಕ್ ಪ್ಲಾನಿನಲ್ಲಿ ವೇತನಕ್ಕಾಗಿ ರೂ. 114.01 ಲಕ್ಷ ನಿಗದಿಯಾಗಿದ್ದು ಜಿಲ್ಲಾ ಪಂಚಾಯತ್ ನಿಂದ ರೂ. 114.01 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ. 62.38 ಲಕ್ಷ ಖರ್ಚಾಗಿರುತ್ತದೆ. ಈ ಕಛೇರಿ ವೆಚ್ಚಕ್ಕಾಗಿ ರೂ. 5.24 ಲಕ್ಷ ಬಿಡುಗಡೆಯಾಗಿದ್ದು ರೂ. 5.24 ಖರ್ಚಾಗಿರುತ್ತದೆ ಹಾಗೂ ಹೊರಗುತ್ತಿಗೆ ಸಿಬ್ಬಂದಿ ವೇತನಕ್ಕಾಗಿ ರೂ. 36.06 ಲಕ್ಷ ಬಿಡುಗಡೆಯಾಗಿದ್ದು, 31.91 ಲಕ್ಷ ಖರ್ಚಾಗಿರುತ್ತದೆ.

ಒಳನಾಡು ಮೀನುಗಾರಿಕೆಯಿಂದ ಬಂದ ಆದಾಯದ ವಿವರಗಳು 2020–21 (ರೂ.ಲಕ್ಷಗಳಲ್ಲಿ)

1	ಬಾಡಿಗೆ	1727914
2	ಒಳನಾಡು ಮೀನುಗಾರಿಕೆ ಪರವಾನಿಗೆ ಶುಲ್ಕ	146622
3	ಜಲಾಶಯ ಮೀನುಗಾರಿಕೆ ಅಭಿವೃದ್ಧಿ ಘಟಕಗಳಿಂದ ಪರವಾನಿಗೆ ಶುಲ್ಕ	840500
4	ಮೀನುಮರಿ ಮಾರಾಟ	587170
5	ಸಲ್ಲಿಸಿದ ಸೇವೆಗಳ ವಸೂಲಿ	8228
6	ಮತ್ಸ್ಯಾಲಯದಿಂದ ಬಂದ ಆದಾಯ	4745
7	ಮೀನು ಮಾರುಕಟ್ಟೆ ಮತ್ತು ನಿರ್ಮಾಣ ಸಾಲಗಳ ವಸೂಲಿ	0
8	ಮೀನುಗಾರಿಕೆ ಸಹಾಕಾರ ಸಂಘಗಳಿಗೆ ಸಾಲಗಳು ಮೀನುಗಾರಿಕೆ ಅಗತ್ಯಗಳ ಖರೀದಿಗಾಗಿ ಸಾಲ	0
9	ಇತರೆ ಜಮೆಗಳು	0
	ಒಟ್ಟು	**3315179**

ಸಾಮಾಜಿಕ ಅರಣ್ಯ ಇಲಾಖೆ

ಸಾಮಾಜಿಕ ಅರಣ್ಯ ವಿಭಾಗ, ಹಾಸನ ದಿನಾಂಕ:06–03–1984 ರಿಂದ ಸಾಮಾಜಿಕ ಅರಣ್ಯ ಯೋಜನೆ, ಜಿಲ್ಲಾ ಪಂಚಾಯತ್, ಹಾಸನ ಎಂದು ಅಸ್ತಿತ್ವಕ್ಕೆ ಬಂದಿರುತ್ತದೆ. ಈ ವಿಭಾಗದ ಕೇಂದ್ರ ಸ್ಥಾನವು ಹಾಸನದಲ್ಲಿ ನಿಗಧಿಯಾಗಿರುತ್ತದೆ.

ಈ ವಿಭಾಗದಲ್ಲಿ ಎರಡು ಉಪ ವಿಭಾಗಗಳು ಸೇರಿದ್ದು, ಅವುಗಳನ್ನು ಹಾಸನ ಹಾಗೂ ಅರಸೀಕೆರೆ ಎಂದು ವಿಭಜಿಸಲಾಗಿರುತ್ತದೆ.

ಹಾಸನ ಉಪ ವಿಭಾಗಕ್ಕೆ ಹಾಸನ, ಆಲೂರು, ಬೇಲೂರು, ಸಕಲೇಶಪುರ, ಅರಕಲಗೂಡು ತಾಲ್ಲೂಕುಗಳು ಹಾಗೂ ಅರಸೀಕೆರೆ ಉಪ ವಿಭಾಗಕ್ಕೆ ಅರಸೀಕೆರೆ, ಹೊಳೆನರಸೀಪುರ, ಚನ್ನರಾಯಪಟ್ಟಣ ತಾಲ್ಲೂಕುಗಳು ಸೇರಿರುತ್ತದೆ.

ಈ ವಿಭಾಗದ ಪ್ರಮುಖ ಉದ್ದೇಶ ಅರಣ್ಯೇತರ ಜಮೀನಿನಲ್ಲಿ ಅರಣ್ಯ ಹೊದಿಕೆ ಹೆಚ್ಚಿಸುವುದು ರೈತರಿಗೆ ಹಾಗೂ ಸಂಘ ಸಂಸ್ಥೆಗಳಿಗೆ, ಗ್ರಾಮೀಣ ಜನರು, ಅರೆ ಗ್ರಾಮೀಣ ಜನರಿಗೆ ಅರಣ್ಯದ ಬಗ್ಗೆ ಹಾಗೂ ಅರಣ್ಯ ಉತ್ಪತ್ತಿಗಳ ಬಗ್ಗೆ ಅರಿವು ಉಂಟು ಮಾಡುವುದು ಮತ್ತು ಅತ್ಯವಶ್ಯವಾದ ಉರುವಲು, ಮೇವು, ನಾಟಾ ಬಿದಿರು, ಮರದ ಎಲೆಗಳು ಹಾಗೂ ಇತರೆ ಅರಣ್ಯ ಉತ್ಪನ್ನಗಳು ಹಾಗೂ ಉಪಯೋಗಕ್ಕೆ ಬರಬಹುದಾದ ಹಣ್ಣಿನ ಗಿಡಗಳನ್ನು ಅವರೇ ಬೆಳೆಸಿಕೊಳ್ಳಲು ಪ್ರೋತ್ಸಾಹಿಸಲಾಗಿರುತ್ತದೆ.

ಮುಂದುವರೆದು ಜನ ಸಾಮಾನ್ಯರಿಗೆ ಉದ್ಯೋಗ ಅವಕಾಶ ಕಲ್ಪಿಸುವ ಸಾಮರ್ಥ್ಯ ಹೊಂದಿರುತ್ತದೆ. ಈ ರೀತಿ ಜನ ಸಾಮಾನ್ಯರಿಗೆ, ರೈತರಿಗೆ ಇನ್ನೂ ಹೆಚ್ಚಿನ ವರಮಾನ ದೊರಕಿಸಿ ಕೊಡುವ ಪಾತ್ರವಹಿಸುತ್ತದೆ.

1. ಮೀಸಲು ಅರಣ್ಯದ ಸಂವಿಧಾನ : ಈ ವಿಭಾಗವು ಸಾಮಾಜಿಕ ಅರಣ್ಯದ ಹೊಣೆಗಾರಿಕೆಯನ್ನು ಮಾತ್ರ ನಿಭಾಯಿಸುತ್ತದೆ.
2. ರಕ್ಷಿತ ಅರಣ್ಯದ ಉಸ್ತುವಾರಿ : ಈ ವಿಭಾಗಕ್ಕೆ ಅನ್ವಯಿಸುವುದಿಲ್ಲ
3. ರೆಗೂಲೇಷ್‌ನ್ ಕಂಟ್ರೋಲ್ ಮತ್ತು ರೆಗ್ಯುಲರ್ ವರ್ಕಿಂಗ್ ಪ್ಲಾನ್ ಪೂರ್ವಭಾವಿಯಾದ ಕಾರ್ಯಯೋಜನೆ ಈ ವಿಭಾಗಕ್ಕೆ ಅನ್ವಯಿಸುವುದಿಲ್ಲ.
4. ಅರಣ್ಯ ಇಲಾಖಾ ಸಸ್ಯ ಕ್ಷೇತ್ರಗಳು :

ಸಾಮಾಜಿಕ ಅರಣ್ಯ ಉಪವಿಭಾಗ, ಹಾಸನ.

1. ಹಾಸನ : ಹಾಲುವಾಗಿಲು, ಚಿಕ್ಕಕಡಲೂರು
2. ಆಲೂರು : ಬಾಗೆ
3. ಬೇಲೂರು : ಯಗಚಿ
4. ಅರಕಲಗೂಡು : ಗೊರೂರು
5. ಸಕಲೇಶಪುರ : ಬೆಳ್ಳೆಕೆರೆ

ಸಾಮಾಜಿಕ ಅರಣ್ಯ ಉಪವಿಭಾಗ, ಅರಸೀಕೆರೆ :

1. ಅರಸೀಕೆರೆ : ಬೋರನಕೊಪ್ಪಲು, ಜಾಜೂರು
2. ಹೊಳೆಸರಸೀಪುರ : ಶ್ರವಣೂರು, ಗನ್ನಿಕಡ.
3. ಚನ್ನರಾಯಪಟ್ಟಣ : ಜೆ. ಹಿರೇಹಳ್ಳಿ, ಜಂಬೂರು.

ಮೇಲ್ಕಾಣಿಸಿದ ವಲಯಕ್ಕೆ ಸಂಬಂಧಪಟ್ಟ ಸಸ್ಯಕ್ಷೇತ್ರಗಳಲ್ಲಿ ಇಲಾಖಾ ನೆಡುತೋಪುಗಳಿಗೆ ಅಗತ್ಯವಿರುವ ಮತ್ತು ರೈತರು ಅಪೇಕ್ಷೆ ಪಡುವ ಸಸಿಗಳನ್ನು ಬೆಳೆಸಲಾಗಿರುತ್ತದೆ. ಯಾವುದೇ ವಿಕೇಂದ್ರಿಕೃತ ಸಸ್ಯಕ್ಷೇತ್ರಗಳನ್ನು ಈ ವಿಭಾಗ ಹೊಂದಿರುವುದಿಲ್ಲ. ರೈತರಿಗಳಿಗೆ ಅರಣ್ಯೀಕರಣದ ಬಗ್ಗೆ ಆಸಕ್ತಿ ಬರುವ ಉದ್ದೇಶದಿಂದ ಕೆಲವು ಕಾಯಾಗಾರಗಳನ್ನು ಏರ್ಪಡಿಸಲಾಗುತ್ತದೆ.

1. **<u>ವೃಕ್ಷವೃದ್ಧಿ ಮತ್ತು ಪಾಲನೆ :</u>**

ಈ ವಿಭಾಗದ ವತಿಯಿಂದ ನೆಡುತೋಪುಗಳನ್ನು ಬೆಳೆಸುವುದು. ಇಲಾಖಾ ವತಿಯಿಂದ ರೈತರ ಜಮೀನುಗಳಲ್ಲಿ ಸಸಿಗಳನ್ನು ನೆಡುವುದರ ಮೂಲಕ ರೈತರಿಗೆ ಸಸಿಗಳನ್ನು ವಿತರಿಸಿ ಅವರ ಜಮೀನುಗಳಲ್ಲಿ ಸಸಿಗಳನ್ನು ಬೆಳೆಸುವುದರ ಮೂಲಕ ವೃಕ್ಷಗಳ ಅಭಿವೃದ್ಧಿ ಮತ್ತು ಪಾಲನೆ ಮಾಡಲಾಗುತ್ತಿದೆ.

ಕೃತಕ ಪುನಃಶ್ಚೇತನ ಯೋಜನೆಗಳಲ್ಲಿ ಬೆಳೆಸಲಾಗಿದ್ದು ವಿವಿಧ ರೀತಿಯ ನೆಡುತೋಪುಗಳ ವಿವರ ಈ. ಕೆಳಕಂಡಂತೆ ಇದೆ

ಕ್ರ.ಸಂ.	ನೆಡುತೋಪು ವಿಧ	ವಿಸ್ತೀರ್ಣ (ಹೆ./ಕಿ.ಮೀ)	ಷರಾ
1	ತೇಗ, ಸಿಲ್ವರ್, ಇತರೆ, ಮಿಶ್ರ ನೆಡುತೋಪು (ರೈತರ ಜಮೀನಿನಲ್ಲಿ)	–	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 3247 ರೈತರಿಗೆ 6.35 ಲಕ್ಷ ಸಸಿ ನೆಟ್ಟು ಕೊಡಲಾಗಿದೆ.
2	ಶಾಲಾವನ	231 ಹೆ	ಎಂ.ಜಿ.ಎನ್.ಆರ್.ಇ.ಜಿ.ಎ
3	ರಸ್ತೆಬದಿ	56 ಕಿ.ಮೀ.	ಎಂ.ಜಿ.ಎನ್.ಆರ್.ಇ.ಜಿ.ಎ–53 ಕಿ.ಮೀ ಆರ್.ಎಸ್.ಪಿ
4	ನಾಲಾಬದಿ	–	
5	ಪವಿತ್ರ ವನ /ಗುಂಡುತೋಪು	–	
6	ಹಣ್ಣಿನ ನೆಡುತೋಪು ಮತ್ತು ಉರುವಲು	–	
7	ಕೆರೆ ಅಂಗಳ ನೆಡುತೋಪು	–	–
8	ಬ್ಲಾಕ್ ನೆಡುತೋಪು	–	ಕೆ.ಎಸ್.ಎಫ್–137ಹೆ. ಎಂ.ಜಿ.ಎನ್.ಆರ್.ಇ.ಜಿ.ಎ–40ಹೆ ನಗರ ಹಸೀರಿಕರಣ–6 ಹೆ
9	ರೈತರ ಜಮೀನಿನಲ್ಲಿ ನೆಡುತೋಪು ನಿರ್ಮಾಣ	340 ಯೂನಿಟ್	ಬದು ನೆಡುತೋಪು–100 ಯೂನಿಟ್ ಕಡಿಮೆ ಸಾಂದ್ರತೆ ನೆಡುತೋಪು–220 ಯೂನಿಟ್ ಹೆಚ್ಚು ಸಾಂದ್ರತೆ ನೆಡುತೋಪು–10 ಯೂನಿಟ್ 1000–1200 ಸಸಿಗಳ ನೆಡುತೋಪು– 10 ಯೂನಿಟ್
10			
	ಒಟ್ಟು	**414 ಹೆಕ್ಟೇರ್**	
		56 ಕಿ.ಮೀ	
		340 ಯೂನಿಟ್	

1. ಈ ವಿಭಾಗಕ್ಕೆ ಬೇಕಾಗುವ ಬೀಜಗಳನ್ನು ಸಾಮಾನ್ಯವಾಗಿ ಇಲಾಖಾ ಬೀಜ ಘಟಕಗಳ ಮುಖಾಂತರವೇ ಹೆಚ್ಚಾಗಿ ಪಡೆಯಲಾಗಿರುತ್ತದೆ. ಹಾಗೂ ಅಗತ್ಯವಿರುವ ಮಡಿ ಸಸಿಗಳನ್ನು ಉತ್ಕೃಷ್ಟ ಖಾಸಗಿ ನರ್ಸರಿಯಿಂದ ಪಡೆಯಲಾಗುತ್ತಿದೆ.
2. ಅರಣ್ಯ ಉಪಯುಕ್ತತೆ : ಈ ವಿಭಾಗಕ್ಕೆ ಅನ್ವಯಿಸುವುದಿಲ್ಲ.
3. ಅರಣ್ಯ ಉದ್ಯಮ : ಈ ವಿಭಾಗಕ್ಕೆ ಅನ್ವಯಿಸುವುದಿಲ್ಲ.

ದಿನಾಂಕ: 01–04–2020 ರಿಂದ 31–03–2021ರ ವರೆಗೆ ಈ ಕೆಳಕಂಡ ಅಧಿಕಾರಿಗಳು ಈ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ.

ಕ್ರ.ಸಂ.	ಹುದ್ದೆ	ಅಧಿಕಾರಿಯ ಹೆಸರು		ಸೇವೆಯ ಅವಧಿ	
				ಇಂದ	ವರೆಗೆ
1	ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ.	1	ಹೆಚ್. ಅನುಪಮ,	14–10–2019	31–03–2021
2	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಹಾಸನ.	1	ಶ್ರೀ ರವೀಂದ್ರ ಪಿ.ಸಿ.	25–01–2021	31–03–2021
3	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಅರಸೀಕೆರೆ.	1	ಎಮ್.ಎನ್.ಸುರೇಶ್	19–09–2018	31–03–2021
4	ವಲಯ ಅರಣ್ಯ ಅಧಿಕಾರಿ ಸಾಮಾಜಿಕ ಅರಣ್ಯ ವಲಯ, ಹಾಸನ.	1	ಶ್ರೀಮತಿ ಶೃತಿ ಬಿ.ಎಂ.	23–10–2020	31–03–2021
5	ವಲಯ ಅರಣ್ಯಾಧಿಕಾರಿ, ಪ್ರಭಾರ ಸಾಮಾಜಿಕ ಅರಣ್ಯ ವಲಯ, ಬೇಲೂರು.	1	ಕು॥ ವೈ.ಎಂ. ಶ್ವೇತ	17–09–2018	31–03–2021
6	ವಲಯ ಅರಣ್ಯಾಧಿಕಾರಿ, ಪ್ರಭಾರ ಸಾಮಾಜಿಕ ಅರಣ್ಯ ವಲಯ, ಚನ್ನರಾಯಪಟ್ಟಣ.	1	ಶ್ರೀ ಪ್ರಸನ್ನಕುಮಾರ್ ಕೆ.ಆರ್	02–04–2018	31–03–2021
7	ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಸಕಲೇಶಪುರ.	1	ಶ್ರೀ ಗವಿಯಪ್ಪ	18–08–2017	31–03–2021
8	ವಲಯ ಅರಣ್ಯಾಧಿಕಾರಿ, ಪ್ರಭಾರ ಸಾಮಾಜಿಕ ಅರಣ್ಯ ವಲಯ, ಹೊಳೆನರಸೀಪುರ.	1	ಶ್ರೀ ಚಂದನ್ ಆರ್	16–07–2019	31–03–2021
9	ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ,	1	ಕು॥ ಪಲ್ಲವಿ ಜೆ.ಎಂ.	25–07–2019	31–03–2021
10	ವಲಯ ಅರಣ್ಯಾಧಿಕಾರಿ, ಪ್ರಭಾರ ಸಾಮಾಜಿಕ ಅರಣ್ಯ ವಲಯ, ಅರಸೀಕೆರೆ.	1	ಶ್ರೀಮತಿ ಶ್ರೀಲಕ್ಷ್ಮೀ	03–12–2018	31–03–2021

ಕಛೇರಿ ಸಿಬ್ಬಂದಿ :

ಒಟ್ಟಾರೆ 2020–21ನೇ ಸಾಲಿಗೆ ಹಾಸನ ಸಾಮಾಜಿಕಅರಣ್ಯ ವಿಭಾಗಕ್ಕೆ ಮಂಜೂರಾದ ಸಿಬ್ಬಂದಿ ವಿವರ ಈ ಕೆಳಕಂಡಂತೆ ಇದೆ.

ಹುದ್ದೆಯ ಹೆಸರು	ಮಂಜೂರಾದ ಹುದ್ದೆಯ ಸಂಖ್ಯೆ	ಭರ್ತಿಯಾದ ಹುದ್ದಗಳು	ಖಾಲಿ ಹುದ್ದೆಗಳು
ಉಪ ಅರಣ್ಯ ಸಂರಕ್ಷಣಾಧಿಕಾರಿ	01	01	–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	02	02	–
ವಲಯ ಅರಣ್ಯಾಧಿಕಾರಿ	07	07	–
ಅಧೀಕ್ಷಕರು	01	–	01
ಪ್ರಥಮ ದರ್ಜೆ ಸಹಾಯಕರು	03	02	01
ದ್ವಿತೀಯ ದರ್ಜೆ ಸಹಾಯಕರು	05	05	–
ಬೆರಳಚ್ಚುಗಾರರು	01	–	01
ಉಪ ವಲಯ ಅರಣ್ಯಾಧಿಕಾರಿ	16	12	04
ಅರಣ್ಯ ರಕ್ಷಕರು	13	08	05
ವಾಹನ ಚಾಲಕರು	04	–	04
ಕಛೇರಿ ಸೇವಕರು	02	–	02
ಒಟ್ಟು	**55**	**37**	**18**

1. <u>ಅರಣ್ಯ ಶಿಕ್ಷಣ ಮತ್ತು ತರಬೇತಿ</u> :– (2020–21ನೇ ಸಾಲಿನಲ್ಲಿ ತರಬೇತಿ ಪಡೆದವರ ವಿವರ)

ಕ್ರ.ಸಂ	ಹುದ್ದೆ/ ಹೆಸರು/ ಶ್ರೀಯುತ	ತರಬೇತಿ ಸ್ಥಳ	ತರಬೇತಿ ಅವಧಿ	ತರಬೇತಿ ವಿಷಯ
1	ಕು॥ ಶ್ವೇತ ವೈ.ಎಂ. ವಲಯ ಅರಣ್ಯಾಧಿಕಾರಿ ಶ್ರೀ. ತ್ರಿಮೂರ್ತಿ ಡಿ.ಎನ್. ಉಪ ವಲಯ ಅರಣ್ಯಾಧಿಕಾರಿ	ತರಬೇತಿ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು	01–09–2020 ರಿಂದ 03–09–2020	Web based online training programme on 'Mainstreaming Disaster Risk Reduiction for Resilent infrastructure'
2	ಶ್ರೀ. ಪ್ರಸನ್ನ ಕುಮಾರ್ ಕೆ.ಆರ್., ವಲಯ ಅರಣ್ಯಾಧಿಕಾರಿ	ತರಬೇತಿ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು	13–10–2020	ವಿಪತ್ತು ಅಪಾಯ ಆಡಳಿತ ಬಲಪಡಿಸುವಿಕೆ ಕುರಿತು ಆನ್‌ಲೈನ್ ತರಬೇತಿ
3	ಕು॥ ಶ್ವೇತ ವೈ.ಎಂ. ವಲಯ ಅರಣ್ಯಾಧಿಕಾರಿ ಕು॥ ಪಲ್ಲವಿ ಜೆ.ಎಂ. ವಲಯ ಅರಣ್ಯಾಧಿಕಾರಿ	ತರಬೇತಿ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು	19–10–2020 ರಿಂದ 20–10–2020	ನಗರ ಅಪಾಯ ನಿರ್ವಹಣೆ ಕುರಿತು ಆನ್‌ಲೈನ್ ತರಬೇತಿ
4	ಶ್ರೀ. ಪಿ.ಸಿ. ರವೀಂದ್ರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ. ಚಂದನ್ ಆರ್. ವಲಯ ಅರಣ್ಯಾಧಿಕಾರಿ	ತರಬೇತಿ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು	28–01–2021 ರಿಂದ 30–01–2021	ಪರಿಶಿಷ್ಟ ಜಾತಿ ಸಮುದಾಯಗಳ ಕಲ್ಯಾಣ ಮತ್ತು ಸಬಲೀಕರಣ ಕುರಿತು ಆನ್‌ಲೈನ್ ತರಬೇತಿ
3	ಶ್ರೀ. ಪಿ.ಸಿ. ರವೀಂದ್ರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	ತರಬೇತಿ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು	09–02–2021 ರಿಂದ 10–02–2021	ಕೈಗಾರಿಕ ಮತ್ತು ರಾಸಾಯನಿಕ ವಿಪತ್ತು ಅಪಾಯ ಮಿತಗೊಳಿಸುವಿಕೆ ಮತ್ತು ನಿರ್ವಹಣೆ ಕುರಿತು ಆನ್‌ಲೈನ್ ತರಬೇತಿ

4. <u>ಇತರೆ : 2020–21ನೇ ಸಾಲಿನಲ್ಲಿ</u>

1. ಅಪಘಾತ ಪ್ರಕರಣಗಳು	:	ಯಾವುದು ಇರುವುದಿಲ್ಲ.
2. ನಿಧನ ಪ್ರಕರಣಗಳು	:	ಯಾವುದು ಇರುವುದಿಲ್ಲ.
3. ಸೇವೆ ಬಿಟ್ಟು ಪ್ರಕರಣಗಳು	:	ಯಾವುದು ಇರುವುದಿಲ್ಲ.
4. ಇಲಾಖಾ ವಿಚಾರಣೆಗಳು	:	ಯಾವುದು ಇರುವುದಿಲ್ಲ.

ಇ) **<u>ವಯೋ ನಿವೃತ್ತಿ :</u>**

1. ಶ್ರೀಮತಿ ಎಸ್.ಟಿ. ಲಕ್ಷ್ಮೀಕಾಂತಮ್ಮ, ಅಧೀಕ್ಷಕರು, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ದಿನಾಂಕ: 30–06–2020 ರಂದು ವಯೋ ನಿವೃತ್ತಿ ಹೊಂದಿರುತ್ತಾರೆ.
2. ಶ್ರೀ ದೇವರಾಜಯ್ಯ, ಉಪ ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಅರಕಲಗೂಡು ಇವರು ದಿನಾಂಕ 30–06–2020 ರಂದು ವಯೋ ನಿವೃತ್ತಿ ಹೊಂದಿರುತ್ತಾರೆ.
3. ಶ್ರೀ ರಾಮ, ಕಛೇರಿ ಸೇವಕರು, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ದಿನಾಂಕ: 31–08–2020 ರಂದು ವಯೋ ನಿವೃತ್ತಿ ಹೊಂದಿರುತ್ತಾರೆ.
4. <u>ಸಂಶೋಧನೆ ಮತ್ತು ಪ್ರಾಯೋಗಿಕತೆ</u> : ಈ ಕಾರ್ಯಕ್ರಮ ಈ ವಿಭಾಗಕ್ಕೆ ಅನ್ವಯಿಸುವುದಿಲ್ಲ.

ಈ ವಿಭಾಗಕ್ಕೆ 2020–21ನೇ ಸಾಲಿನಲ್ಲಿ ಈ ಕೆಳಕಂಡ ಮೂಲಗಳಿಂದ ಬಂದಿರುವ ಆದಾಯದ ವಿವರ:

ಕ್ರ.ಸಂ.	ವಿವರ	ರೂ.ಲಕ್ಷಗಳಲ್ಲಿ
1	ಸಸಿಗಳ ಮಾರಾಟದಿಂದ	**6.066**
2	ನೀಲಗಿರಿ ಎಲೆ ಹರಾಜಿನಿಂದ	**4.317**
3	ನೆಡುತೋಪುಗಳ ಕತರಾವಣೆಯಿಂದ/ ಹರಾಜಿನಿಂದ	**5.34**
	ಒಟ್ಟು	**15.723**

1. 2020–21 ನೇ ಸಾಲಿನಲ್ಲಿ ಪಂಚ ವಾರ್ಷಿಕ ಯೋಜನೆಯಡಿಯಲ್ಲಿ ಜಿಲ್ಲಾ ಪಂಚಾಯತ್ ಮತ್ತು ರಾಜ್ಯ ಸರ್ಕಾರಗಳ ಅನುದಾನದ ನೆರವಿನಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗಿರುತ್ತದೆ.

1. <u>ಜಿಲ್ಲಾ ವಲಯ ಯೋಜನೆಗಳು :</u>

1. 2406–101–0826–01 ಸಾಮಾಜಿಕ ಅರಣ್ಯ (ವೇತನ)
2. 2406–101–0828 ಕಟ್ಟಡಗಳು
3. 2406–101–0827 ಸಾಮಾಜಿಕ ಅರಣ್ಯ (ಎಸ್‌ಡಿಪಿ/ಕೆಎಸ್‌ಎಫ್)
4. 2406–101–0826–01 ಸಾಮಾಜಿಕ ಅರಣ್ಯ (ಯೋಜನೇತರ)

2. <u>ರಾಜ್ಯ ವಲಯ ಯೋಜನೆಗಳು :</u>

1. ರಸ್ತೆ ಬದಿ ನೆಡುತೋಪು ಯೋಜನೆ 4406–01–101–0–03
2. ಹಸಿರು ಕರ್ನಾಟಕ 4406–01–101–0–03
3. ಸಾರ್ವಜನಿಕರ ವಿತರಣೆಗಾಗಿ ಸಸಿಗಳನ್ನು ಬೆಳೆಸುವ ಯೋಜನೆ 4406–01–101–0–03
4. ನಗರ ಹಸಿರೀಕರಣ 4406–01–101–0–03
5. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ 2406–01–101–2–83
6. ಕೆಎಫ್‌ಡಿಎಫ್ ಫೆಕ್ಸಿಫಂಡ್ 4406–01–101–0–02

3. <u>ಕೇಂದ್ರ ಪುರಸ್ಕೃತ ಯೋಜನೆ :</u>

1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
2. ಎಸ್‌ಎಂಎಎಫ್ (sub-Mission on Agro Forestry)

<u>ಜಿಲ್ಲಾ ವಲಯ ಯೋಜನೆ</u>

1. 2406–00–101–0–26 ಸಾಮಾಜಿಕ ಅರಣ್ಯ (ವೇತನ ಯೋಜನೇತರ)

ಈ ಯೋಜನೆಯಲ್ಲಿ 2020–21 ನೇ ಸಾಲಿಗೆ ಲಿಂಕ್ ಡಾಕ್ಯಮೆಂಟ್ ಪ್ರಕಾರ ರೂ.860.04ಲಕ್ಷ ಅನುದಾನ ನಿಗಧಿ ಪಡಿಸಿದ್ದು, ಜಿಲ್ಲಾ ಪಂಚಾಯತ್, ಹಾಸನದಿಂದ ರೂ.813.93 ಲಕ್ಷ ಬಿಡುಗಡೆ ಮಾಡಿರುತ್ತಾರೆ. ಈ ಅನುದಾನವನ್ನು ಈ ಕೆಳಕಂಡಂತೆ ವೆಚ್ಚ ಭರಿಸಲಾಗಿರುತ್ತದೆ.

ಕ್ರ.ಸಂ.	ಕಾಮಗಾರಿ ವಿವರ	ಭೌತಿಕ ಸಂಖ್ಯೆ	ರೂ. ಲಕ್ಷಗಳಲ್ಲಿ
1	ಸಿಬ್ಬಂದಿ ವೇತನ ಇತ್ಯಾದಿ	55	243.43
2	ವಾಹನ ನಿರ್ವಹಣೆ	12	16.48
3	ಕಛೇರಿ ವೆಚ್ಚಗಳು, ದಿನಗೂಲಿ ನೌಕರರ ವೇತನ/ಹೊರಗುತ್ತಿಗೆ ನೌಕರರ ವೇತನ ಇತ್ಯಾದಿ.	71	360.757
	ಒಟ್ಟು	**138**	**620.667**

2. 2406–00–101–0828 ಕಟ್ಟಡಗಳು

ಈ ಯೋಜನೆಯಡಿಯಲ್ಲಿ 2020–21ನೇ ಸಾಲಿಗೆ ಸರ್ಕಾರಿ ಲಿಂಕ್ ಡಾಕ್ಯುಮೆಂಟ್ ಪ್ರಕಾರ ರೂ.46.08 ಲಕ್ಷ ಅನುದಾನ ನಿಗಧಿ ಪಡಿಸಿದ್ದು, ಜಿಲ್ಲಾ ಪಂಚಾಯತ್, ಹಾಸನದಿಂದ ಸದರಿ ಅನುದಾನವನ್ನು ಪಿಆರ್‌ಇಡಿ ಇಲಾಖೆಯಿಂದ ವೆಚ್ಚ ಭರಿಸಲಾಗಿದೆ.

3. 2406–101–0827 ಸಾಮಾಜಿಕ ಅರಣ್ಯ ಯೋಜನೆ (ಕೆಎಸ್‌ಎಫ್)

ಈ ಯೋಜನೆಯು ರಾಜ್ಯ ವಲಯ ಯೋಜನೆಯಾಗಿದ್ದು, ಸಾಮಾಜಿಕ ಅರಣ್ಯ ವಿಭಾಗ ಹಾಸನದ ವತಿಯಿಂದ 2020–21ನೇ ಸಾಲಿಗೆ ಸರ್ಕಾರವು ಈ ವಿಭಾಗಕ್ಕೆ ಒಟ್ಟು ರೂ.180.00 ಲಕ್ಷಗಳನ್ನು ನಿಗಧಿ ಪಡಿಸಿದ್ದು, ರೂ.180.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ.179.827 ಅನುದಾನ ವೆಚ್ಚವಾಗಿರುತ್ತದೆ. ಈ ಅನುದಾನದಲ್ಲಿ 360 ಹೆ ನೆಡುತೋಪು ಪೋಷಣೆ ಮಾಡಲಾಗಿದೆ, 15 ಕಿ.ಮೀ ರಸ್ತೆ ಬದಿ ನೆಡುತೋಪು ಪೋಷಣೆ ಮಾಡಲಾಗಿದೆ, 1.07ಲಕ್ಷ ಸಸಿಗಳನ್ನು ಪೋಷಿಸಲಾಗಿದೆ, 137 ಹೆ ನೆಡುತೋಪು ನಿರ್ಮಾಣ ಮಾಡಲಾಗಿದೆ, 23 ಹೆ ಮುಂಗಡ ಕಾಮಗಾರಿ ನಿರ್ವಹಿಸಿದೆ, 15250 ಸಸಿಗಳನ್ನು ಬೆಳೆಸಲಾಗಿದೆ.

<u>ರಾಜ್ಯ ವಲಯ ಯೋಜನೆಗಳು:</u>

1. ಸಾರ್ವಜನಿಕ ವಿತರಣೆಗಾಗಿ ಸಸಿ ಬೆಳೆಸುವ ಯೋಜನೆ (ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ) :

ಈ ಯೋಜನೆಯಡಿ 2020–21ನೇ ಸಾಲಿನಲ್ಲಿ 6*9 ಅಳತೆಯ 3.75 ಲಕ್ಷ ಹಾಗೂ 8*12 ಅಳತೆಯ 0.64 ಲಕ್ಷ ಸಸಿಗಳನ್ನು ಪೋಷಣೆ ಮಾಡಲಾಗಿದೆ ಹಾಗೂ 2.124 ಲಕ್ಷ ಹಾಗೂ 1.789 ಲಕ್ಷ ಸಸಿಗಳನ್ನು ಬೆಳೆಸಲಾಗಿದ್ದು, ಸದರಿ ಕಾಮಗಾರಿಗಳಿಗೆ 74.447 ಲಕ್ಷ ರೂ.ಗಳ ಅನುದಾನ ನಿಗಧಿ ಪಡಿಸಲಾಗಿದ್ದು, 74.447 ವೆಚ್ಚ ಭರಿಸಲಾಗಿದೆ. ಹಾಗೂ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ 3659 ಫಲಾನುಭವಿ ರೈತರಿಗೆ ಬದುಕುಳಿದ ಸಸಿಗಳಿಗೆ ಪ್ರೋತ್ಸಾಹ ಧನ ನೀಡಲು 253.916 ರೂ.ಗಳ ಅನುದಾನ ನಿಗಧಿ ಪಡಿಸಲಾಗಿದ್ದು, 253.916 ವೆಚ್ಚ ಭರಿಸಲಾಗಿದೆ.

2. **ರಸ್ತೆಬದಿ ನೆಡುತೋಪು:** ಈ ಯೋಜನೆಯಡಿ 2020–21ನೇ ಸಾಲಿನಲ್ಲಿ 9 ಕಿ.ಮೀ ನೆಡುತೋಪು ಪೋಷಣೆ ಮಾಡಲಾಗಿದೆ. ಸದರಿ ಕಾಮಗಾರಿಗಳಿಗೆ 6.097 ಲಕ್ಷ ರೂ.ಗಳ ಅನುದಾನ ನಿಗಧಿ ಪಡಿಸಲಾಗಿದ್ದು, 6.097 ವೆಚ್ಚ ಭರಿಸಲಾಗಿದೆ.

3. **ಹಸಿರು ಕರ್ನಾಟಕ** : ಈ ಯೋಜನೆಯಡಿ 2020–21ನೇ ಸಾಲಿನಲ್ಲಿ ಹಸಿರು ಕರ್ನಾಟಕ ಯೋಜನೆಯಡಿ ಸಾಲಿನಲ್ಲಿ 6*9 ಅಳತೆಯ 0.665 ಸಸಿಗಳು ಹಾಗೂ 0.05 8*12 ಅಳತೆಯ ಸಸಿಗಳನ್ನು ಪೋಷಣೆ ಮಾಡಲಾಗಿದ್ದು, 2.528 ಅನುದಾನ ನಿಗಧಿ ಪಡಿಸಲಾಗಿದ್ದು, 2.528 ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದೆ.

4. **ನಗರ ಹಸಿರೀಕರಣ :** ಯೋಜನೆಯಡಿ 16.180 ರೂ. ಗಳ ಅನುದಾನ ಬಿಡುಗಡೆಯಾಗಿದ್ದು, 16.180ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದ್ದು, 6.00 ಹೆ ನೆಡುತೋಪು ಪೋಷಣೆ ಮಾಡಲಾಗಿದೆ. 6.00 ಹೆ ನೆಡುತೋಪು ನಿರ್ಮಾರ್ಣ ಮಾಡಲಾಗಿದೆ 0.02 ಲಕ್ಷ ಸಸಿಗಳ ಪೋಷಣೆ ಮಾಡಲಾಗಿದೆ.

5. **ಕೆಎಫ್‌ಡಿಎಫ್ ಪ್ಲೆಕ್ಸಿಫಂಡ್ :** ಈ ಯೋಜನೆಯಡಿ 2020–21ನೇ ಸಾಲಿನಲ್ಲಿ 18 ಕಿ.ಮೀ ಮೊದಲನೇ ವರ್ಷದ ರಸ್ತೆಬಡಿ ನೆಡುತೋಪು ಪೋಷಣೆ ಮಾಡಲಾಗಿದೆ. 12.403 ರೂ.ಗಳ ಅನುದಾನ ಬಿಡುಗಡೆಯಾಗಿದ್ದು, 12.403 ರೂ.ಗಳ ವೆಚ್ಚ ಭರಿಸಲಾಗಿದೆ.

ಕೇಂದ್ರ ವಲಯ ಯೋಜನೆಗಳು

1. **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ :**

ಈ ಯೋಜನೆಯಡಿ 2020–21ನೇ ಸಾಲಿನಲ್ಲಿ ಅರಣ್ಯ ಕಾಮಗಾರಿಗಳಿಗೆ ಒಟ್ಟು 1101.47 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 1101.47 ಲಕ್ಷ ಅನುದಾನ ವೆಚ್ಚ ಭರಿಸಲಾಗಿದೆ. 268245 ಮಾನವ ದಿನಗಳ ಉತ್ಪಾದನೆಯಾಗಿದ್ದು, ಸದರಿ ಕಾಮಗಾರಿಗಳಿಗೆ ಈ ವಿಭಾಗದ ವತಿಯಿಂದ ಹಾಸನ ಜಿಲ್ಲೆಯ 267 ಗ್ರಾಮ ಪಂಚಾಯಿತಿಗಳ ಜಾಬ್‌ಕಾರ್ಡ್ ಹೊಂದಿರುವ 3247 ರೈತರ ಜಮೀನುಗಳಲ್ಲಿ 6.35 ಲಕ್ಷ ಸಸಿಗಳನ್ನು ನೆಡಲಾಗಿದೆ. ಈ ಯೋಜನೆಯಡಿಯಲ್ಲಿ 56 ಕಿ.ಮೀ. ರಸ್ತೆ ಬದಿ ನೆಡುತೋಪು ನಿರ್ಮಾಣ ಮಾಡಲಾಗಿದೆ, 5.45 ಲಕ್ಷ ಸಸಿ ಬೆಳಸಲಾಗಿದೆ, 271 ಹೆ. ಶಾಲಾವನ ನೆಡುತೋಪು ಹಾಗೂ ನೆಡುತೋಪು ಬೆಳೆಸಲಾಗಿದೆ. ಸಾಮಾಜಿಕ ಅರಣ್ಯ ನೆಡುತೋಪು ಪ್ರದೇಶದಲ್ಲಿ 20815 ಎಂ3 ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿ ನಿರ್ವಹಿಸಲಾಗಿದೆ.

2. **ಎಸ್‌ಎಂಎಎಫ್:** ಈ ಯೋಜನೆಯಡಿ 2020–21ನೇ ಸಾಲಿನಲ್ಲಿ 45.228 ರೂ.ಗಳ ಅನುದಾನ ನಿಗಧಿ ಪಡಿಸಿದ್ದು, 33.821 ವೆಚ್ಚ ಭರಿಸಲಾಗಿದೆ ಹಾಗೂ ರೈತರ ಜಮೀನಿನಲ್ಲಿ ಬದು ನೆಡುತೋಪು–100 ಯೂನಿಟ್, ಕಡಿಮೆ ಸಾಂದ್ರತೆ ನೆಡುತೋಪು–220 ಯೂನಿಟ್, ಹೆಚ್ಚು ಸಾಂದ್ರತೆ ನೆಡುತೋಪು–10 ಯೂನಿಟ್, 1000–1200 ಸಸಿಗಳ ನೆಡುತೋಪು–10 ಯೂನಿಟ್ ಅರಣ್ಯೀಕರಣ ಮಾಡಲಾಗಿದೆ.

ಈ ಮೇಲ್ಕಂಡ ಎಲ್ಲ ಕಾರ್ಯಕ್ರಮಗಳು ಜಿಲ್ಲಾ ಪಂಚಾಯತ್ ಹಾಸನದ ಸಹಭಾಗಿತ್ವದೊಂದಿಗೆ ನಡೆಯಲ್ಪಡುತ್ತಿರುತ್ತದೆ.

***

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಹಾಸನ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2020–21ನೇ ಸಾಲಿನಲ್ಲಿ ಜಿಲ್ಲಾ ವಲಯ ಮತ್ತು ತಾಲ್ಲೂಕು ಪಂಚಾಯತ್ ಯೋಜನೇತರದಡಿ ವಿವಿಧ ಕಾರ್ಯಕ್ರಮಗಳಿಗೆ ರೂ.5040.86 ಲಕ್ಷಗಳ ಅನುದಾನ ಒದಗಿಸಿದ್ದು, ಇದರಲ್ಲಿ ರೂ.4631.44 ಲಕ್ಷಗಳನ್ನು ವೆಚ್ಚ ಮಾಡಿ ಶೇಕಡ 91.88% ರಷ್ಟು ಪ್ರಗತಿ ಸಾಧಿಸಲಾಗಿದೆ. ಹಾಗೂ ರಾಜ್ಯವಲಯ ಯೋಜನೆಯಡಿಯಲ್ಲಿ ರೂ.698.69 ಲಕ್ಷಗಳನ್ನು ಒದಗಿಸಿದ್ದು, ಇದರಲ್ಲಿ ರೂ.680.86 ಲಕ್ಷಗಳನ್ನು ವೆಚ್ಚ ಮಾಡಿ ಶೇಕಡ 97.45% ರಷ್ಟು ಪ್ರಗತಿ ಸಾಧಿಸಲಾಗಿದೆ.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಾಸನ ಜಿಲ್ಲೆಯಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಶೈಕ್ಷಣಿಕ ಪ್ರಗತಿಯ ಕುರಿತು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಇದರ ಪ್ರಯೋಜನವನ್ನು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ಫಲಾನುಭವಿಗಳು ಪಡೆದಿರುತ್ತಾರೆ.

1.ವಿದ್ಯಾರ್ಥಿನಿಲಯಗಳು : ಜಿಲ್ಲೆಯಲ್ಲಿ ರಾಜ್ಯವಲಯ ಮತ್ತು ಜಿಲ್ಲಾವಲಯ ಯೋಜನೆ, ಯೋಜನೇತರದಡಿಯಲ್ಲಿ ಇಲಾಖೆಯ ವತಿಯಿಂದ ಒಟ್ಟು 116 ವಿದ್ಯಾರ್ಥಿನಿಲಯಗಳಲ್ಲಿ 66 ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು, ಮತ್ತು 50 ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ, ಸಮವಸ್ತ್ರ, ತಲೆಕ್ಷೌರ, ಗ್ರಂಥಾಲಯ, ದಿನಪತ್ರಿಕೆ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 2547 ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ 4697 ವಿದ್ಯಾರ್ಥಿಗಳಿಗೆ 2021–22ನೇ ಸಾಲಿನಲ್ಲಿ ಸಿಬ್ಬಂದಿ ವೇತನ ಸೇರಿ ರೂ.2730.80 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

ಇದೇ ರೀತಿ ಮ್ಯಾನತೆ ಪಡೆದ 5 ಖಾಸಗಿ ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಮಂಜೂರಾತಿಯ ಸಂಖ್ಯೆ 160 ಇರುತ್ತದೆ. ಇದರಲ್ಲಿ 4 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿಲ್ಲ. ಒಂದು ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಗೆ ಹಾಜರಾತಿ ಅನುಸರಿಸಿ ಮಾಸಿಕ ರೂ.1000/– ಗಳಂತೆ 10 ತಿಂಗಳಿಗೆ ನಿಲಯಗಳ ಆಡಳಿತ ಮಂಡಳಿಗೆ ಅನುದಾನ ನೀಡಲಾಗುತ್ತಿದೆ.

2.ವಿದ್ಯಾರ್ಥಿ ವೇತನಗಳು : ಜಿಲ್ಲೆಯಲ್ಲಿ ವಿವಿಧ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹಿಂದುಳಿದ ವರ್ಗಗಳ ಜಾತಿಗೆ ಸೇರಿದ ವರ್ಗ–1, 2ಎ, 3ಎ, ಮತ್ತು 3ಬಿಗೆ ಸೇರಿದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಕ್ರಮವಾಗಿ ವಾರ್ಷಿಕ ರೂ.750, 900 & 1000 ಬಾಲಕ/ಬಾಲಕಿಯರಿಗೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ ಹಾಗೂ ಪ್ರವರ್ಗ 2ಎ, 3ಎ ಮತ್ತು 3ಬಿಗೆ ಸೇರಿದ ವಿದ್ಯಾರ್ಥಿಗಳಿಗೆ ರೂ.44500/– ಇರುತ್ತದೆ. ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರವರ್ಗ–1, 2ಎ, 3ಎ, ಮತ್ತು 3ಬಿಗೆ ಸೇರಿದ ವಿದ್ಯಾರ್ಥಿಗಳಿಗೆ ಅವರ ತರಗತಿವಾರು ಶಿಷ್ಯವೇತನ ನೀಡಲಾಗುತ್ತಿದೆ. ಹಾಗೂ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ವಂಚಿತರಾದ ವಿದ್ಯಾರ್ಥಿಗಳಿಗೆ ಮಾಸಿಕ ರೂ.1500/– ರಂತೆ 10 ತಿಂಗಳ ವಿದ್ಯಾಸಿರಿ ಊಟ ಮತ್ತು ವಸತಿ ಭತ್ಯೆ ಮಂಜೂರು ಮಾಡಲಾಗಿದೆ.

ವಿದ್ಯಾರ್ಥಿ ವೇತನ ಪಡೆಯಲು ಬಯಸುವ ವಿದ್ಯಾರ್ಥಿ ಕುಟುಂಬದ ವಾರ್ಷಿಕದ ಆದಾಯ ಪ್ರವರ್ಗ–1 ವಿದ್ಯಾರ್ಥಿಗಳಿಗೆ ರೂ.2.50 ಲಕ್ಷದೊಳಗೆ, ಪ್ರವರ್ಗ 2ಎ/3ಎ ಮತ್ತು 3ಬಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷದೊಳಗೆ ಇರಬೇಕು.

ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಅನುದಾನ ಲಭ್ಯತೆ ಅನುಸರಿಸಿ, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಮಂಜೂರು ಮಾಡಲಾಗಿರುತ್ತದೆ.

ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ 2020–21 ಸಾಲಿಗೆ ಒದಗಿಸಲಾದ ರಾಜ್ಯವಲಯ ಅನುದಾನ ರೂ.101.31 ಲಕ್ಷಗಳನ್ನು ಒಟ್ಟು 8778 ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾಗಿದೆ.

ಮೇಲ್ಕಂಡ ಕಾರ್ಯಕ್ರಮಗಳನ್ನು 2021–22ನೇ ಸಾಲಿಗೂ ಮುಂದುವರೆಸಲಾಗಿದೆ. ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಲಾಗುತ್ತಿದೆ.

3.ವಕೀಲರಿಗೆ ಶಿಷ್ಯ ವೇತನ : ಕಾನೂನು ಪದವಿ ಮುಗಿಸಿ 2 ವರ್ಷದೊಳಗೆ ಇರುವ ಮತ್ತು ಬಾರ್ ಕೌನ್ಸಿಲ್‌ನಲ್ಲಿ ನೋಂದಣಿ ಮಾಡಿದ 44 ವರ್ಷಗಳ ವಯೋಮಿತಿಯೊಳಗೆ ಇರುವ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಗಳೊಳಗೆ ಇರುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಪ್ರತಿ ವರ್ಷ 10 ಜನರಂತೆ ನಾಲ್ಕು ವರ್ಷಗಳ ಕಾನೂನು ತರಬೇತಿಗೆ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ವತಿಯಿಂದ ಸಂದರ್ಶನ ನಡೆಸಿ, ಆಯ್ಕೆ ಮಾಡಲಾಗುವುದು. ಪ್ರವರ್ಗ–1ರ ಅಭ್ಯರ್ಥಿಗಳಿಗೆ ವಾರ್ಷಿಕ ಆದಾಯ ಮಿತಿ 3.50 ಲಕ್ಷ ಹಾಗೂ 2ಎ, 3ಎ, 3ಬಿ ಅಭ್ಯರ್ಥಿಗಳಿಗೆ ರೂ.2.50 ಲಕ್ಷಗಳು ಇರುತ್ತದೆ. ಪ್ರತಿ ಮಾಹೆ ಇವರು ತರಬೇತಿ ಪಡೆಯುತ್ತಿರುವ ಹಿರಿಯ ವಕೀಲರಿಂದ ದಿನಚರಿ ಸಲ್ಲಿಸಿದ ನಂತರ ಮಾಸಿಕ ರೂ.4000/– ಗಳಂತೆ ತರಬೇತಿ ಭತ್ಯೆಯನ್ನು ನಾಲ್ಕು ವರ್ಷ ಮಂಜೂರು ಮಾಡಲಾಗುವುದು. 2020–21 ನೇ ಸಾಲಿನಲ್ಲಿ ಈ ಉದ್ದೇಶಕ್ಕೆ ರೂ.15.58 ಲಕ್ಷಗಳನ್ನು 40 ಅಭ್ಯರ್ಥಿಗಳಿಗೆ ತರಬೇತಿ ಭತ್ಯೆಗಾಗಿ ವೆಚ್ಚ ಮಾಡಲಾಗಿದೆ.

4. ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ : ಜಿಲ್ಲೆಯಲ್ಲಿ ಹಾಸನ, ಅರಸೀಕೆರೆ ಮತ್ತು ಹೊಳೆನರಸೀಪುರ ತಾಲ್ಲೂಕು ಈ ಮೂರು ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು. ಇವುಗಳಲ್ಲಿಯ ಪ್ರತಿ ಕೇಂದ್ರದ ಮಂಜೂರಾತಿ ಸಂಖ್ಯೆ 20 ಮೂರು ಕೇಂದ್ರಗಳಲ್ಲಿ ಪ್ರಯೋಜನ ಪಡೆದ ಅಭ್ಯರ್ಥಿಗಳ ಸಂಖ್ಯೆ 60.

ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ಕಾರ್ಯಾಲಯಗಳಿಂದ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿ, 12 ತಿಂಗಳು ತರಬೇತಿಗೆ ನಿರುದ್ಯೋಗಿ/ವಿಧವಾ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾತಿ ಅನುಸರಿಸಿ ಆಯ್ಕೆ ಸಮಿತಿಯ ಮುಖಾಂತರ ತರಬೇತಿಗೆ ಆಯ್ಕೆ ಮಾಡಲಾಗುವುದು., ಪ್ರವರ್ಗ–1ರ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಹಾಗೂ ಪ್ರವರ್ಗ–2ಎ, 3ಎ ಮತ್ತು 3ಬಿ ವರ್ಗದ ಅಭ್ಯರ್ಥಿಗಳಿಗೆ ರೂ. 1.00 ಆದಾಯ ಮಿತಿ ಇರುತ್ತದೆ.. ತರಬೇತಿ ಪಡೆದು ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ನಡೆಸಲು ಉಚಿತ ಹೊಲಿಗೆ ಯಂತ್ರ ನೀಡಲಾಗುವುದು. 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ರೂ.13.10 ಲಕ್ಷ ವಿನಿಯೋಗಿಸಲಾಗಿದೆ.

5.ಇತರೆ ಹಿಂದುಳಿದ ವರ್ಗಗಳಿಗೆ ಇತರೆ ರಿಯಾಯಿತಿಗಳು : ಸರ್ಕಾರವು/ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಯಾವುದೇ ಜಾತಿಗೆ ಸೇರಿರುವ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ರೂ.1.00 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯತಿ ಮಂಜೂರು ಮಾಡಲಾಗುವುದು. ಪ್ರವರ್ಗ–1ಕ್ಕೆ ಸೇರಿದ ವಿದ್ಯಾರ್ಥಿಗಳಿಗೆ 2.50 ಲಕ್ಷ ಆದಾಯ ಮಿತಿ ಇರುತ್ತದೆ.

ಈ ಕಾರ್ಯಕ್ರದಡಿ ಬೋಧನ ಶುಲ್ಕ, ಪ್ರಯೋಗಾಲಯ ಶುಲ್ಕ, ಪರೀಕ್ಷೆ ಶುಲ್ಕ ,ಕ್ರೀಡಾ ಶುಲ್ಕ, ಮತ್ತು ಗ್ರಂಥಾಲಯ ಶುಲ್ಕ ಈ ಉದ್ದೇಶಕ್ಕೆ 2020–21ನೇ ಸಾಲಿನಲ್ಲಿ ಒದಗಿಸಿದ ರೂ.1683.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

6. ವಿದ್ಯಾರ್ಥಿ ನಿಲಯಗಳ ದುರಸ್ಥಿ : ಈ ಕಾರ್ಯಕ್ರಮದಡಿಯಲ್ಲಿ ಸ್ವಂತ ಕಟ್ಟಡ ಹೊಂದಿದ 23 ಮೆಟ್ರಿಕ್ ಪೂರ್ವ /ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು, ವಿದ್ಯುತ್ ವೈರಿಂಗ್ ದುರಸ್ಥಿ, ಬಾತ್ ರೂಂ, ಶೌಚಾಲಯ ದುರಸ್ಥಿ, ಕಿಟಕಿ ಬಾಗಿಲು ದುರಸ್ಥಿ, ಸುಣ್ಣ ಬಣ್ಣ, ಚುರುಕಿ ಹಾಕುವುದು, ಮೇಲ್ಚಾವಣಿ ದರುಸ್ಥಿ ಇತ್ಯಾದಿ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗಳಿಂದ ಮಾಡಿಸಲಾಗಿದೆ. 2020–21ನೇ ಸಾಲಿನಲ್ಲಿ ಈ ಉದ್ದೇಶಕ್ಕೆ ಒದಗಿಸಲಾಗಿರುವ ರೂ.47.87 ಮೊಬಲಗನ್ನು ಸದರಿ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ.

7. ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ : ಜಿಲ್ಲೆಯಲ್ಲಿ ಒಟ್ಟು 12 ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಒಟ್ಟು ಮಂಜೂರಾತಿ ಸಂಖ್ಯೆ 3000 ವಿದ್ಯಾರ್ಥಿಗಳಿಗೆ ಉಚಿತ ಊಟ, ಪಠ್ಯ ಪುಸ್ತಕ ಲೇಖನ ಸಾಮಗ್ರಿ ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗುವುದು.

8. ಹಿಂದುಳಿದ ವರ್ಗದವರಿಗಾಗಿ ಸಮುದಾಯಭವನಗಳು : ಜಿಲ್ಲೆಯಲ್ಲಿ ವಿವಿಧ ಹಿಂದುಳಿದ ವರ್ಗದ ಸಮುದಾಯದ ವತಿಯಿಂದ ಒಟ್ಟು 15 ಸಮುದಾಯಭವನ ಕಟ್ಟಡಗಳು ವಿವಿಧ ನಿರ್ಮಾಣ ಹಂತದಲ್ಲಿರುತ್ತವೆ. ಈ ಕಟ್ಟಡಗಳಿಗೆ ರೂ.84.50 ಲಕ್ಷ ಸಹಾಯಧನ ನೀಡಲಾಗಿದೆ. 2020–21ನೇ ಸಾಲಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

9. ಅಲೆಮಾರಿ/ಅರೆಅಲೆಮಾರಿ ಜನಾಂಗದವರು ವಾಸಿಸುವ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ದಿ :

ಜಿಲ್ಲೆಯಲ್ಲಿ ಅಲೆಮಾರಿ/ಅರೆಅಲೆಮಾರಿ ಜನಾಂಗದವರು ವಾಸಿಸುವ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ದಿಗಾಗಿ 10 ಕಾಲೋನಿಗಳಲ್ಲಿ ರೂ.100.00 ಲಕ್ಷ ವೆಚ್ಚ ಮಾಡಿ ಮೂಲಭೂತ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

*****

ಸಮಾಜ ಕಲ್ಯಾಣ ಇಲಾಖೆ

1.ಆಡಳಿತ ಕಾರ್ಯ ನಿರ್ವಾಹಕ ಸಿಬ್ಬಂದಿ ನಿರ್ವಹಣೆ:

ಸಮಾಜ ಕಲ್ಯಾಣ ಇಲಾಖೆಯಲ್ಲಿನ ಎಲ್ಲಾ ಕಾರ್ಯಕ್ರಮಗಳನ್ನು ಜಿಲ್ಲಾಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯಗತಗೊಳಿಸಲು ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು ತಾಲ್ಲೂಕು ಮಟ್ಟದಲ್ಲಿ ಸಹಾಯಕ ನಿರ್ದೇಶಕರು ಹಾಗೂ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿದ್ದಾರೆ.

2020–21ನೇ ಸಾಲಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಇಲಾಖೆಯ ಕಾರ್ಯಕ್ರಮಗಳಿಗೆ 5284.06 ಲಕ್ಷಗಳು ಬಿಡುಗಡೆಯಾಗಿದ್ದು 4921.795 ಲಕ್ಷಗಳನ್ನು ಸಿಬ್ಬಂದಿ ವೇತನ ಹಾಗೂ ಇತರೆ ಕಾರ್ಯಕ್ರಮಗಳಿಗೆ ಖರ್ಚು ಮಾಡಿ ಶೇ.93.14 ಶೇಕಡ ಪ್ರಗತಿ ಸಾಧಿಸಲಾಗಿದೆ.

2.ಪ.ಜಾತಿ ವರ್ಗದವರಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:

2020–21ನೇ ಸಾಲಿಗೆ 1ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ವರ್ಗದ ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿ ವೇತನ ಕೆಳಕಂಡ ದರದಂತೆ ಮಂಜೂರು ಮಾಡಲಾಗಿರುತ್ತದೆ.

1 ರಿಂದ 5ನೇ ತರಗತಿ ಬಾಲಕರಿಗೆ ರೂ.750/–, ಬಾಲಕಿಯರಿಗೆ ರೂ.850/–
6 ರಿಂದ 7ನೇ ತರಗತಿ ಬಾಲಕರಿಗೆ ರೂ.900/–, ಬಾಲಕಿಯರಿಗೆ ರೂ.1000/–
8 ನೇ ತರಗತಿ ಬಾಲಕರಿಗೆ ರೂ.1000/–, ಬಾಲಕಿಯರಿಗೆ ರೂ.1100/–

9 ರಿಂದ 10ನೇ ತರಗತಿ ಬಾಲಕರು ಮತ್ತು ಬಾಲಕಿಯರಿಗೆ ಹಾಸ್ಟೆಲರ್‌ಗೆ ಪ್ರತಿ ಮಾಹೆ ನಿರ್ವಹಣೆಗೆ ರೂ.350/– ಮತ್ತು ವಾರ್ಷಿಕ 1000/– ಪಠ್ಯಪುಸ್ತಕ/ಲೇಖನ ಸಾಮಗ್ರಿಗೆ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ ಪ್ರತಿ ಮಾಹೆ ನಿರ್ವಹಣೆಗೆ ರೂ.150/– ಮತ್ತು ವಾರ್ಷಿಕ ರೂ.750/– ಪಠ್ಯಪುಸ್ತಕ/ಲೇಖನ ಸಾಮಗ್ರಿಗೆ.

ಈ ಸಾಲಿಗೆ ಪ.ಜಾತಿ/ವರ್ಗದ ಒಟ್ಟು 17222 ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿ ರೂ. 204.895 ಲಕ್ಷಗಳನ್ನು ವೆಚ್ಚ ಮಾಡಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

3.ಪ.ಜಾತಿ ಕಾಲೇಜು ವಿದ್ಯಾರ್ಥಿಗಳಿಗೆ ಮೆ.ನಂತರದ ವಿದ್ಯಾರ್ಥಿ ವೇತನ:

ಪ.ಜಾತಿ ಕಾಲೇಜು ವಿದ್ಯಾರ್ಥಿಗಳಿಗೆ ಅಂದರೆ, ಪಿಯುಸಿ, ಬಿ.ಎ., ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎಂ. ಇಂಜಿನಿಯರಿಂಗ್, ಡಿಪ್ಲೊಮೋ, ಬಿ.ಇ, ಎಂ.ಬಿ.ಬಿ.ಎಸ್, ನರ್ಸಿಂಗ್ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಹಾಸ್ಟೆಲರ್/ಡೇ ಸ್ಕಾಲರ್ ವಿದ್ಯಾರ್ಥಿ ವೇತನ ವಾರ್ಷಿಕ ಮಂಜೂರು ನೀಡಿದ್ದು ಪ.ಜಾತಿಯವರಿಗೆ ಈ ಸಾಲಿಗೆ ಒಟ್ಟು ರೂ. 935.00 ಲಕ್ಷಗಳು ಬಿಡುಗಡೆಯಾಗಿದ್ದು, ಒಟ್ಟು ರೂ. 935.00 ಲಕ್ಷಗಳನ್ನು ವಿದ್ಯಾರ್ಥಿಗಳ ತಂದೆ, ತಾಯಿ, ಪೋಷಕರ ವಾರ್ಷಿಕ ಆದಾಯ ಮಿತಿ ರೂ.2,50,000/– ಇದ್ದ ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾಗಿರುತ್ತದೆ. 2020–21ನೇ ಸಾಲಿನಲ್ಲಿ 13750 ಫಲಾನುಭವಿಗಳು ಸೌಲಭ್ಯ ಪಡೆದಿರುತ್ತಾರೆ.

4.ಪ.ವರ್ಗದ ಕಾಲೇಜು ವಿದ್ಯಾರ್ಥಿಗಳಿಗೆ ಮೆ.ನಂತರದ ವಿದ್ಯಾರ್ಥಿ ವೇತನ:

ಪ.ವರ್ಗದ ಕಾಲೇಜು ವಿದ್ಯಾರ್ಥಿಗಳಿಗೆ ಅಂದರೆ, ಪಿಯುಸಿ, ಬಿ.ಎ., ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎಂ. ಇಂಜಿನಿಯರಿಂಗ್, ಡಿಪ್ಲೊಮೋ, ಬಿ.ಇ, ಎಂ.ಬಿ.ಬಿ.ಎಸ್, ನರ್ಸಿಂಗ್ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಹಾಸ್ಟೆಲರ್/ಡೇ ಸ್ಕಾಲರ್ ವಿದ್ಯಾರ್ಥಿ ವೇತನ ವಾರ್ಷಿಕ ಮಂಜೂರು ನೀಡಿದ್ದು ಪ.ವರ್ಗದವರಿಗೆ ಈ ಸಾಲಿಗೆ ಒಟ್ಟು ರೂ.29.760 ಲಕ್ಷಗಳು ಬಿಡುಗಡೆಯಾಗಿದ್ದು, ಒಟ್ಟು ರೂ.29.760 ಲಕ್ಷಗಳನ್ನು ವಿದ್ಯಾರ್ಥಿಗಳ ತಂದೆ, ತಾಯಿ, ಪೋಷಕರ ವಾರ್ಷಿಕ ಆದಾಯ ಮಿತಿ ರೂ.2,50,000/– ಇದ್ದ ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾಗಿರುತ್ತದೆ. 2020–21ನೇ ಸಾಲಿನಲ್ಲಿ 50 ಫಲಾನುಭವಿಗಳು ಸೌಲಭ್ಯ ಪಡೆದಿರುತ್ತಾರೆ.

5.ಹೆಚ್ಚಿನ ಊಟ ವಸತಿ ವೆಚ್ಚಗಳ ಪಾವತಿ:

ಈ ಕಾರ್ಯಕ್ರಮದಡಿ ಗ್ರಾಮೀಣ ಪ್ರದೇಶಗಳಿಂದ ಬಂದಿರುವ ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿ ಇವರಿಗೆ ಉಚಿತ ಊಟ, ವಸತಿ ಕಲ್ಪಿಸಿ ಕೊಡಲಾಗಿದೆ. ಈ ಕಾರ್ಯಕ್ರಮ ಅನುಷ್ಠಾನ ಮಾಡಲು ಈ ಸಾಲಿಗೆ ಪ.ಜಾತಿಯ ಕಾಲೇಜು ವಿದ್ಯಾರ್ಥಿಗಳಿಗೆ ಒಟ್ಟು ರೂ.390.00 ಲಕ್ಷಗಳನ್ನು ನಿಗಧಿಪಡಿಸಿದ್ದು ರೂ.180.19 ಲಕ್ಷಗಳನ್ನು ಖರ್ಚು ಮಾಡಿ ವಿದ್ಯಾರ್ಥಿಗಳಿಗೆ ಉಪಯೋಗಿಸಲಾಗಿದೆ.

6.ಮೆಟ್ರಿಕ್ ಪೂರ್ವ/ಕಾಲೇಜು ವಿದ್ಯಾರ್ಥಿ ನಿಲಯಗಳ ನಿರ್ವಹಣೆ:

ಈ ಕಾರ್ಯಕ್ರಮದಡಿ ಗ್ರಾಮೀಣ ಪ್ರದೇಶಗಳಿಂದ ಬರುವ ಪ.ಜಾತಿ/ವರ್ಗದವರ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರೆಸಲು ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 59 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ವಿದ್ಯಾರ್ಥಿ ನಿಲಯಗಳ ನಿರ್ವಹಣೆ ಹಾಗೂ ಸಿಬ್ಬಂದಿ ವೇತನಕ್ಕಾಗಿ ರೂ. 1514.46 ಲಕ್ಷಗಳು ನಿಗಧಿಪಡಿಸಿದ್ದು ಒಟ್ಟು ರೂ. 1135.340 ಲಕ್ಷ ರೂಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟು 380 ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡಿರುತ್ತಾರೆ.

ಜಿಲ್ಲೆಯಲ್ಲಿ ಒಟ್ಟು 29 ಕಾಲೇಜು ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು ಈ ನಿಲಯಗಳ ಸಿಬ್ಬಂದಿ ವೇತನ, ಕಟ್ಟಡ ಬಾಡಿಗೆ ವಿದ್ಯುಚ್ಛಕ್ತಿ, ವಿದ್ಯುತ್ ರಿಪೇರಿ, ನೀರಿನ ತೆರಿಗೆ, ಬೋರ್‌ವೆಲ್ ರಿಪೇರಿ ಮುಂತಾದ ವೆಚ್ಚಗಳಿಗೆ ಒಟ್ಟು ರೂ. 751.260 ಲಕ್ಷಗಳು ಬಿಡುಗಡೆಯಾಗಿದ್ದು ರೂ. 737.98 ಲಕ್ಷಗಳನ್ನು ಖರ್ಚುಗೊಳಿಸಲಾಗಿದೆ.

7.ನಿವಾಸಿ ಶಾಲೆಗಳು:

ಈ ಜಿಲ್ಲೆಯಲ್ಲಿ 3 ನಿವಾಸಿ ಶಾಲೆಗಳು ಮತ್ತು ಒಂದು ಆಶ್ರಮ ಶಾಲೆ ಕಾರ್ಯ ನಿರ್ವಹಿಸುತ್ತಿದ್ದು, ಈ ಕಾರ್ಯಕ್ರಮದಡಿಯಲ್ಲಿ ವಸತಿ ಶಾಲೆಗಳಿಗೆ ಪ.ಜಾತಿ/ವರ್ಗಗಳ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಓದುತ್ತಿರುವ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅವಕಾಶ ಕಲ್ಪಿಸಲಾಗುವುದು. 2020–21ನೇ ಸಾಲಿಗೆ 3 ನಿವಾಸಿ ಶಾಲೆಗಳಲ್ಲಿ 196 ಮತ್ತು ಆಶ್ರಮ ಶಾಲೆಯಲ್ಲಿ 40 ನವೀಕೃತ ವಿದ್ಯಾರ್ಥಿಗಳಿದ್ದು, 2020–21ನೇ ಸಾಲಿಗೆ ಕೊರೊನಾ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಿರುವುದಿಲ್ಲ. ಈ ಕಾರ್ಯಕ್ರಮದಲ್ಲಿ ಒಟ್ಟು ರೂ.126.94 ಲಕ್ಷಗಳು ವೆಚ್ಚವಾಗಿರುತ್ತದೆ.

8.ಕಾನೂನು ಪದವೀಧರರಿಗೆ ಸೌಲಭ್ಯಗಳು:

ಈ ಸಾಲಿಗೆ ಪ.ಜಾತಿ/ವರ್ಗದ ಅಭ್ಯರ್ಥಿಗಳನ್ನು ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರ ಅಧ್ಯಕ್ಷತೆಯಲ್ಲಿ ಸಂದರ್ಶನ ನಡೆಸಿ 21 ಅಭ್ಯರ್ಥಿಗಳನ್ನು 2020–21ನೇ ಸಾಲಿಗೆ ಆಯ್ಕೆ ಮಾಡಿದೆ. 4 ವರ್ಷ ಅವಧಿಗೆ ಕಾನೂನು ತರಬೇತಿಗಾಗಿ ಆಯ್ಕೆ ಮಾಡಿದ್ದು ಇವರಿಗೆ ಪ್ರತಿ ತಿಂಗಳು ರೂ.5,000/– ತರಬೇತಿ ಶಿಷ್ಯವೇತನ ಪಾವತಿಸಲಾಗುವುದು. ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಕಳೆದ ಸಾಲಿನ ನವೀಕರಣ ಹಾಗೂ ಹೊಸದಾಗಿ ಆಯ್ಕೆಯಾದ ಒಟ್ಟು 64 ವಿದ್ಯಾರ್ಥಿಗಳಿಗೆ ತರಬೇತಿ ಶಿಷ್ಯ ವೇತನ ಪಾವತಿಗಾಗಿ ಒಟ್ಟು ರೂ.28.50 ಲಕ್ಷಗಳನ್ನು ಖರ್ಚು ಮಾಡಲಾಗಿದೆ.**10.ಅಸ್ಪೃಶ್ಯತಾ ನಿವಾರಣೆ ಯೋಜನೆ:**

ಈ ಯೋಜನೆಯಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸುವ ಸಲುವಾಗಿ **ಒಳಪಂಗಡ ಅಂತರ್ಜಾತಿ ವಿವಾಹ, ವಿಧವಾ ಮರು ವಿವಾಹ, ಸರಳ ವಿವಾಹ ಮತ್ತು ಅಂತರ ಜಾತಿ ವಿವಾಹವಾದ ದಂಪತಿಗಳಿಗೆ** ಪ್ರೋತ್ಸಾಹಧನ ಮಂಜೂರು ಮಾಡಲಾಗುವುದು. ಈ ಯೋಜನೆ ರಾಜ್ಯ ವಲಯ ಯೋಜನೆಯಾಗಿದ್ದು, 2020–21ನೇ ಸಾಲಿಗೆ **ಒಳಪಂಗಡ ಅಂತರ್ಜಾತಿ ವಿವಾಹಕ್ಕೆ ರೂ.9.00 ಲಕ್ಷ, ವಿಧವಾ ಮರು ವಿವಾಹಕ್ಕೆ** ರೂ.3.00 ಲಕ್ಷ, **ಸರಳ ವಿವಾಹ ಕಾರ್ಯಕ್ರಮಕ್ಕೆ 1.50 ಲಕ್ಷ ಮತ್ತು ಅಂತರ ಜಾತಿ ವಿವಾಹವಾದ ದಂಪತಿಗಳಿಗೆ ರೂ.239.50 ಲಕ್ಷ** ಬಿಡುಗಡೆಯಾಗಿದ್ದು, ಖರ್ಚು ಮಾಡಲಾಗಿದೆ.

11.ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆ ಕಾರ್ಯಕ್ರಮ:

ಈ ಸಾಲಿಗೆ ಗಿರಿಜನ ಉಪಯೋಜನೆಯಡಿ ಪ.ವರ್ಗದ ಫಲಾನುಭವಿಗಳ ಆರ್ಥಿಕ ಅಭಿವೃದ್ಧಿಗಾಗಿ ವೈಯುಕ್ತಿಕ ಸೌಲಭ್ಯ ನೀಡುವುದು ಹಾಗೂ ಪ.ವರ್ಗದ ಕಾಲೋನಿಗಳಿಗೆ ಉಪಯೋಗವಾಗುವಂತೆ ಮೂಲಭೂತ ಸೌಲಭ್ಯ ಒದಗಿಸುವ ಕಾರ್ಯಕ್ರಮವಾಗಿದ್ದು ಕೆಳಕಂಡ ಅನುದಾನ ಈ ಸಾಲಿಗೆ ಖರ್ಚುಗೊಳಿಸಿದೆ.

ಗಿ.ಉ.ಯೋ. ಮೂಲಭೂತ/ವೈಯುಕ್ತಿಕ ಸೌಲಭ್ಯಕ್ಕಾಗಿ ಒಟ್ಟು ನಿಗದಿ 12.00 ಖರ್ಚು 11.95 ಲಕ್ಷ

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳಡಿಯಲ್ಲಿ ಒಟ್ಟು ಫಲಾನುಭವಿಗಳ ಸಂಖ್ಯೆ 260 ಕಾಮಗಾರಿಗಳಲ್ಲಿ ಪ್ರಗತಿ ಸಾಧಿಸಲಾಗಿದೆ.

ಮೇಲ್ಕಂಡ ಎಲ್ಲಾ ಸರ್ಕಾರಿ ವಿವಿಧ ಇಲಾಖೆಗಳಿಂದ ಪ.ಜಾತಿ/ಪ.ವರ್ಗದ ಜನಾಂಗದ ಫಲಾನುಭವಿಗಳಿಗೆ ಆರ್ಥಿಕ ಮಟ್ಟ ಅಭಿವೃದ್ಧಿಪಡಿಸಿಕೊಳ್ಳಲು ಅನುಕೂಲವಾಗಿದೆ ಮತ್ತು ಕಾರ್ಯಕ್ರಮಗಳಿಂದ ಪ್ರಯೋಜನ ಪಡೆದು ಬಡತನ ರೇಖೆಯಿಂದ ಮೇಲಕ್ಕೆ ತರಲು ಸಹಾಯವಾಗಿರುತ್ತದೆ.

*****

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮುಖ್ಯವಾಗಿ ಮಹಿಳೆಯರು ಹಾಗೂ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳಲಾಗಿದೆ. ಹಾಗೂ ಮಹಿಳೆಯರ ಪುನರುಜ್ಜೀವನಕ್ಕಾಗಿ ವಿದ್ಯಾಭ್ಯಾಸ, ಆರೋಗ್ಯ ಹಾಗೂ ಇತರೆ ಹಲವು ಬಗೆಯ ತರಬೇತಿಗಳನ್ನು ನೀಡಲಾಗುತ್ತಿದೆ. ಮತ್ತು ಜಿಲ್ಲೆಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ.

1) **<u>ಉಪ ನಿರ್ದೇಶಕರ ಕಚೇರಿ, ಹಾಸನ (ಇಲಾಖೆಯ ಜಿಲ್ಲಾ ಕಚೇರಿ):-</u>** ಸರ್ಕಾರಿ ಆದೇಶದ ಸಂಖ್ಯೆ:ಎಸ್‌ಡಬ್ಲ್ಯೂಎಲ್/173/ಎಸ್‌ಬಿಡಿ/83, ದಿನಾಂಕ:26.07.1984ರಂತೆ ಜಿಲ್ಲೆಯಲ್ಲಿ ಈ ಕಚೇರಿಯು ಪ್ರಾರಂಭವಾಗಿ ಈ ಕೆಳಕಂಡ ಹುದ್ದೆಗಳನ್ನು ಸೃಷ್ಠಿಸಲಾಗಿದೆ.

1	ಉಪ ನಿರ್ದೇಶಕರು	1 ಹುದ್ದೆ ಗ್ರೂಪ್ 'ಎ'
2	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು	1 ಹುದ್ದೆ ಗ್ರೂಪ್ 'ಬಿ'
3	ಕಚೇರಿ ಅಧೀಕ್ಷಕರು	1 ಹುದ್ದೆ ಗ್ರೂಪ್ 'ಸಿ'
4	ವಿಶೇಷ ಪೌಷ್ಠಿಕ ಆಹಾರ ನಿರೀಕ್ಷಕರು	1 ಹುದ್ದೆ ಗ್ರೂಪ್ 'ಸಿ'
5	ಪ್ರಥಮ ದರ್ಜೆ ಸಹಾಯಕರು	2 ಹುದ್ದೆ ಗ್ರೂಪ್ 'ಸಿ'
6	ಬೆರಳಚ್ಚುಗಾರರು	1 ಹುದ್ದೆ ಗ್ರೂಪ್ 'ಸಿ'
7	ವಾಹನ ಚಾಲಕರು	1 ಹುದ್ದೆ ಗ್ರೂಪ್ 'ಸಿ'

(ಈ ಹುದ್ದೆಯನ್ನು ಸ.ನಿ. ಕಚೇರಿ ಶಿವಮೊಗ್ಗ ಇಲ್ಲಿಂದ ವರ್ಗ ಮಾಡಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಸಕಾಕಾ/116/ಐಸಿಡಿ/91/ಬೆಂಗಳೂರು, ದಿನಾಂಕ:30.03.2009) ಇದಲ್ಲದೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಶಿಶು ಅಭಿವೃದ್ಧಿ ಯೋಜನೆಗಳ ಮೇಲ್ವಿಚಾರಣೆ ಪ್ರಗತಿ ಪರಿಶೀಲನೆ ಹಾಗೂ ಮೌಲ್ಯಮಾಪನಕ್ಕಾಗಿ ಐ.ಸಿ.ಡಿ.ಎಸ್. ಘಟಕವನ್ನು ಈ ಕೆಳಕಂಡ ಹುದ್ದೆಗಳೊಂದಿಗೆ ಸರ್ಕಾರಿ ಆದೇಶ ಸಂಖ್ಯೆ: ಸಕಾಕಾ/113/ಐಸಿಡಿ/90, ದಿನಾಂಕ:15.12.1991ರಂದು ಮಂಜೂರು ಮಾಡಲಾಗಿದೆ.

1	ನಿರೂಪಣಾಧಿಕಾರಿಗಳು	1 ಹುದ್ದೆ ಗ್ರೂಪ್ 'ಬಿ'
2	ಅಧೀಕ್ಷಕರು	1 ಹುದ್ದೆ ಗ್ರೂಪ್ 'ಸಿ' – ಖಾಲಿ
3	ಅಂಕಿ–ಸಂಖ್ಯಾ ಸಹಾಯಕರು	1 ಹುದ್ದೆ ಗ್ರೂಪ್ 'ಸಿ'
4	ಪ್ರಥಮ ದರ್ಜೆ ಸಹಾಯಕರು	1 ಹುದ್ದೆ ಗ್ರೂಪ್ 'ಸಿ'
5	ದ್ವಿತೀಯ ದರ್ಜೆ ಸಹಾಯಕರು	1 ಹುದ್ದೆ ಗ್ರೂಪ್ 'ಸಿ'
6	ಬೆರಳಚ್ಚುಗಾರರು	1 ಹುದ್ದೆ ಗ್ರೂಪ್ 'ಸಿ' – ಖಾಲಿ
7	ವಾಹನ ಚಾಲಕರು	1 ಹುದ್ದೆ ಗ್ರೂಪ್ 'ಸಿ' – ಖಾಲಿ
8	ಜವಾನರು 'ಡಿ' ದರ್ಜೆ	1 ಹುದ್ದೆ ಗ್ರೂಪ್ 'ಡಿ'

ಈ ಘಟಕ ಉಪ ನಿರ್ದೇಶಕರ ಅಧೀನದಲ್ಲೇ ಕಾರ್ಯ ನಿರ್ವಹಿಸುವುದು ಸರ್ಕಾರದ ಆದೇಶ ಸಂಖ್ಯೆ:ಮಮಇ/24/ಎಸ್‌ಟಿಡಿ/91/ಬೆಂಗಳೂರು, ದಿನಾಂಕ:21.12.1994ರ ಅನ್ವಯ 1994–95ನೇ ಸಾಲಿನಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೃಷ್ಟಿಸಲಾಗಿದೆ.

1	ಪ್ರಥಮ ದರ್ಜೆ ಸಹಾಯಕರು	1 ಹುದ್ದೆ ಗ್ರೂಪ್ 'ಸಿ'
2	ದ್ವಿತೀಯ ದರ್ಜೆ ಸಹಾಯಕರು	1 ಹುದ್ದೆ ಗ್ರೂಪ್ 'ಸಿ'
3	ಜವಾನರು 'ಡಿ' ದರ್ಜೆ	1 ಹುದ್ದೆ ಗ್ರೂಪ್ 'ಡಿ'

1) <u>ನಿರ್ಗತಿಕ ಮಕ್ಕಳ ರಕ್ಷಣೆ ಮತ್ತು ಪೋಷಣೆ:–</u>

ನಿರಾಧಾರ ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಕುಟೀರಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಇಲಾಖೆಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಪ್ರತಿಯೊಂದು ಕುಟೀರದಲ್ಲಿ 25 ನಿವಾಸಿಗಳು ಇರಬಹುದಾಗಿದ್ದು, ಬಾಲಕರಾಗಿದ್ದರೆ 16 ವರ್ಷದವರೆಗೂ, ಬಾಲಕಿಯಾಗಿದ್ದರೆ 18 ವರ್ಷದವರೆಗೂ ಈ ಕುಟೀರಗಳಲ್ಲಿ ರಕ್ಷಣೆ ಮತ್ತು ಪೋಷಣೆಯನ್ನು ಪಡೆಯಬಹುದಾಗಿದೆ. ಬಾಲಕಿಯರಿಗಾಗಿ ಆಕ್ಸೇಲಿಯಂ ಗ್ರಾಮ ವಿಕಾಸ ಕೇಂದ್ರ, ಜೋಸೆಫ್‌ನಗರ, ಆಲೂರು ತಾಲ್ಲೂಕು ಈ ಸಂಸ್ಥೆಯವರು 2 ಕುಟೀರಗಳನ್ನು ನಡೆಸುತ್ತಿದ್ದು 2020–21 ನೇ ಸಾಲಿನಲ್ಲಿ ಯೋಜನೆಗೆ ರೂ.5.40 ಅನುದಾನ ನಿಗಧಿಯಾಗಿದ್ದು, ರೂ.5.40 ಲಕ್ಷ ಖರ್ಚು ಮಾಡಲಾಗಿದೆ.

2) <u>ಶಿಶು ಅಭಿವೃದ್ಧಿ ಯೋಜನೆಗಳು:–</u>

ಈ ಯೋಜನೆಯು ಭಾರತ ಸರ್ಕಾರದ ಯೋಜನೆಯಾಗಿದ್ದು 6–6 ವರ್ಷದ ಮಕ್ಕಳು ಗರ್ಭಿಣಿ, ಬಾಣಂತಿಯರು ಈ ಯೋಜನೆಯ ಪ್ರಯೋಜನ ಪಡೆಯುವ ಫಲಾನುಭವಿಗಳಾಗಿರುವರು. ಪೂರಕ ಪೌಷ್ಟಿಕ ಆಹಾರ, ರೋಗ ನಿರೋಧಕ, ಚುಚ್ಚುಮದ್ದು, ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣ ಶಿಬಿರಗಳ ಪ್ರಯೋಜನಗಳನ್ನು ಈ ಯೋಜನೆಯಿಂದ ನೀಡಲಾಗುತ್ತಿದೆ.

ಹಾಸನ ಜಿಲ್ಲೆಯಲ್ಲಿ ಈ ಕೆಳಕಂಡ ತಾಲ್ಲೂಕುಗಳಲ್ಲಿ 8 ಶಿಶು ಅಭಿವೃದ್ಧಿ ಯೋಜನೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆಯನ್ನು ಈ ಹೆಸರಿನ ಮುಂದೆ ಸೂಚಿಸಿದೆ.

1	ಹಾಸನ	406
2	ಚನ್ನರಾಯಪಟ್ಟಣ	394
3	ಹೊಳೆನರಸೀಪುರ	260
4	ಬೇಲೂರು	301
5	ಸಕಲೇಶಪುರ	256
6	ಆಲೂರು	178
7	ಅರಸೀಕೆರೆ	448
8	ಅರಕಲಗೂಡು	280
ಒಟ್ಟು		**2523**

ಹಾಸನ ಜಿಲ್ಲೆಯ 8 ಶಿಶು ಅಭಿವೃದ್ಧಿ ಯೋಜನೆಗಳು ಕೇಂದ್ರಪುರಸ್ಕೃತ ಯೋಜನೆಗಳಾಗಿವೆ. ಪೂರಕ ಪೌಷ್ಟಿಕ ಆಹಾರ ಹಾಗೂ ಮಸಾಲೆ ಸಾಮಗ್ರಿಗಳಿಗಾಗಿ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಪ್ರತಿ ದಿನಕ್ಕೆ ಪ್ರತಿ ಫಲಾನುಭವಿಗೆ 8 ರೂಪಾಯಿನಂತೆ ಹಾಗೂ ಗರ್ಭಿಣಿ ಬಾಣಂತಿಯರಿಗೆ ರೂ.21/–ರಂತೆ ಇರುವ ಫಲಾನುಭವಿಗಳಿಗೆ ಹಾಗೂ ಕಿಶೋರಿಯರಿಗೆ ಪ್ರತಿ ದಿನಕ್ಕೆ ರೂ.9.50ಪೈಸೆ ನಂತೆ ವಿಪರೀತ ತೂಕ ಕಡಿಮೆ ಇರುವ ಮಕ್ಕಳಿಗೆ ಪ್ರತಿದಿನಕ್ಕೆ ರೂ. 12/– ರಂತೆ ಇಲಾಖೆಯಿಂದ ಹಣ ವೆಚ್ಚ ಮಾಡಲಾಗುತ್ತಿದೆ. 2020–21 ನೇ ಸಾಲಿನಲ್ಲಿ ಈ ಯೋಜನೆಗಳ ಪೂರಕ ಪೌಷ್ಟಿಕ ಆಹಾರ ಬಾಬ್ತಿನ ಖರ್ಚನ್ನು ಅನುಬಂಧ–2ರಲ್ಲಿಯೂ ಆಡಳಿತಾತ್ಮಕ ವೆಚ್ಚವನ್ನು ಅನುಬಂಧ–3ರಲ್ಲಿಯೂ ಸೂಚಿಸಿದೆ.

1) <u>ಅಂಗನವಾಡಿ ಕಟ್ಟಡಗಳು:–</u>

ಅಂಗನವಾಡಿ ಕೇಂದ್ರಗಳನ್ನು ನಡೆಸಲು ಸೂಕ್ತ ಕಟ್ಟಡದ ವ್ಯವಸ್ಥೆ ಇಲ್ಲದೆ ಇರುವ ಸ್ಥಳಗಳಲ್ಲಿ ಇಲಾಖೆಯ ವತಿಯಿಂದ ಕಟ್ಟಡಗಳನ್ನು ದುರಸ್ತಿ ಮಾಡಲು ಪ್ರತಿ ಕಟ್ಟಡಕ್ಕೆ ಕನಿಷ್ಠ ರೂ.0.50 ಸಾವಿರದಂತೆ ಹಣವನ್ನು ವೆಚ್ಚ ಮಾಡಲಾಗುತ್ತಿದೆ. ಸದರಿ 2020–21ನೇ ಸಾಲಿಗೆ ರೂ.90.00 ಲಕ್ಷವನ್ನು ಈ ಕಾರ್ಯಕ್ರಮಕ್ಕಾಗಿ ನಿಗದಿಪಡಿಸಲಾಗಿದ್ದು ಒಟ್ಟು ರೂ.90.00ಲಕ್ಷ ಬಿಡುಗಡೆಯಾಗಿರುತ್ತದೆ. ಇದರಲ್ಲಿ ರೂ. 88.13 ಲಕ್ಷ ಖರ್ಚು ಭರಿಸಲಾಗಿದೆ.

2) <u>ಸ್ತ್ರೀಶಕ್ತಿ ಯೋಜನೆ:–</u>

ಹಾಸನ ಜಿಲ್ಲೆಯಲ್ಲಿ 6838 ಗ್ರಾಮೀಣ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ಒಟ್ಟು 108596 ಸದಸ್ಯರನ್ನು ಒಳಗೊಂಡಿರುತ್ತದೆ. 2020–21ನೇ ಸಾಲಿನಲ್ಲಿ ರೂ. 7.10 (ಲಕ್ಷ) ಗಳು ಅನುದಾನ ವಿವಿಧ ಕಾರ್ಯಕ್ರಮಗಳಿಗೆ ಬಿಡುಗಡೆಯಾಗಿದ್ದು, ಇದ್ದರಲ್ಲಿ 2021 –ಮಾರ್ಚ್ ಅಂತ್ಯಕ್ಕೆ ರೂ. 6.95/– ಅನುದಾನ ವೆಚ್ಚ ಭರಿಸಲಾಗಿದೆ.

3) <u>ಮುಖ್ಯ ಸೇವಿಕೆಯರು ಹಾಗೂ ಗ್ರಾಮ ಸೇವಿಕೆಯರು:–</u>

2020–21 ಸಾಲಿನಲ್ಲಿ ಸಕಲೇಶಪುರ ಶಿಶು ಅಭಿವೃದ್ಧಿ ಯೋಜನೆಯಲ್ಲಿರುವ ಒಬ್ಬರು ಗ್ರಾಮಸೇವಿಕಾ ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ವೇತನ ಭತ್ಯೆಗಾಗಿ ಒಟ್ಟು 6.71 ಲಕ್ಷ ಬಿಡುಗಡೆಯಾಗಿದ್ದು, ರೂ.4.90 ಲಕ್ಷವನ್ನು ಖರ್ಚು ಮಾಡಲಾಗಿದೆ.

4) <u>ಇತರೆ:–</u>

ಶಿಶು ಅಭಿವೃದ್ಧಿ ಯೋಜನೆಗಳ ಸಿಬ್ಬಂದಿ ಮಾಹಿತಿಯನ್ನು ಅನುಬಂಧ–5ರಲ್ಲೂ ವೈದ್ಯಾಧಿಕಾರಿಗಳ ಅಂಗನವಾಡಿ ಭೇಟಿಯ ಪ್ರತಿಯನ್ನು ಅನುಬಂಧ–6ರಲ್ಲೂ ಚುಚ್ಚುಮದ್ದು ಪ್ರಗತಿ ವರದಿಯನ್ನು ಅನುಬಂಧ–7ರಲ್ಲೂ ನೀಡಲಾಗಿದೆ.

5) <u>ಭಾಗ್ಯಲಕ್ಷ್ಮಿ ಯೋಜನೆ:–</u>

ಹಾಸನ ಜಿಲ್ಲೆಯಲ್ಲಿ 2006–07ನೇ ಸಾಲಿನಿಂದ 31.03.2021 ರವರೆಗೆ ಒಟ್ಟು 96988 ಫಲಾನುಭವಿಗಳ ಫಲಾನಭವಿಗಳ ಅರ್ಜಿಗಳನ್ನು ಮಂಜೂರಾತಿ ನೀಡಿದೆ. 88638 ಫಲಾನುಭವಿಗಳಿಗೆ ಬಾಂಡ್‌ಗಳನ್ನು ವಿತರಿಸಲಾಗಿದೆ.

***

ಅನುಬಂಧ-1

ಪೂರಕ ಪೌಷ್ಟಿಕ ಆಹಾರ ಭೌತಿಕ ಗುರಿ ಸಾಧನೆ 2020-21ನೇ ಸಾಲಿನ ವಾರ್ಷಿಕ ಆಡಳಿತ ವರದಿ

ಕ್ರ. ಸಂ.	ಯೋಜನೆಯ ಹೆಸರು	ಫಲಾನುಭವಿಗಳ ಸರ್ವೆ ಪ್ರಕಾರ							ಆಯ್ಕೆಯಾದ ಫಲಾನುಭವಿಗಳು							ವಾಸ್ತವಿಕವಾಗಿ ಪೌಷ್ಟಿಕ ಆಹಾರ ಪಡೆದ ಫಲಾನುಭವಿಗಳು ಸರಾಸರಿ							ಶೇ.	ಉಪಹಾರ ಹಂಚಿದ ದಿನಗಳು
		6ತಿಂ-3ವ	3 ವ-6 ವ	ಗರ್ಭಿಣಿ	ಬಾಣಂತಿ	ಕಿಶೋರಿ	ಅಂ.ಕಾ ಕರ್ತೆ ಮತ್ತು ಸಹಾಯಕಿ	ಒಟ್ಟು	6ತಿಂ-3ವ	3 ವ-6 ವ	ಗರ್ಭಿಣಿ	ಬಾಣಂತಿ	ಕಿಶೋರಿ	ಅಂ.ಕಾ ಕರ್ತೆ ಮತ್ತು ಸಹಾಯಕಿ	ಒಟ್ಟು	6 ತಿಂ-3 ವ	3 ವ- 6 ವ	ಗರ್ಭಿಣಿ	ಬಾಣಂತಿ	ಕಿಶೋರಿ	ಅಂ.ಕಾ ಕರ್ತೆ ಮತ್ತು ಸಹಾಯಕಿ	ಒಟ್ಟು		
1	2	3	4	5	6	7	8	9	10	11	12	13	14	15	16	17	18	19	20	21	22	23	24	25
1	ಹಾಸನ	8226	7872	1977	1881	0	770	**20726**	7538	4526	1427	1407	0	770	**15668**	7463	6434	2145	1889	0	747	**18678**	119%	300
2	ಚನ್ನರಾಯಪಟ್ಟಣ	6709	5911	1379	1227	0	761	**15987**	6282	4916	1379	1227	0	761	**14565**	7195	6322	1606	1547	0	727	**17397**	119%	300
3	ಹೊಳೆನರಸೀಪುರ	5767	5255	1342	1341	0	508	**14213**	4781	3579	1194	1215	0	508	**11277**	5503	4710	1297	1358	0	487	**13355**	118%	300
4	ಬೇಲೂರು	4938	5456	1075	1094	0	526	**13089**	4523	3743	943	957	0	526	**10692**	4524	4088	1060	1218	0	501	**11391**	107%	300
5	ಸಕಲೇಶಪುರ	3451	3460	708	762	0	469	**8850**	3402	2923	698	754	0	469	**8246**	3402	3639	698	754	0	451	**8944**	95%	300
6	ಆಲೂರು	2018	2084	454	477	0	321	**5354**	1971	1830	430	450	0	321	**5002**	1947	1688	413	421	0	303	**4772**	108%	300
7	ಅರಸೀಕೆರೆ	6946	7243	1343	1443	0	871	**17846**	6842	5704	1242	1260	0	871	**15919**	7163	7597	1767	1661	0	850	**19038**	120%	300
8	ಅರಕಲಗೂಡು	5006	5326	1035	1113	6	545	**13031**	4350	3235	833	906	5	545	**9874**	4869	4848	1177	1318	3	524	**12739**	129%	300
ಒಟ್ಟು		**43061**	**42607**	**9313**	**9338**	**6**	**4771**	**109096**	**39689**	**30456**	**8146**	**8176**	**5**	**4771**	**91243**	**42066**	**39326**	**10163**	**10166**	**3**	**4590**	**106314**	**117%**	300

ಅನುಬಂಧ - 2

ಪೂರಕ ಪೌಷ್ಠಿಕ ಆಹಾರ ಬಾಬ್ತು 2020-21

ಕ್ರ. ಸಂ.	ಯೋಜನೆಯ ಹೆಸರು	ನಿಗದಿ	ಒಟ್ಟು ಬಿಡುಗಡೆ	ಒಟ್ಟು ಖರ್ಚು	ಷರಾ
1	2	3	4	5	6
1	ಹಾಸನ	681.46	1141.78	581.75	
2	ಚನ್ನರಾಯಪಟ್ಟಣ	625.89	532.37	706.66	
3	ಹೊಳೆನರಸೀಪುರ	452.07	450.95	504.39	
4	ಬೇಲೂರು	487.83	1058.00	447.88	-
5	ಸಕಲೇಶಪುರ	373.95	757.68	333.21	
6	ಆಲೂರು	226.83	1146.39	197.27	
7	ಅರಸೀಕೆರೆ	709.00	874.09	714.71	
8	ಅರಕಲಗೂಡು	450.97	652.00	392.06	
ಒಟ್ಟು		**4008.00**	**6613.26**	**3877.93**	

ಅನುಬಂಧ – 3

ಆಡಳಿತಾತ್ಮಕ ವೆಚ್ಚ 2020-21

ಕ್ರ. ಸಂ.	ಯೋಜನೆಯ ಹೆಸರು	ವಾರ್ಷಿಕ ಆಯವ್ಯಯ ನಿಗಧಿ	ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆ	2020-21ನೇ ಸಾಲಿನ ಖರ್ಚು	ಷರಾ
1	2	3	4	5	6
1	ಹಾಸನ	858.53	1043.49	801.15	
2	ಚನ್ನರಾಯಪಟ್ಟಣ	871.89	1084.13	852.01	
3	ಹೊಳೆನರಸೀಪುರ	563.46	833.55	621.23	
4	ಬೇಲೂರು	584.51	738.81	587.65	-
5	ಸಕಲೇಶಪುರ	534.20	724.91	542.84	
6	ಆಲೂರು	357.21	473.09	422.34	
7	ಅರಸೀಕೆರೆ	1065.00	1218.69	1093.47	
8	ಅರಕಲಗೂಡು	604.61	795.43	589.87	
9	ಐಸಿಡಿಎಸ್ ಘಟಕ	55.42	166.56	25.85	
ಒಟ್ಟು		**5494.83**	**7078.66**	**5536.41**	

ಅನುಬಂಧ – 4

ಅಂಗನವಾಡಿ ಕಟ್ಟಡಗಳ ಮಾಹಿತಿ: ವಾರ್ಷಿಕ ಆಡಳಿತ ವರದಿ – 2020–21 (01.04.2020 ರಿಂದ 31.03.2021ರವರೆಗೆ)

ಕ್ರ. ಸಂ.	ಯೋಜನೆಯ ಹೆಸರು	ಮಂಜೂರಾದ ಅಂಗನವಾಡಿ ಕೇಂದ್ರಗಳು	ಕಾರ್ಯನಿರತ ಅಂಗನವಾಡಿ ಕೇಂದ್ರಗಳು	ಗ್ರಾಮದವರು ಉಚಿತವಾಗಿ ನೀಡಿರುವ ಕಟ್ಟಡಗಳು	ದೇವಸ್ಥಾನ, ಮಠ, ಖಾಸಗಿ ಇತ್ಯಾದಿ	ಸಮುದಾಯ ಭವನ, ಗ್ರಾಮ ಪಂಚಾಯ್ತಿ	ನೆಮ್ಮದಿ, ಎನ್‌ಆರ್‌ಪಿ, ಮಅಯೋ, ಇಎಎಸ್, ಜೆಆರ್‌ವೈ ಸಹಕಾರದೊಂದಿಗೆ ಸ್ವಂತ ಕಟ್ಟಡ	ಇಲಾಖಾವತಿಯಿಂದ ಪೂರ್ಣವಾಗಿ ಕಟ್ಟಲ್ಪಟ್ಟ ಕಟ್ಟಡಗಳು	ಶಾಲಾ ಕಟ್ಟಡಗಳು	ಬಾಡಿಗೆಗೆ ಪಡೆದಿರುವ ಕಟ್ಟಡ	ಯೋಜನಾಧಿಕಾರಿಗಳ ಮಾಲೀಕತ್ವದಲ್ಲಿರುವ ಒಟ್ಟು ಅಂ. ಕಟ್ಟಡಗಳ ಸಂಖ್ಯೆ ಪೂರ್ಣವಾಗಿರುವ ಕಟ್ಟಡಗಳ ಸಂಖ್ಯೆ	ಅತೀ ಅವಶ್ಯ ಇರುವ ಅಂ.ಕಟ್ಟಡಗಳ ಸಂಖ್ಯೆ	ನಿರ್ಮಾಣ ಹಂತದಲ್ಲಿರುವ ಅಂ.ಕ.ಗಳ ಸಂಖ್ಯೆ
1	2	3	4	5	6	7	8	9	10	11	12	13	14
1	ಹಾಸನ	406	406	0	6	47	277	0	60	16	277	93	36
2	ಚನ್ನರಾಯಪಟ್ಟಣ	394	394	0	6	16	282	0	53	37	282	77	35
3	ಹೊಳೆನರಸೀಪುರ	260	260	0	8	6	208	0	16	22	208	34	18
4	ಬೇಲೂರು	301	301	0	2	44	209	0	36	10	209	64	28
5	ಸಕಲೇಶಪುರ	256	256	0	2	13	195	0	21	25	195	52	9
6	ಆಲೂರು	178	178	0	1	12	129	0	14	22	129	33	16
7	ಅರಸೀಕೆರೆ	448	448	0	14	28	299	0	45	62	299	105	44
8	ಅರಕಲಗೂಡು	280	280	0	0	25	234		10	11	234	23	23
ಒಟ್ಟು		**2523**	**2523**	**0**	**39**	**191**	**1833**	**0**	**255**	**205**	**1833**	**481**	**209**

ಅನುಬಂಧ – 5

ಸಿಬ್ಬಂದಿ ಮಾಹಿತಿ : ವಾರ್ಷಿಕ ಆಡಳಿತ ವರದಿ 2020–21

ಕ್ರ. ಸಂ.	ಯೋಜನೆಯ ಹೆಸರು	ಅಧಿಕಾರಿಗಳು		ಮೇಲ್ವಿಚಾರಕಿಯರು		ಪ್ರಥಮ ದರ್ಜೆ ಸಹಾಯಕರು		ದ್ವಿತೀಯ ದರ್ಜೆ ಸಹಾಯಕರು		ವಾಹನ ಚಾಲಕರು		ಡಿ–ದರ್ಜೆ ನೌಕರರು		ಅಂಗನವಾಡಿ ಕಾರ್ಯಕರ್ತೆಯರು		ಅಂಗನವಾಡಿ ಸಹಾಯಕಿಯರು		ಸಹಾಯಕ ಬಾಲವಿಕಾಸ ಯೋಜನಾಧಿಕಾರಿಗಳು		ಕ್ಲರ್ಕ್/ ಟೈಪಿಸ್ಟ್	
		ಮಂ	ಭರ್ತಿ	ಮಂ	ಭರ್ತಿ	ಮಂ	ಭರ್ತಿ	ಮಂ	ಭರ್ತಿ	ಮಂ	ಭರ್ತಿ	ಮಂ	ಭರ್ತಿ	ಮಂ	ಭರ್ತಿ	ಮಂ	ಭರ್ತಿ	ಮಂ	ಭರ್ತಿ	ಮಂ	ಭರ್ತಿ
1	2	3	4	5	6	7	8	9	10	11	12	13	14	15	16	17	18	19	20	21	22
1	ಹಾಸನ	1	0	16	6	2	2	1	1	2	0	1	1	406	403	364	344	1	0	0	0
2	ಚನ್ನರಾಯ ಪಟ್ಟಣ	1	1	14	8	3	0	0	0	0	0	1	0	394	379	367	348	2	1	1	0
3	ಹೊಳೆನರಸೀ ಪುರ	1	1	10	6	1	1	1	0	1	0	1	0	260	248	248	239	0	0	0	0
4	ಬೇಲೂರು	1	1	9	7	2	2	1	0	1	1	1	0	301	290	225	211	0	0	0	0
5	ಸಕಲೇಶಪುರ	1	1	8	5	2	1	1	0	1	0	1	1	256	249	213	202	0	0	0	0
6	ಆಲೂರು	1	1	6	3	2	2	1	0	1	0	1	1	178	174	143	129	0	0	0	0
7	ಅರಸೀಕೆರೆ	1	1	17	15	4	1	1	1	1	0	3	1	448	442	423	408	2	1	0	0
8	ಅರಕಲ ಗೂಡು	1	0	11	3	3	1	1	0	1	1	2	1	280	274	265	250	0	0	0	0
9	ಉಪನಿರ್ದೇಶಕರ ಕಛೇರಿ, ಹಾಸನ	3	0	0	0	5	4	2	0	3	0	2	2	0	0	0	0	0	0	2	0
ಒಟ್ಟು		**11**	**6**	**91**	**53**	**24**	**14**	**9**	**2**	**11**	**2**	**13**	**7**	**2523**	**2459**	**2248**	**2131**	**5**	**2**	**3**	**0**

ಅನುಬಂಧ – 6

ವೈದ್ಯಾಧಿಕಾರಿಗಳು ಅಂಗನವಾಡಿ ಕೇಂದ್ರಗಳಿಗೆ ಭೇಟಿ : ವಾರ್ಷಿಕ ಆಡಳಿತ ವರದಿ – 2020–21

ಕ್ರ. ಸಂ.	ಯೋಜನೆಯ ಹೆಸರು	ವೈದ್ಯಾಧಿಕಾರಿಗಳು ಭೇಟಿ ನೀಡಬೇಕಾಗಿರುವ ಗುರಿ	ಮೊದಲನೇ ತ್ರೈಮಾಸಿಕ	ಶೇಕಡಾ	ಎರಡನೇ ತ್ರೈಮಾಸಿಕ	ಶೇಕಡಾ	ಮೂರನೇ ತ್ರೈಮಾಸಿಕ	ಶೇಕಡಾ	ನಾಲ್ಕನೇ ತ್ರೈಮಾಸಿಕ	ಶೇಕಡಾ	ವಾರ್ಷಿಕ ಸರಾಸರಿ ಮಾಸಿಕ	ಶೇಕಡಾ	ಷರಾ
1	2	3	4	5	6	7	8	9	10	11	12	13	14
1	ಹಾಸನ	411	411	100%	247	60%	321	78%	411	100%	411	100%	
2	ಚನ್ನರಾಯಪಟ್ಟಣ	395	260	66%	123	31%	246	62%	323	82%	323	82%	
3	ಹೊಳೆನರಸೀಪುರ	263	266	101%	68	26%	166	63%	105	40%	105	40%	
4	ಬೇಲೂರು	301	301	100	203	67	269	89%	235	78%	235	78%	-
5	ಸಕಲೇಶಪುರ	258	233	90%	159	62%	187	72%	152	59%	152	59%	
6	ಆಲೂರು	178	178	100%	103	58%	178	100%	178	100%	178	100%	-
7	ಅರಸೀಕೆರೆ	459	200	44.00%	411	90.00%	152	33%	88	19%	88	19%	–
8	ಅರಕಲಗೂಡು	1132	283	25%	139	12%	152	13%	202	18%	202	18%	
ಒಟ್ಟು		**3397**	**2132**	63%	**1453**	43%	**1671**	49%	**1694**	50%	**1694**	50%	

ಅನುಬಂಧ – 7 (ಚುಚ್ಚುಮದ್ದಿನ ಪ್ರಗತಿ)

01.04.2020 ರಿಂದ 31.03.2021ರವರೆಗೆ ಜನಿಸಿದ ಮಕ್ಕಳ ಸಂಖ್ಯೆ – ವಾರ್ಷಿಕ ಆಡಳಿತ ವರದಿ – 2020–21

ಕ್ರ. ಸಂ.	ಯೋಜನೆಯ ಹೆಸರು	ಚುಚ್ಚುಮದ್ದು ಗುರಿ					ಚುಚ್ಚುಮದ್ದು ಸಾಧನೆ					ವಾರ್ಷಿಕ ಪ್ರಗತಿ ಪ್ರತಿಶತ				
		ಬಿಸಿಜಿ	ಡಿಪಿಟಿ	ಪೋಲಿಯೋ	ಮೀಸಲ್ಸ್	ಟಿ.ಟಿ.	ಬಿಸಿಜಿ	ಡಿಪಿಟಿ	ಪೋಲಿಯೋ	ಮೀಸಲ್ಸ್	ಟಿ.ಟಿ.	ಬಿಸಿಜಿ	ಡಿಪಿಟಿ	ಪೋಲಿಯೋ	ಮೀಸಲ್ಸ್	ಟಿ.ಟಿ.
1	2	3	4	5	6	7	8	9	10	11	12	13	14	15	16	17
1	ಹಾಸನ	5189	5189	5189	5189	5883	5068	5032	5032	6369	4023	98%	97%	97%	123%	68%
2	ಚನ್ನರಾಯಪಟ್ಟಣ	2963	2963	2963	2963	3334	1537	5344	5344	1727	2821	52%	180%	180%	58%	85%
3	ಹೊಳೆನರಸೀಪುರ	2175	2175	2175	2175	2466	1889	1850	1850	1618	1786	87%	85%	85%	74%	72%
4	ಬೇಲೂರು	2322	2322	2322	2322	2580	1160	2258	2258	1859	1999	50%	97%	97%	80%	77%
5	ಸಕಲೇಶಪುರ	1432	1432	1432	1432	1589	1001	1448	1448	1402	1313	70%	101%	101%	98%	83%
6	ಆಲೂರು	1036	1036	1036	1036	1151	860	1053	1053	1010	933	83%	102%	102%	97%	81%
7	ಅರಸೀಕೆರೆ	3525	3525	3525	3525	3916	2075	3936	3936	3946	3885	59%	112%	112%	112%	99%
8	ಅರಕಲಗೂಡು	2502	2502	2502	2502	2837	1246	2686	2686	2467	2623	50%	107%	107%	99%	92%
ಒಟ್ಟು		**21144**	**21144**	**21144**	**21144**	**23756**	**14836**	**23607**	**23607**	**20398**	**19383**	70%	112%	112%	96%	82%

ಅನುಬಂಧ – 8

ಸಲಹಾ ಸೇವೆ : ವಾರ್ಷಿಕ ಆಡಳಿತ ವರದಿ – 2020–21

ಕ್ರ. ಸಂ.	ಯೋಜನೆಯ ಹೆಸರು	ವರ್ಷದಲ್ಲಿ ಸಲಹಾ ಸೇವೆಗೆ ಒಳಪಟ್ಟ ಮಕ್ಕಳ ಸಂಖ್ಯೆ	ಸಲಹಾ ಸೇವೆಗೆ ಒಳಪಟ್ಟವರ ಸಂಖ್ಯೆ		ಸಲಹಾ ಸೇವೆಗಾಗಿ ಯೋಜನಾ ವ್ಯಾಪ್ತಿಯ ಹೊರತಾಗಿ ಖರ್ಚಾದ ಹಣ	ಸಲಹಾ ಸೇವೆ ಸಂಘ ಸಂಸ್ಥೆಗಳಿಂದ ಪಡೆದ ನೆರವು (ಹಣದ ರೂಪ ಅಥವಾ ಇತರೆ)
			ಗರ್ಭಿಣಿ	ಬಾಣಂತಿಯರು		
1	2	3	4	5	6	7
1	ಹಾಸನ	0	0	0	0	0
2	ಚನ್ನರಾಯಪಟ್ಟಣ	1496	782	678	0	0
3	ಹೊಳೆನರಸೀಪುರ	10	125	132	0	0
4	ಬೇಲೂರು	0	0	0	0	0
5	ಸಕಲೇಶಪುರ	315	180	216	0	0
6	ಆಲೂರು	185	380	360	0	0
7	ಅರಸೀಕೆರೆ	262	89	76	0	0
8	ಅರಕಲಗೂಡು	2174	487	521	0	0
ಒಟ್ಟು		**4442**	**2043**	**1983**	**0**	**0**

ಅನುಬಂಧ – 9

ಸಿಬ್ಬಂದಿ ಮಾಹಿತಿ: ವಾರ್ಷಿಕ ಆಡಳಿತ ವರದಿ – 2020–21

ಕ್ರ. ಸಂ.	ಯೋಜನೆಯ ಹೆಸರು	ಬಾಲವಿಕಾಸ ಯೋಜನಾಧಿಕಾರಿಗಳು		ಸಹಾಯಕ ಬಾಲವಿಕಾಸ ಯೋಜನಾ ಧಿಕಾರಿಗಳು		ಮೇಲ್ವಿಚಾರ ಕಿಯರು		ಅಂಗನವಾಡಿ ಕಾರ್ಯಕರ್ತೆ ಯರು		ಪುನ:ಶ್ಚೇತನ ತರಬೇತಿ ಹೊಂದಲು ಅರ್ಹರಿರುವವರು			ಪ್ರಸಕ್ತ ವರ್ಷದಲ್ಲಿ ತರಬೇತಿ ಪಡೆದ ಕಾರ್ಯ ಕರ್ತೆಯರು	ವೃತ್ತಿ ತರಬೇತಿಗೆ ಅರ್ಹರಾದ ಕಾರ್ಯ ಕರ್ತೆಯರ ಸಂಖ್ಯೆ	ಪುನ:ಶ್ಚೇತನ ತರಬೇತಿ ಹೊಂದಲು ಅರ್ಹರಿ ರುವ ಕಾರ್ಯ ಕರ್ತೆಯರ ಸಂಖ್ಯೆ	ಓರಿಯಂಟೇಷ ನ್ ತರಬೇತಿ ಹೊಂದಿದ ಸಹಾಯಕಿ ಯರು	ಪ್ರಸಕ್ತ ವರ್ಷದಲ್ಲಿ ತರಬೇತಿ ಪಡೆದ ಸಹಾಯಕಿ ಯರು	ಓರಿಯಂಟೇ ಶನ್ ತರಬೇತಿಗೆ ಅರ್ಹರಿ ರುವ ಸಹಾಯ ಕಿಯರು
		ವೃತ್ತಿ ತರಬೇತಿ ಪೂರ್ಣಗೊಳಿ ಸಿದವರು	ವೃತ್ತಿ ತರಬೇತಿ ಆಗದೇ ಇದ್ದವರು	ವೃ.ತ. ಆದ ವರು	ವೃ.ತ. ಆಗದ ವರು	ವೃ.ತ. ಆದ ವರು	ವೃ.ತ. ಆಗದ ವರು	ವೃ.ತ. ಆದ ವರು	ವೃ.ತ. ಆಗದ ವರು	ಶಿ.ಅ. ಯೋ. ಗಳು	ಸ.ಶಿ. ಅ. ಯೋ.	ಮೇಲ್ವಿ ಚಾರಕಿ ಯರು						
1	2	3	4	5	6	7	8	9	10	11	12	13	14	15	16	17	18	19
1	ಹಾಸನ	-	-	-	-	-	2	-	47	-	-	4	-	47	350	303	0	53
2	ಚನ್ನರಾಯಪಟ್ಟಣ	1	0	1	0	4	2	346	34	0	0	4	0	34	346	323	0	25
3	ಹೊಳೆನರಸೀಪುರ	1	-	-	-	3	3	218	30	_	_	1	_	_	75	219	_	20
4	ಬೇಲೂರು	1	-	-	-	4	3	-	15	1	-	2	-	15	301	15	-	-
5	ಸಕಲೇಶಪುರ	1	0	0	0	3	2	235	14	0	0	3	0	0	0	0	0	0
6	ಆಲೂರು	1	–	–	–	–	3	160	23	–	–	3	–	–	–	–	–	–
7	ಅರಸೀಕೆರೆ	1	–	1	–	13	2	439	21	1	1	10	0	21	439	390	0	15
8	ಅರಕಲಗೂಡು	_	_	1	_	1	2	_	_	_	_	_	_	_	_	_	_	_
ಒಟ್ಟು		**6**	**0**	**3**	**0**	**28**	**19**	**1398**	**184**	**2**	**1**	**27**	**0**	**117**	**1511**	**1250**	**0**	**113**

ಅನುಬಂಧ – 10

ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣ ಶಿಬಿರಗಳು – 2020–21ನೇ ಸಾಲಿನ ಆಡಳಿತ ವರದಿ

ಕ್ರ. ಸಂ.	ಯೋಜನೆಯ ಹೆಸರು	ಮಾಸಿಕ ಪ್ರಗತಿಯಂತೆ ವರ್ಷದಲ್ಲಿ ಆಗಿರುವ		ವೃತ್ತ, ತಾಲ್ಲೂಕು ಮಟ್ಟದಲ್ಲಿ ಏರ್ಪಡಿಸಿದ ಶಿಬಿರಗಳು ಪ್ರಾತಕ್ಷತೆಗಳು, ವಿಚಾರ ಗೋಷ್ಠಿಗಳು, ಕಾರ್ಯಾಗಾರಗಳು, ಪ್ರದರ್ಶನಗಳು ಇತ್ಯಾದಿ ವಿವರಗಳು
		ಕಾರ್ಯಕರ್ತೆಯರ ಮನೆ ಭೇಟಿ	ಮೇಲ್ವಿಚಾರಕಿಯರು ಏರ್ಪಡಿಸಿದ ಶಿಬಿರಗಳು	
1	2	3	4	5
1	ಹಾಸನ	4354	40	ಮಹಿಳೆಯರ ಮತ್ತು ಮಕ್ಕಳ ಮಾರಾಟ ವಿರುದ್ಧ ಸಭೆಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾವಲು ಸಮಿತಿ ಸಭೆ ನಡೆಸಲಾಗುತ್ತಿದೆ. ಸಾಮಾಜಿಕ ಪಿಡುಗುಗಳ ವಿರುದ್ಧ ಕಾರ್ಯಕ್ರಮಗಳು, ಸ್ತನ್ಯಪಾನ ಸಪ್ತಾಹ, ಮಹಿಳಾ ದಿನಾಚರಣೆ, ಪೌಷ್ಟಿಕ ಆಹಾರ ಶಿಬಿರ, ಕಾನೂನು ಕಮ್ಮಟಗಳು, ಅಂಗವಿಕಲರ ದಿನಾಚರಣೆ ನಡೆಸಲಾಗಿದೆ.
2	ಚನ್ನರಾಯಪಟ್ಟಣ	711396	489	ಮಹಿಳೆಯರ ಮತ್ತು ಮಕ್ಕಳ ಮಾರಾಟ ವಿರುದ್ಧ ಸಭೆಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾವಲು ಸಮಿತಿ ಸಭೆ ನಡೆಸಲಾಗುತ್ತಿದೆ. ಸಾಮಾಜಿಕ ಪಿಡುಗುಗಳ ವಿರುದ್ಧ ಕಾರ್ಯಕ್ರಮಗಳು, ಸ್ತನ್ಯಪಾನ ಸಪ್ತಾಹ, ಮಹಿಳಾ ದಿನಾಚರಣೆ, ಪೌಷ್ಟಿಕ ಆಹಾರ ಶಿಬಿರ, ಕಾನೂನು ಕಮ್ಮಟಗಳು, ಅಂಗವಿಕಲರ ದಿನಾಚರಣೆ ಪೋಷಣ್ ಅಭಿಯಾನ ಯೋಜನೆಯಡಿ ಸಿ.ಬಿ.ಇ ಚಟುವಟಿಕೆ ನಡೆಸಲಾಗಿದೆ.
3	ಹೊಳೆನರಸೀಪುರ	7328	68	ಪೋಷಣಾ ಅಭಿಯಾನ ಯೋಜನೆಯಡಿ ಸೀಮಂತ ಕಾರ್ಯಕ್ರಮ,ಅನ್ನಪ್ರಶರಾ.ಶಾಲಾ ಪೂರ್ವ ಶಿಕ್ಷಣ,ಸಂಪೋಣ ದಿನ,ಸ್ವಚತೆ ಬಗ್ಗೆ ತಿಳವಳಿಕೆ.
4	ಬೇಲೂರು	32508	538	ಇಸಿಸಿಡೇ ಸೀಮಂತ, ಅನ್ನಪ್ರಾಶನ್ನ, ಪೋಷಕರ ಸಭೆ, ಪೌಷ್ಟಿಕ ಪ್ರಾತ್ಯಕ್ಷಿತೆ, ತಾಯಂದಿರ ಸಭೆ, ಪೋಷಣ್ ಅಭಿಯಾನ ಕಾರ್ಯಕ್ರಮ
5	ಸಕಲೇಶಪುರ	87524	34	ಪೋಷಣ್ ಅಭಿಯಾನ್ ಕೊರೋನ ಜಾಗೃತಿ ಶಿಬಿರಗಳು ಪೌಷ್ಟಿಕ ಆಹಾರ ಶಿಬಿರ, ತಾಯಂದಿರ ಸಭೆ.
6	ಆಲೂರು	12000	112	1.ಗರ್ಭಿಣಿಯರ ಸೀಮಂತ ಕಾರ್ಯಕ್ರಮ 2 ಪೌಷ್ಟಿಕ ಆಹಾರ ಸಪ್ತಾಹ
7	ಅರಸೀಕೆರೆ	137700	7344	ಮಹಿಳೆಯರ ಮತ್ತು ಮಕ್ಕಳ ಮಾರಾಟ ವಿರುದ್ಧ ಸಭೆಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾವಲು ಸಮಿತಿ ಸಭೆ ನಡೆಸಲಾಗುತ್ತಿದೆ. ಸಾಮಾಜಿಕ ಪಿಡುಗುಗಳ ವಿರುದ್ಧ ಕಾರ್ಯಕ್ರಮಗಳು, ಸ್ತನ್ಯಪಾನ ಸಪ್ತಾಹ, ಮಹಿಳಾ ದಿನಾಚರಣೆ, ಪೌಷ್ಟಿಕ ಆಹಾರ ಶಿಬಿರ, ಕಾನೂನು ಕಮ್ಮಟಗಳು, ಅಂಗವಿಕಲರ ದಿನಾಚರಣೆ ಪೋಷಣ್ ಅಭಿಯಾನ ಯೋಜನೆಯಡಿ ಸಿ.ಬಿ.ಇ ಚಟುವಟಿಕೆ ನಡೆಸಲಾಗಿದೆ.
8	ಅರಕಲಗೂಡು	18742	84	ಮಹಿಳೆಯರ ಮತ್ತು ಮಕ್ಕಳ ಮಾರಾಟ ವಿರುದ್ಧ ಸಭೆಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾವಲು ಸಮಿತಿ ಸಭೆ ನಡೆಸಲಾಗುತ್ತಿದೆ. ಸಾಮಾಜಿಕ ಪಿಡುಗುಗಳ ವಿರುದ್ಧ ಕಾರ್ಯಕ್ರಮಗಳು, ಸ್ತನ್ಯಪಾನ ಸಪ್ತಾಹ, ಮಹಿಳಾ ದಿನಾಚರಣೆ, ಪೌಷ್ಟಿಕ ಆಹಾರ ಶಿಬಿರ, ಕಾನೂನು ಕಮ್ಮಟಗಳು, ಅಂಗವಿಕಲರ ದಿನಾಚರಣೆ ನಡೆಸಲಾಗಿದೆ.
ಒಟ್ಟು		**1011552**	**8709**	

ಅನುಬಂಧ – 11

ಜನನ ಶಿಶು ಮರಣ ಹಾಗೂ ಸತ್ತು ಹುಟ್ಟಿದ ಮಕ್ಕಳ ವಿವರ

ಕ್ರ. ಸಂ.	ಯೋಜನೆ ಹೆಸರು	01.04.2020 ರಿಂದ 31.03.2021ರವರೆಗೆ ಆದ ಒಟ್ಟು ಜೀವಂತ ಜನನಗಳು			01.04.2020 ರಿಂದ 31.03.2021ರವರೆಗೆ ಸತ್ತು ಹುಟ್ಟಿದ ಮಕ್ಕಳ ವಿವರ			01.04.2020 ರಿಂದ 31.03.2021ರವರೆಗೆ ಆದ 1 ಶಿಶು ಮರಣಗಳ ಸಂಖ್ಯೆ			ಶಿಶು ಮರಣದ ಪ್ರಮಾಣ ಪ್ರತಿ ಸಾವಿರಕ್ಕೆ
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	
1	2	3	4	5	6	7	8	9	10	11	12
1	ಹಾಸನ	1331	1376	**2707**	3	2	**5**	12	6	**18**	
2	ಚನ್ನರಾಯಪಟ್ಟಣ	818	737	**1555**	1	1	**2**	16	7	**23**	
3	ಹೊಳೆನರಸೀಪುರ	747	707	**1454**	0	0	**0**	6	9	**15**	
4	ಬೇಲೂರು	719	720	**1439**	2	0	**2**	13	12	**25**	
5	ಸಕಲೇಶಪುರ	529	476	**1005**	5	4	**9**	19	5	**24**	
6	ಆಲೂರು	331	354	**685**	1	4	**5**	4	10	**14**	
7	ಅರಸೀಕೆರೆ	1116	910	**2026**	0	0	**0**	13	9	**22**	
8	ಅರಕಲಗೂಡು	68	63	**131**	8	3	**11**	0	0	**0**	
ಒಟ್ಟು		**5659**	**5343**	**11002**	**20**	**14**	**34**	**83**	**58**	**141**	

ಅನುಬಂಧ – 12

ವಿಪರೀತ ತೂಕ ಕಡಿಮೆ ಇರುವ ಮಕ್ಕಳ ವಿವರ

ಕ್ರ. ಸಂ.	ಯೋಜನೆಯ ಹೆಸರು	ವಾರ್ಷಿಕ ಅಂತ್ಯದಲ್ಲಿ ತೂಕ ಮಾಡಿದ ಮಕ್ಕಳ ಸಂಖ್ಯೆ	
		ತೂಕ ಮಾಡಿದ ಮಕ್ಕಳ ಸಂಖ್ಯೆ	ವಿಪರೀತ ತೂಕ ಕಡಿಮೆ ಇರುವ ಮಕ್ಕಳ ಸಂಖ್ಯೆ
1	2	3	4
1	ಹಾಸನ	13897	9
2	ಚನ್ನರಾಯಪಟ್ಟಣ	13517	8
3	ಹೊಳೆನರಸೀಪುರ	10213	9
4	ಬೇಲೂರು	8612	9
5	ಸಕಲೇಶಪುರ	7041	22
6	ಆಲೂರು	3635	2
7	ಅರಸೀಕೆರೆ	14760	17
8	ಅರಕಲಗೂಡು	9717	18
ಒಟ್ಟು		**81392**	**94**

ಹಾಸನ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ತರಬೇತಿದಾರರ ವಿವರ

1	ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ	* ಶ್ರೀ ಪ್ರಕಾಶ್ ಎಂ. ಸರಶೆಟ್ಟಿ (20-07-2020ರ ವರೆಗೆ) * ಶ್ರೀಮತಿ ಮಂಜುಳ ಹೆಚ್.ಪಿ. (ಹೆಚ್ಚುವರಿ ಪ್ರಭಾರ) (21-07-2020ರಿಂದ 11-10-2020) * ಶ್ರೀ ಹರೀಶ್ ಸಿ.ಕೆ. (12-10-2020 ರಿಂದ)
2	ಅಧೀಕ್ಷಕರು	ಶ್ರೀ ವಿಜಯಕುಮಾರ್ ಹೆಚ್
3	ದ್ವಿತೀಯ ದರ್ಜೆ ಸಹಾಯಕರು	ಹುದ್ದೆ ಖಾಲಿ
4	ಡಿ ದರ್ಜೆ ನೌಕರರು	ಹುದ್ದೆ ಖಾಲಿ
5	ವಾಲಿಬಾಲ್ ತರಬೇತಿದಾರರು	ಎನ್.ಡಿ.ಜಯರಾಂ
6	ಹಾಕಿ ತರಬೇತಿದಾರರು	ಹೆಚ್.ಬಿ.ರವೀಶ್
7	ಜಿಮ್ನಾಸ್ಟಿಕ್ಸ ತರಬೇತಿದಾರರು	ಜೆ.ವಿ.ಜಗನ್ನಾಥ್
8	ಬ್ಯಾಸ್ಕೆಟ್ ಬಾಲ್ ತರಬೇತಿದಾರರು	ಎಚ್.ಎಲ್.ಸುಬ್ರಮ್ಮಣ್ಯ
9	ವಾಲಿಬಾಲ್ ತರಬೇತಿದಾರರು	ಎಸ್.ಎನ್.ರಮೇಶ್

02) <u>ಯುವಜನಯೋತ್ಸವ:</u>

2020-21 ನೇ ಸಾಲಿನಲ್ಲಿ ಹಾಸನ ಜಿಲ್ಲಾ ಮಟದ ಯುವಜನೋತ್ಸವನ್ನು ಹಾಸನದ ಹಾಸನಾಂಭ ಕಲಾ ಭವನ ಸಭಾಂಗಣದಲ್ಲಿ ದಿನಾಂಕ 24-12-2020 ರಂದು ಸಂಘಟಿಸಲಾಗಿರುತ್ತದೆ. ಇದಕ್ಕೆ ರೂ. 2,00,000/- (ಎರಡು ಲಕ್ಷ ಮಾತ್ರ) ವೆಚ್ಚ ಭರಿಸಲಾಗಿರುತ್ತದೆ.

03) <u>ರಾಜ್ಯ ಮಟ್ಟದ ಯುವಜನೋತ್ಸವ:</u>

ಕೋವಿಡ್-19ರ ಕಾರಣ ಕಾರ್ಯಕ್ರಮ ಜರುಗಿರುವುದಿಲ್ಲ.

04) <u>ಯುವ ಸಪ್ತಾಹ:</u>

ಶ್ರೀ ಸ್ವಾಮಿ ವಿವೇಕಾನಂದ ರವರ ಜಯಂತಿ ಪ್ರಯುಕ್ತ ಜಿಲ್ಲಾ ಮಟ್ಟದ ಯುವ ಸಪ್ತಾಹ ಕಾರ್ಯಕ್ರಮದಡಿ ದಿನಾಂಕ 12-01-2021 ರಿಂದ 19-01-2021 ರವರೆಗೆ ವಿವಿಧ ಚಟುವಟಿಕೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಸಂಘಟಿಸಲಾಗಿರುತ್ತದೆ. ಈ ಕಾರ್ಯಕ್ರಮಗಳಿಗಾಗಿ ರೂ. 1,30,000/- (ಒಂದು ಲಕ್ಷದ ಮೂವತ್ತು ಸಾವಿರ ಮಾತ್ರ) ವೆಚ್ಚ ಭರಿಸಲಾಗಿದೆ.

05) <u>ಜಿಲ್ಲಾ ಯುವಜನ ಮೇಳ:</u>

ಕೋವಿಡ್-19ರ ಕಾರಣ ಕಾರ್ಯಕ್ರಮ ಜರುಗಿರುವುದಿಲ್ಲ.

06) <u>ರಾಜ್ಯ ಯುವಜನ ಮೇಳ:</u>

ಕೋವಿಡ್-19ರ ಕಾರಣ ಕಾರ್ಯಕ್ರಮ ಜರುಗಿರುವುದಿಲ್ಲ.

07) <u>ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ:</u>

ಹಾಸನ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ದಿನಾಂಕ 09–02–2019 ರಿಂದ 10–02–2021 ರವರೆಗೆ ನಡೆಸಲಾಗಿರುತ್ತದೆ. ಈ ಕ್ರೀಡಾ ಕೂಟ ಮತ್ತು ಸಾಂಸ್ಕೃತಿಕ ಸ್ಪರ್ದೆ ಸಂಘಟಿಸಲು ರೂ. 1,50,000/– (ಒಂದು ಲಕ್ಷದ ಐವತ್ತು ಸಾವಿರ ಮಾತ್ರ) ವೆಚ್ಚ ಮಾಡಲಾಗಿರುತ್ತದೆ.

08) <u>ಹಾಸನ ಜಿಲ್ಲಾ ಮಟ್ಟದ ಅಂಗವಿಕಲರ ಕ್ರೀಡಾ ಕೂಟ:</u>

ಕೋವಿಡ್–19ರ ಕಾರಣ ಕಾರ್ಯಕ್ರಮ ಜರುಗಿರುವುದಿಲ್ಲ.

09) <u>ಕ್ರೀಡಾ ಶಾಲೆ/ನಿಲಯದ ಆಯ್ಕೆ:</u>

ಹಾಸನ ಜಿಲ್ಲೆಯ 8 ತಾಲ್ಲೂಕುಗಳಲ್ಲಿ ಇಲಾಖೆ ನಡೆಸುವ ಮತ್ತು ಜಿಲ್ಲಾ ಪಂಚಾಯತ್ ನಿಂದ ನಿರ್ವಹಣೆ ಮಾಡುತ್ತಿರುವ ಕ್ರೀಡಾ ವಸತಿ ಶಾಲೆಗೆ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು ಆಯಾ ತಾಲ್ಲೂಕು ಕೇಂದ್ರದಲ್ಲಿ ಜನವರಿ/ಫೆಬ್ರವರಿ 2021ರ ಮಾಹೆಯಲ್ಲಿ ಪ್ರತ್ಯೇಕವಾಗಿ ಆಯ್ಕೆ ನಡೆಸಿ ಅರ್ಹ ಕ್ರೀಡಾಪಟುಗಳನ್ನು ರಾಜ್ಯ ಮಟ್ಟದ ಆಯ್ಕೆ ಕಳುಹಿಸಲಾಗಿರುತ್ತದೆ. ಇದಕ್ಕಾಗಿ ರೂ. 1,50,000/– (ಒಂದು ಲಕ್ಷ ಐವತ್ತು ಸಾವಿರ ಮಾತ್ರ) ವೆಚ್ಚ ಮಾಡಲಾಗಿರುತ್ತದೆ.

10) <u>ಮಾಸಾಶನ:</u>

2020–21ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿರುವ 34 ವಯಸ್ಸಾದ ಆಶಕ್ತ ಕುಸ್ತಿ ಪಟುಗಳಿಗೆ ಮಾಸಿಕ ರೂ. 2,500/– ರಂತೆ ಮಾಶಾಸನ ನೀಡಲಾಗಿರುತ್ತದೆ.

11) <u>ರಾಜ್ಯ ಮಟ್ಟದ ಸಕಾರಿ ನೌಕರರ ಕ್ರೀಡಾ ಕೂಟ:</u>

ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾ ಕೂಟದಲ್ಲಿ ವಿಜೇತರಾದ ಸರ್ಕಾರಿ ನೌಕರರ ಪಟ್ಟಿಯನ್ನು ರಾಜ್ಯ ಮಟ್ಟಕ್ಕೆ ಕಳುಹಿಸಲಾಗಿದೆ ಹಾಗೂ ರಾಜ್ಯ ಮಟ್ಟದ ಕ್ರೀಡಾ ಕೂಟವನ್ನು ಕೋವಿಡ್–19 ಕಾರಣ ಜರುಗಿರುವುದಿಲ್ಲ.

12) <u>ಗ್ರಾಮೀಣ ಕ್ರೀಡಾ ಕೇಂದ್ರಗಳು ಯೋಜನೆ ಅಡಿಯಲ್ಲಿ:</u>

ಕೋವಿಡ್–19ರ ಕಾರಣ ಕಾರ್ಯಕ್ರಮ ಜರುಗಿರುವುದಿಲ್ಲ.

13) <u>ಕ್ರೀಡಾ ವಸತಿ ನಿಲಯ:</u>

ಪ್ರಸ್ತುತ ಹಾಸನ ಜಿಲ್ಲೆಯಲ್ಲಿ ನಡೆಸುತ್ತಿರುವ ಕ್ರೀಡಾ ವಸತಿ ಶಾಲೆಯಲ್ಲಿ 2020–21ನೇ ಸಾಲಿನಲ್ಲಿ ಬಾಲಕ ಬಾಲಕಿಯರು ಸೇರಿದಂತೆ 70 ವಿದ್ಯಾರ್ಥಿಗಳು 5, 6, 7, 8, 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಇವರಿಗೆ ಕ್ರೀಡಾ ಸಮವಸ್ತ್ರ ಮತ್ತು ಕ್ರೀಡಾ ಸಲಕರಣೆಯನ್ನು ಜಿಲ್ಲಾ ಪಂಚಾಯತ್ ನಿಂದ ನೀಡಲಾಗಿದೆ. ಹಾಗೂ ವಿದ್ಯಾರ್ಥಿಗಳಿಗೆ ಇಲಾಖೆಯಿಂದ ಉಚಿತ ಊಟ, ಸಮವಸ್ತ್ರ, ತರಬೇತಿ, ವೈದ್ಯಕೀಯ ಚಿಕಿತ್ಸೆ, ಟ್ಯೂಷನ್ ನೀಡಲಾಗುತ್ತಿದೆ, ಮತ್ತು ಕ್ರೀಡಾ ನಿಲಯದ ಸುರಕ್ಷತೆಗೆ ಕೇರ್ ಟೇಕರ್ ಮತ್ತು ಕಾವಲುಗಾರರನ್ನು ನೇಮಿಸಲಾಗಿದೆ. ಹಾಗೂ ಉಚಿತವಾಗಿ ಈಜು ತರಬೇತಿಯನ್ನು ನೀಡಲಾಗುತ್ತಿದೆ.

14) <u>ತಾಲ್ಲೂಕು ಕ್ರೀಡಾಂಗಣ:</u>

<u>ಜಿಲ್ಲಾ ಕ್ರೀಡಾಂಗಣ ಹಾಸನ:</u> ಖೇಲೋ ಇಂಡಿಯಾ ಯೋಜನೆಯಡಿಯಲ್ಲಿ 825.00 ಲಕ್ಷಗಳ ಅನುದಾನದಲ್ಲಿ 400 ಮೀ ಸಿಂಥೆಟಿಕ್ ಟ್ರ್ಯಾಕ್ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಕಾಮಗಾರಿಯು ಲೋಕೋಪಯೋಗಿ ಇಲಾಖೆ ನಿರ್ವಹಿಸುತ್ತಿದೆ.

ರಾಜ್ಯ ವಲಯದ ಬಂಡಾವಳ ವೆಚ್ಚದಡಿಯಲ್ಲಿ 2019–20ನೇ ಸಾಲಿನ ಕ್ರೀಡಾಂಗಣ ಮೇಲ್ದರ್ಜೆಗೇರಿಸಲು ರೂ. 99.00 ಲಕ್ಷ ಅನುದಾನದಲ್ಲಿ ಬ್ಯಾಟ್‌ಮಿಟನ್, ವುಡನ್‌ಕೋರ್ಟ್, ವಾಕಿಂಗ್‌ಟ್ರ್ಯಾಕ್ ಶೌಚಾಲಯ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

ಜಿಲ್ಲಾ ಕ್ರೀಡಾಂಗಣ ಸಮಿತಿ ವತಿಯಿಂದ ರೂ. 13.25 ಲಕ್ಷ ಅನುದಾನದಲ್ಲಿ ಒಳಾಂಗಣ ಕ್ರೀಡಾಂಗಣದ 02 ಶಟಲ್ ಕೋರ್ಟ್, ಸಿಂಥೆಟಿಕ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ ನಿರ್ವಹಿಸುತ್ತಿದೆ.

ಜಿಲ್ಲಾ ಕ್ರೀಡಾಂಗಣ ಸಮಿತಿ ವತಿಯಿಂದ ರೂ. 9.16 ಲಕ್ಷ ಅನುದಾನದಲ್ಲಿ ಒಳಾಂಗಣ ಕ್ರೀಡಾಂಗಣದಲ್ಲಿ ದುರಸ್ಥಿ ಕಾಮಗಾರಿ, ವಿಂಡ್ ಫ್ಯಾನ್ ಅಳವಡಿಕೆ ಮತ್ತು ಪಾಲಿಕಾರ್ಬನ್ ಶೀಟ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ ನಿರ್ವಹಿಸುತ್ತಿದೆ.

<u>ಸಕಲೇಶಪುರ ತಾಲ್ಲೂಕು:</u> ರಾಜ್ಯ ವಲಯದ ಬಂಡಾವಳ ವೆಚ್ಚದಡಿಯಲ್ಲಿ 2019–20ನೇ ಸಾಲಿನಲ್ಲಿ ಸಕಲೇಶಪುರ ತಾಲ್ಲೂಕು ಕ್ರೀಡಾಂಗಣ ಮೇಲ್ದರ್ಜೆಗೆರಿಸಲು ರೂ. 111 ಲಕ್ಷ ಅನುದಾನದಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾಮಗಾರಿ ವಹಿಸಿದೆ ಹಾಗೂ ಕಾಮಗಾರಿ ಪ್ರಗತಿಯಲ್ಲಿದೆ.

<u>ಅರಸೀಕೆರೆ ತಾಲ್ಲೂಕು:</u> 2 ಕೋಟಿ ವೆಚ್ಚದಲ್ಲಿ ಅರಸೀಕೆರೆ ತಾಲ್ಲೂಕು ಕ್ರೀಡಾಂಗಣ ಕಾಮಗಾರಿ ಭಾಗಶಃ ಮುಗಿದಿದೆ. ಇಲಾಖೆಗೆ ಹಸ್ತಾಂತರಿಸುವುದು ಬಾಕಿ ಇದೆ.

<u>ಹೊಳೆನರಸೀಪುರ ತಾಲ್ಲೂಕು:</u> ಖೋಲೋ ಇಂಡಿಯಾ ಯೋಜನೆಯಡಿಯಲ್ಲಿ ಹೊಳೆನರಸೀಪುರ ತಾಲ್ಲೂಕು ಒಳಾಂಗಣ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ. 450 ಲಕ್ಷ ಅನುದಾನದಲ್ಲಿ 360 ಲಕ್ಷ ಬಿಡುಗಡೆಯಾಗಿದ್ದು, 90 ಲಕ್ಷ ಅನುದಾನ ಬಿಡುಗಡೆಯಾಗಬೇಕಾಗಿದೆ. 300 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಲೋಕೋಪಯೋಗಿ ಇಲಾಖೆಯವರು ಆರ್.ಸಿ.ಸಿ, ರೂಂ ಎಂಟ್ರಿ, ಕಛೇರಿ ನಿರ್ಮಾಣ, ಕಾಂಪೌಂಡ್ ಕೆಲಸಗಳು, ಬ್ಯಾಸ್ಕೆಟ್ ಬಾಲ್ ಪ್ಲೋರಿಂಗ್, ಷೆಟಲ್ ಬ್ಯಾಟ್‌ಮಿಟನ್ ವುಡ್/ಸಿಂಥೆಟಿಕ್ ಕೋಟ್, ಜೆನರೇಟರ್‌ಗೆ ಎಲೆಕ್ಟ್ರಿಕ್ ಕೆಲಸಗಳು, ಶೌಚಾಲಯ ಕೊಠಡಿ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನಕ್ಕೆ ಮನವಿ ಮಾಡಿದ್ದಾರೆ.

<u>ಚನ್ನರಾಯಪಟ್ಟಣ ತಾಲ್ಲೂಕು:</u> ಚನ್ನರಾಯಪಟ್ಟಣ ತಾಲ್ಲೂಕು ಕ್ರೀಡಾಂಗಣದಲ್ಲಿ ಜಿಮ್ ಕೇಂದ್ರ 40 ಲಕ್ಷ ವೆಚ್ಚದಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಕಾಮಗಾರಿ ನಿರ್ವಹಿಸಿದ್ದು, ಇಲಾಖೆಗೆ ಹಸ್ತಾಂತರವಾಗಿರುವುದಿಲ್ಲ.

15) ಇಲಾಖೆಯ ಆದೇಶದಂತೆ, ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ನಿಮಾನ್ಸ್ ಆಸ್ಪತ್ರೆಯ ಸಹಯೋಗದಲ್ಲಿ 05 ಜನ ಯುವಕರಿಗೆ ತರಬೇತಿ ನೀಡಿ ಯುವ ಸ್ಪಂದನ ಕೌನ್ಸಿಲಿಂಗ್ ಕೇಂದ್ರವನ್ನು ಪ್ರಾರಂಭಿಸಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಲಾಗುತ್ತಿದೆ.

16) **2020–21ನೇ ಸಾಲಿನಲ್ಲಿ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಕಚೇರಿಗೆ ಯೋಜನೇತರದ ಅಡಿ ಬಿಡುಗಡೆ ಮಾಡಿರುವ ಅನುದಾನ ಮತ್ತು ವೆಚ್ಚವಾದ ಅನುದಾನದ ವಿವರ**

ಕ್ರ ಸಂ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ವೆಚ್ಚವಾದ ಅನುದಾನ	ಉಳಿಕೆಯಾದ ಅನುದಾನ	ಶೇ%
1	2405–00–104–0–26 ಕ್ರೀಡಾ ಕೂಟ ಮತ್ತು ರ್ಯಾಲಿಗಳ ಸಂಘಟನೆ, ಪ್ರಯಾಣ ಭತ್ಯೆ ಮತ್ತು ದಿನಭತ್ಯೆ	25.00	25.00	0.00	99.98%
2	2405–00–104–0–27 ನಿರ್ದೇಶನ ಮತ್ತು ಆಡಳಿತ, ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ	7.77	7.60	0.17	97.85%
3	2405–00–104–0–27	4.00	3.40	0.60	85.02%
4	2405–00–104–0–28 ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ	32.10	30.64	1.46	95.44%
5	2405–00–104–0–29 ಕ್ರೀಡಾ ಶಾಲೆಗಳು	22.00	21.88	0.12	99.46%
6	2405–00–104–0–30 ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾ ಪಟುಗಳು ಮತ್ತುಕುಸ್ತಿಗಾರರಿಗೆ ಆರ್ಥಿಕ ನೆರವು	6.52	6.40	0.12	98.16%
7	2405–00–104–0–31 ಗ್ರಾಮೀಣ ಕ್ರೀಡಾ ಕೇಂದ್ರಗಳು	10.00	10.00	0.00	100.00%
8	2405–00–104–0–32 ಕ್ರೀಡೆ ಮತ್ತು ಪಂದ್ಯಗಳು ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ	2.40	0.00	2.40	0.00%
9	2405–00–104–0–33 ಕ್ರೀಡಾ ಸಾಮಗ್ರಿ ಕೊಳ್ಳಲು, ವಿದ್ಯಾ ಹಾಗೂ ಇತರೆ ಸಂಸ್ಥೆಗಳಿಗೆ ಸಹಾಯ	2.45	0.00	2.45	0.00%
10	2405–00–104–0–35 ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗೆ ಪ್ರೋತ್ಸಾಹ	1.50	0.99	0.51	66.00%
11	2405–00–104–0–36 ಕ್ರೀಡಾಸಾಮಗ್ರಿ ಖರೀದಿಗಾಗಿ ಜಿಲ್ಲಾ/ ವಿಭಾಗಿಯ ಯುವಜನ ಸೇವಾ ಮತ್ತು ಕ್ರೀಡಾ ಮಂಡಳಿಗೆ ಸಹಾಯ	1.50	0.99	0.51	66.00%
ಒಟ್ಟು		**115.24**	**106.90**	**8.34**	92.76%

17) ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ಬೇಸಿಗೆ ರಜೆಯಲ್ಲಿ ಬ್ಯಾಸ್ಕೆಟ್ ಬಾಲ್, ಬ್ಯಾಡ್ಮಿಂಟನ್, ಸ್ಕೇಟಿಂಗ್, ಈಜು, ಮತ್ತು ಹಾಕಿ, ವಾಲಿಬಾಲ್, ಅಥ್ಲೆಟಿಕ್ಸ್ ಹಾಗೂ ಇತರೆ ಕ್ರೀಡೆಯಲ್ಲಿ ತರಬೇತಿ ಶಿಬಿರವನ್ನು ಆಯೋಜಿಸಲಾಗಿರುತ್ತದೆ.

***

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಜಿಲ್ಲೆಯಲ್ಲಿ ಒಟ್ಟು 134 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 4 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, 15 ಸಮುದಾಯ ಆರೋಗ್ಯ ಕೇಂದ್ರಗಳು 7 ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು 1 ಜಿಲ್ಲಾ ಆಸ್ಪತ್ರೆ (ಹಾಸನ ವೈದ್ಯಕೀಯ ಮಹಾ ವಿದ್ಯಾಲಯ ಹಾಗೂ ಭೋಧಕ ಆಸ್ಪತ್ರೆ) ಹಾಗೂ 489 ಉಪಕೇಂದ್ರಗಳಿದ್ದು, ಇವುಗಳು ಗ್ರಾಮೀಣ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ

2020–21 ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್.ಹೆಚ್.ಎಂ) ಯೋಜನೆ ಅಡಿಯಲ್ಲಿ ವಿವಿಧ ಕಾರ್ಯಕ್ರಮಗಳಾದ ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ, ಲಸಿಕಾ ಕಾರ್ಯಕ್ರಮ ಹಾಗೂ ಮಡಿಲು ಯೋಜನೆಗಳು ಜಾರಿಯಲ್ಲಿದ್ದು, ಪ್ರಸೂತಿ ಸಮಯದಲ್ಲಿ ತಾಯಿಗೆ ಪ್ರೋತ್ಸಾಹಧನ ಹಾಗೂ ಮಡಿಲು ಕಿಟ್‌ಗಳನ್ನು ನೀಡಲಾಗುತ್ತದೆ.

1) ಪಲ್ಸ್ ಪೋಲಿಯೋ :

ವರ್ಷ	ಪಲ್ಸ್ ಪೋಲಿಯೋ ಲಸಿಕೆ	ಶೇಕಡ
2014–15	181917	99.43%
2015–16	184367	99.05%
2016–17	177356	97.49%
2017–18	128813	104.37%
2018–19	130142	101.60%
2019–20	128636	101.91
2020–21	130045	101.15%

2) ಮಕ್ಕಳ ಸೇವಾ ಸೌಕರ್ಯ :

ಪ್ರತಿ ವರ್ಷ ಜನವರಿ ಮತ್ತು ಜುಲೈ ತಿಂಗಳಿನಲ್ಲಿ 9 ತಿಂಗಳಿನಿಂದ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ವಿಟಮಿನ್ 'ಎ' ದ್ರಾವಣವನ್ನು ಕುಡಿಸಿ ಇರುಳು ಕುರಿಡು ರೋಗ ಬರದಂತೆ ತಡೆಗಟ್ಟಲು ಹಾಕಲಾಗುವುದು.

0–6 ವರ್ಷದೊಳಗಿನ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಿ ಪೌಷ್ಟಿಕ ಆಹಾರ ಕೊಡಿಸುವುದರ ಜೊತೆಗೆ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಕೆಳಕಂಡಂತೆ ಅಪೌಷ್ಟಿಕತೆ ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ.

ವರ್ಷ	0–6 ವರ್ಷದೊಳಗಿನ ಅಪೌಷ್ಟಿಕತೆ ಮಕ್ಕಳಿಗೆ ಚಿಕಿತ್ಸೆ
2014–15	258
2015–16	143
2016–17	147
2017–18	142
2018–19	107
2019–20	394
2020–21	94

3) ಜನನಿ ಸುರಕ್ಷಾ ಯೋಜನೆ :

ಜನನಿ ಸುರಕ್ಷಾ ಯೋಜನೆಯಡಿಯಲ್ಲಿ ಬಡತನ ರೇಖೆಗಿಂತ ಕಡಿಮೆ ಆದಾಯದ ಗರ್ಭಿಣಿ ಸ್ತ್ರೀಯರಿಗೆ ಆಸ್ಪತ್ರೆಯಲ್ಲಿ ಹೆರಿಗೆಯಾದರೆ ರೂ.700/–, ನಗರ ಆಸ್ಪತ್ರೆಯಲ್ಲಿ ಹೆರಿಗೆಯಾದರೆ ರೂ600/–, ಸರ್ಕಾರಿ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆಗಳಲ್ಲಿ ಸಾಮಾನ್ಯ ಮತ್ತು ಸಿಸೇರಿನ್ ಹೆರಿಗೆ ಆದರೆ ರೂ 600/– ಮತ್ತು 600/– ಹಣವನ್ನು ನಿಯಮಾನುಸಾರ ನೀಡಲಾಗುವುದು.

ವರ್ಷ	ಜನನಿ ಸುರಕ್ಷಾ ಯೋಜನೆಯ ಫಲಾನುಭವಿಗಳು
2014–15	15994
2015–16	14951
2016–17	12294
2017–18	8374
2018–19	10203
2019–20	12540
2020–21	12722

4) ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (ಜೆ.ಎಸ್.ಎಸ್.ಕೆ) :

ಈ ಯೋಜನೆಯು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪ್ರತಿ ಗರ್ಭಿಣೀ ಸ್ತ್ರೀಯರಿಗೆ ಅಗತ್ಯವಿರುವ ಪ್ರಸೂತಿ ಪೂರ್ವ, ಪ್ರಸೂತಿ ವೇಳೆ ಮತ್ತು ಪ್ರಸೂತಿ ನಂತರದ ಸೇವೆಗಳು ಹಾಗೂ ನವಜಾತ ಶಿಶುವಿಗೆ ಉಸಿತ ಆರೋಗ್ಯ ಸೇವೆಯನ್ನು ನೀಡಲು "ಜನನಿ ಸುರಕ್ಷಾ ಕಾರ್ಯಕ್ರಮ" ಎಂಬ ವಿನೂತನ ಯೋಜನೆಯಲ್ಲು ಸೆಪ್ಟೆಂಬರ್ –2011 ರಿಂದ ಜಾರಿಗೊಳಿಸಲಾಗಿರುತ್ತದೆ. ಈ ಸೌಲಭ್ಯವು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ವರ್ಗದ ಅಂದರೆ (ಬಿ.ಪಿ.ಎಲ್./ ಎ.ಪಿ.ಎಲ್/ಎಸ್.ಸಿ/ಎಸ್.ಟಿ) ದೊರೆಯುತ್ತದೆ.

ವರ್ಷ	ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಫಲಾನುಭವಿಗಳು	
	ಮಹಿಳೆ	ಮಕ್ಕಳು
2014–15	12776	1502
2015–16	14684	5785
2016–17	10413	6369
2017–18	14600	5283
2018–19	13630	6914

5) ಆಶಾ ಕಾರ್ಯಕರ್ತೆಯರು:

ಜಿಲ್ಲೆಯಲ್ಲಿ ಒಟ್ಟು 1496 ಆಶಾ ಕಾರ್ಯಕರ್ತೆಯರು ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ಗ್ರಾಮೀಣ ಪ್ರದೇಶ ಜನರಲ್ಲಿ ಅರಿವು ಮೂಡಿಸಿ ಆರೋಗ್ಯ ಶಿಕ್ಷಣ ನೀಡುವುದು ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ ಮತ್ತು ಎಲ್ಲಾ ಆರೋಗ್ಯ ಕಾರ್ಯಕ್ರಮಗಳನ್ನು ಗ್ರಾಮ ಮಟ್ಟದಲ್ಲಿ ತ್ವರಿತವಾಗಿ ಅನುಷ್ಠಾನಗೊಳಿಸುವುದು.

6) ಡೆಂಗ್ಯೂ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳು:

ಎಲ್ಲಾ ಶಾಲೆಗಳಲ್ಲಿ ಡೆಂಗ್ಯೂ ನಿಯಂತ್ರಣ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಪತ್ರ ಮುಖಾಂತರ ತಿಳಿಸಲಾಗಿದೆ.

- ಆಕಾಶವಾಣಿಯಲ್ಲಿ ಪ್ರತಿದಿನ ಡೆಂಗ್ಯೂ ನಿಯಂತ್ರಣ ಬಗ್ಗೆ ಪ್ರಚಾರ ಕೈಗೊಳ್ಳಲಾಗುತ್ತಿದೆ.
- ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಡೆಂಗ್ಯೂ ನಿಯಂತ್ರಣ ಸಲುವಾಗಿ ಅಗತ್ಯ ಮಾರ್ಗದರ್ಶನ ನೀಡಲಾಗಿದೆ.
- ಎಲ್ಲಾ ಶಾಲೆಗಳಲ್ಲಿ ಡೆಂಗ್ಯೂ ನಿಯಂತ್ರಣ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಪತ್ರ ಮುಖಾಂತರ ತಿಳಿಸಲಾಗಿದೆ.
- ಎಲ್ಲಾ ಧಾರ್ಮಿಕ ಕೇಂದ್ರಗಳಲ್ಲೂ ನಿಯಂತ್ರಣ ಕ್ರಮಗಳ ಬಗ್ಗೆ ಮಾಹಿತಿ ನೀಡಲು ತಿಳಿಸುವಂತೆ ಆಯಾ ತಾಲ್ಲೂಕಿನ ಮುಜರಾಯಿ ಇಲಾಖೆ ವತಿಯಿಂದ ಕ್ರಮ ಕೈಗೊಳ್ಳುವಂತೆ ತಿಳಿಸಲು ಆಯಾ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ತಿಳಿಸಲಾಗಿದೆ.
- ಎಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಡೆಂಗ್ಯೂ ನಿಯಂತ್ರಣ ಕ್ರಮ ಕೈಗೊಳ್ಳುವ ಸಲುವಾಸಗಿ ಮಾರ್ಗಸೂಚಿಗಳನ್ನು ತಯಾರಿಸಿ ಅವುಗಳನ್ನು ಎಲ್ಲಾ ಗ್ರಾಮ ಪಂಚಾಯತ್‌ನವರಿಗೆ ಕಳುಹಿಸುವಂತೆ ಮಾನ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಮಾಡಲಾಗಿದೆ.
- ಆಯಾ ತಾಲ್ಲೂಕು ಮಟ್ಟಗಳಲ್ಲೂ ಮಾಧ್ಯಮ ಪ್ರತಿನಿಧಿಯವರಿಗೆ ಡೆಂಗ್ಯೂ ನಿಯಂತ್ರಣ ಬಗ್ಗೆ ಪ್ರಚಾರ ಮಾಡಲು ಶಿಬಿರ ನಡೆಸಲಾಗಿದೆ.
- ಶಂಕಿತ ಡೆಂಗ್ಯೂ ಮರಣ ಸಂಭವಿಸಿದೆ. ತನಿಖೆಗಾಗಿ ತನಿಖಾದಳ ರಚಿಸಲಾಗಿದೆ.
- ಅಲ್ಲಿಲ್ಲಿ ಮಾಹಿತಿ ಶಿಬಿರ ಕೈಗೊಳ್ಳಲಾಗುತ್ತದೆ. ಸ್ವಯಂ ಸೇವಾ ಸಂಘದ ವತಿಯಿಂದ ಶ್ರೀನಗರ ಮತ್ತು ಪೆನ್ಷನ್ ಮೊಹಲ್ಲಾದಲ್ಲಿ ಇತ್ಯಾದಿ.
- ಎಲ್ಲಾ ಪ್ರಾ.ಆ.ಕೇಂದ್ರ/ಸ.ಆ.ಕೇಂದ್ರ/ಸಾ.ಆ.ಮಟ್ಟದಲ್ಲಿ ಅಗತ್ಯ ಔಷಧಿಗಳ ದಾಸ್ತಾನು ಲಭ್ಯವಿರುತ್ತದೆ.

7) ಗಂಭೀರ ಸಮಸ್ಯೆಗಳು :

ಹಾಸನ ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಈ ಕೆಳಕಂಡ ಅಗತ್ಯ ಹುದ್ದೆಗಳು ಖಾಲಿ ಇದ್ದು, ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಇರುವ ಆಸ್ಪತ್ರೆಗಳಲ್ಲಿ ಈ ಕೆಳಕಂಡ ಹುದ್ದೆಗಳು ಭರ್ತಿ ಮಾಡಬೇಕಾಗಿರುತ್ತದೆ.

ಕ್ರ.ಸಂ	ಪದನಾಮ	ಮಂಜೂರು	ಭರ್ತಿ	ಖಾಲಿ
1.	ಸಾಮಾನ್ಯ ಕರ್ತವ್ಯ ನಿರತ ವೈದ್ಯಾಧಿಕಾರಿಗಳು	135	134	1
2.	ತಜ್ಞ ವೈದ್ಯರು	170	147	23
3.	ಗ್ರೂಪ್ ಡಿ ನೌಕರರು	844	227	617
4.	ವಾಹನ ಚಾಲಕರು	75	33	42

ಕುಟುಂಬ ಕಲ್ಯಾಣ ಕಾರ್ಯಕ್ರಮದ ಸಾಧನೆ ಖರ್ಚಿನ ವಿವರ: 2020–21

ಕುಟುಂಬ ಕಲ್ಯಾಣ ಕಾರ್ಯಕ್ರಮವು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಜನಸಂಖ್ಯೆಯನ್ನು ನಿಯಂತ್ರಿಸುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ಇದರಲ್ಲಿ 2 ವಿಧಾನಗಳಿದ್ದು, 1) ಶಾಶ್ವತ ವಿಧಾನ– ಶಸ್ತ್ರಚಿಕಿತ್ಸೆ ಹಾಗೂ 2) ತಾತ್ಕಾಲಿಕ ವಿಧಾನಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸ್ತ್ರೀ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಬಿಪಿಎಲ್ ಫಲಾನುಭವಿಗಳಿಗೆ ರೂ.1000/– ಮತ್ತು ಎಪಿಎಲ್ ಫಲಾನುಭವಿಗಳಿಗೆ 650/– ರೂಗಳು ಹಾಗೂ ಪುರುಷರ ವ್ಯಾಸೆಕ್ಟೆಮಿ ಶಸ್ತ್ರಚಿಕಿತ್ಸೆಗೆ 1500/– ಗಳನ್ನು ನಿಗದಿಪಡಿಸಿದೆ.

ಕಾರ್ಯಕ್ರಮ	2014–15 ಸಾಧನೆ	2015–16 ಸಾಧನೆ	2016–17 ಸಾಧನೆ	2017–18 ಸಾಧನೆ	2018–19 ಸಾಧನೆ	2019–20 ಸಾಧನೆ	2020–21 ಸಾಧನೆ
ವ್ಯಾಸೆಕ್ಟಮಿ ಶಸ್ತ್ರ ಚಿಕಿತ್ಸೆ	18	73	34	30	25	25	15
ಉದರದರ್ಶಕ ಶಸ್ತ್ರಚಿಕಿತ್ಸೆ + ಟ್ಯೂಬೆಕ್ಟಮಿ ಶಸ್ತ್ರಚಿಕಿತ್ಸೆ	7318	7455	5709	7239	6306	6061	5272
ಕಾಪರ್ ಟಿ ಅಳವಡಿಕೆ	5065	5649	3841	5196	5746	5423	5016
ನಿರೋಧ್ ವಿತರಣೆ	6691	6858	6796	6226	5666	5814	5613
ನುಂಗುವ ಗುಳಿಗೆ ವಿತರಣೆ	3324	3488	3889	3626	3659	3491	3680

ಲಸಿಕಾ ಕಾರ್ಯಕ್ರಮ 2018–19 (ಮಕ್ಕಳ ಆರೋಗ್ಯ)

	ಲಸಿಕೆಗಳು	2014–15 ಸಾಧನೆ	2015–16 ಸಾಧನೆ	2016–17 ಸಾಧನೆ	2017–18 ಸಾಧನೆ	2018–19 ಸಾಧನೆ	2019–20 ಸಾಧನೆ	2020–21 ಸಾಧನೆ
1	ಬಿ.ಸಿ.ಜಿ.	22977	24315	21154	21416	21199	20036	21055
2.	ಓ.ಪಿ.ವಿ(ಬರ್ತ್ ಡೋಸ್)	21806	23738	19848	21102	19956	19851	20146
3.	ಹೆಪಟೈಟಿಸ್–ಬಿ	20716	23394	20199	20411	19651	18513	19919
4.	ಪೆಂಟಾವೇಲೆಂಟ್ –1	26076	25433	25390	24785	24228	23914	24102
5.	ಪೆಂಟಾವೇಲೆಂಟ್ –2	26914	25589	25737	24536	24113	23134	23475
6.	ಪೆಂಟಾವೇಲೆಂಟ್ –3	25999	25577	25321	24079	23543	22893	23345
7.	ಓ.ಪಿ.ವಿ –1	26109	25266	25257	24736	24037	23705	24105
8.	ಓ.ಪಿ.ವಿ –2	25946	25472	25537	24515	23928	23007	23341
9.	ಓ.ಪಿ.ವಿ –3	26074	25407	25175	24049	23350	22701	23161
10.	ಎಂ.ಆರ್ – 1 ಡೋಸ್	24729	24284	21780	23905	22451	21751	21877
11.	ಎಂ.ಆರ್– 2 ಡೋಸ್	22585	22594	20613	21109	20293	20418	20551
12.	ಡಿ.ಪಿ.ಟಿಬೂಸ್ಟರ್11/2 ವರ್ಷ	23120	22538	21490	21982	20889	20418	20666
13.	ಓ.ಪಿ.ವಿ ಬೂಸ್ಟರ್	23121	22427	21492	22003	21007	20418	20542
14.	ಡಿ..ಪಿ.ಟಿ ಬೂಸ್ಟರ್5 ವರ್ಷ	19780	20426	19391	8295	14004	22762	21248
15.	ಟಿ.ಟಿ. 10 ವರ್ಷ	19731	19951	19205	17651	17950	31140	19677
16.	ಟಿ.ಟಿ. 16 ವರ್ಷ	22513	21484	20306	20919	17950	27751	17967

ವರ್ಷ	ವಿಟಮಿನ್ ಎ ಅನ್ನಾಂಗ ದ್ರಾವಣ ಫಲಾನುಭವಿಗಳು
2014–15	23016
2015–16	15833
2016–17	18315
2017–18	23092
2018–19	12006
2019–20	17980
2020–21	18896

2020–21 ರಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಶಾಲಾ ಮಕ್ಕಳ ಆರೋಗ್ಯ ತಪಾಸಣೆಯಲ್ಲಿ 6 ವಾರದಿಂದ 6 ವರ್ಷದೊಳಗಿನ ಒಟ್ಟು ಮಕ್ಕಳು 70145 ಹಾಗೂ 6 ವರ್ಷದಿಂದ 18 ವರ್ಷದೊಳಗಿನ ಒಟ್ಟು ಮಕ್ಕಳು 141896 ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ನಡೆಸಲಾಗಿದೆ.

ರಾಷ್ಟ್ರೀಯ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ:

ಉದ್ದೇಶ: ತಾಯಿ ಮರಣ ಮತ್ತು ಶಿಶು ಮರಣ ಪ್ರಮಾಣ ಕಡಿಮೆ ಮಾಡುವುದು.
ಸಾಂಸ್ಥಿಕ ಹೆರಿಗೆಯನ್ನು ಪ್ರೋತ್ಸಾಹಿಸಿ, ಆಸ್ಪತ್ರೆಗಳಲ್ಲೇ ಹೆರಿಗೆ ಮಾಡಿಸುವುದು.
ಹದಿಹರಯದವರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು.
ಶಿಶುಗಳಿಗೆ, ಮಕ್ಕಳಿಗೆ ಮತ್ತು ತಾಯಂದಿರಿಗೆ 100 ರಷ್ಟು ಲಸಿಕೆ ನೀಡುವುದು.

ಸೌಲಭ್ಯಗಳು ಗರ್ಭಿಣಿಯರಿಗೆ : ಗರ್ಭಿಣಿ ದಾಖಲಾತಿ, ಗರ್ಭಿಣಿ ಎಂದು ತಿಳಿದ ತಕ್ಷಣ ಉಪಕೇಂದ್ರ ಮಟ್ಟದಲ್ಲಿ ದಾಖಲಾತಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಪ್ರಾ.ಆ.ಕೇಂದ್ರ/ ಸ.ಆ.ಕೇಂದ್ರದ ಮಟ್ಟದಲ್ಲಿ ದೊರೆಯುವಂತೆ ಮಾಡುವುದು.

ತೊಡಕಿನ ಗರ್ಭಿಣಿಯರನ್ನು ಪತ್ತೆ ಮಾಡಿ ಚಿಕಿತ್ಸೆ, ಸಲಹೆ ಸೂಚನೆಗಳನ್ನು ನೀಡುವುದು.

ಗರ್ಭಿಣಿಯಿರಿಗೆ ಕಬ್ಬಿಣಾಂಶದ ಮಾತ್ರೆ, ಕ್ಯಾಲ್ಸಿಯಂ ಮಾತ್ರೆ, ಟಿಡಿ ಲಸಿಕೆಗಳನ್ನು ಕೊಡಿಸುವುದು.

ಗರ್ಭಿಣಿಯಿರಿಗೆ Hb % 7 ಕ್ಕಿಂತ ಕಡಿಮೆಯಿದ್ದರೆ ದ್ವಿಗುಣಗೊಳಿಸಿ (360) ಮಾತ್ರೆಗಳನ್ನು ನೀಡಿತಕ್ಕದ್ದು.

ಗರ್ಭಿಣಿಯಿರಿಗೆ ಕನಿಷ್ಠ 4 ಬಾರಿ ವೈದ್ಯಕೀಯ ಪರೀಕ್ಷೆಗೊಳಪಡಿಸಬೇಕು.

ಪ್ರತಿ ಬಾರಿ ತಾಯಂದಿರಿಗೆ ಪೌಷ್ಟಿಕ ಆಹಾರ, ಸ್ವಚ್ಚತೆಯ ಬಗ್ಗೆ ತಿಳಿಸುತ್ತಿರಬೇಕು.

ಸೌಲಭ್ಯಗಳು ಬಾಣಂತಿಯರಿಗೆ: ಮಗು ಜನಿಸಿದ ತಕ್ಷಣ 1/2 ಗಂಟೆಯೊಳಗೆ ತಾಯಿಯ ಎದೆ ಹಾಲುಣಿಸಲು ತಿಳಿಸಿಬೇಕು.

ತಾಯಿಯ ಎದೆ ಹಾಲಿನ ಮಹತ್ವ ತಿಳಿಸಿ, ಮಗುವಿಗೆ 6 ತಿಂಗಳವರೆಗೆ ಎದೆ ಹಾಲುಣಿಸಲು ತಿಳಿಸಿಬೇಕು. 6 ತಿಂಗಳ ನಂತರ ಪೂರಕ ಆಹಾರವನ್ನು ಕೊಡಲು ತಿಳಿಸಬೇಕು.

ಮಕ್ಕಳಿಗೆ ಲಸಿಕೆಯ ಬಗ್ಗೆ: ಮಗು ಹುಟ್ಟಿದ ತಕ್ಷಣ Heptatitis birth dose, BCG, OPV-0 dose Vit-K ಯನ್ನು ನೀಡಬೇಕು.

ಮಗುವಿಗೆ 6 ವಾರಗಳಲ್ಲಿ Pentavalent, OPV,RVV,IPV -1st dose ಯನ್ನು ನೀಡಬೇಕು.

ಮಗುವಿಗೆ 10 ವಾರಗಳಲ್ಲಿ Pentavalent, OPV,RVV -2 nd dose ಯನ್ನು ನೀಡಬೇಕು.

ಮಗುವಿಗೆ 14 ವಾರಗಳಲ್ಲಿ Pentavalent, OPV,RVV– 3rd dose & IPV 2 nd dose ಯನ್ನು ನೀಡಬೇಕು.

ಮಗುವಿಗೆ 9 ರಿಂದ 12 ತಿಂಗಳಲ್ಲಿ MR-1st dose, Vit-A ಯನ್ನು ನೀಡಬೇಕು.

ಮಗುವಿಗೆ 16 ರಿಂದ 24 ತಿಂಗಳಲ್ಲಿ MR-2nd dose,DPT, Polio dose & Vit-A ಯನ್ನು ನೀಡಬೇಕು.

ಮಕ್ಕಳಿಗೆ 5–6 ವರ್ಷಗಳಲ್ಲಿ DPT-2 nd ಯನ್ನು ನೀಡಬೇಕು.

ಮಕ್ಕಳಿಗೆ 10 ಮತ್ತು 16 ವರ್ಷಗಳಲ್ಲಿ Td ಲಸಿಕೆ ಯನ್ನು ನೀಡಬೇಕು.

ಇಲಾಖೆಯಿಂದ ನೀಡಲಾಗುವ ಇತರೆ ಸೌಲಭ್ಯಗಳು:

ಉಚಿತ ಆರೊಗ್ಯ ಸೇವೆ

ಗರ್ಭಿಣಿಯಾರಿಗೆ ಉಚಿತ ತಾಯಿ ಕಾರ್ಡ್ ವಿತರಣೆ

ಬಾಣಂತಿಯರಿಗೆ JSSY ಮತ್ತು JSSK ಸೌಲಭ್ಯಗಳು

ಪ್ರತಿ ತಿಂಗಳ 9ನೇ ತಾರೀಕಿನಲ್ಲಿ ನಡೆಯುವ PMSMA (ಪ್ರಧಾನ ಮಂತ್ರಿ ಮಾತೃತ್ವ ಅಭಿಯಾನ) ಕಾರ್ಯಕ್ರಮದಲ್ಲಿ ಗರ್ಭಿಣಿಯರಿಗೆ ಉಚಿತ ವೈದ್ಯಕೀಯ ಸೌಲಭ್ಯ ನೀಡುವುದು.

ಪ್ರತಿ 6 ತಿಂಗಳಿಗೊಮ್ಮೆ ರಾಷ್ಟ್ರೀಯ ಜಂತುಹುಳು ನಿವರಣ ಕಾರ್ಯಕ್ರಮದಲ್ಲಿ 1 ರಿಂದ 19 ವರ್ಷದ ಒಳಗಿನ ಮಕ್ಕಳಿಗೆ ಜಂತುಹುಳು ನಿವಾರಣ ಮಾತ್ರೆಗಳನ್ನು ನೀಡುವುದು.

ಪ್ರತಿ ವರ್ಷಕೊಮ್ಮೆ 0–5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯ್ ಕಾರ್ಯಕ್ರಮದಲ್ಲಿ ಲಸಿಕೆ ನೀಡುವುದು.

ಅಂತಿಸರ ಭೇದಿ ತಡೆಗಟ್ಟಲು ಓ ಆರ್ ಎಸ್ ಮತ್ತು ಜಿಂಕ್‌ಗಳನ್ನು 0 ಇಂದ 5 ವರ್ಷದ ಮಕ್ಕಳಿಗೆ ನೀಡುವುದು.

ಪ್ರತಿ 6 ತಿಂಗಳಿಗೊಮ್ಮೆ 9 ತಿಂಗಳಿನಿಂದ 5 ವರ್ಷದೊಳಗಿನ ಮಕ್ಕಳಿಗೆ ಎ–ಅನ್ನಾಂಗ ದ್ರಾವಣ ವಿತರಣೆ

****

ಕೈಮಗ್ಗ ಮತ್ತು ಜವಳಿ ಇಲಾಖೆ

2020–21 ನೇ ಸಾಲಿನ ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಹಾಸನ ಕಛೇರಿಯ ವಾರ್ಷಿಕ ವರದಿ

2020–21 ನೇ ಸಾಲಿನ ಜಿಲ್ಲಾ ವಲಯ ಯೋಜನೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒಟ್ಟು ರೂ.5.00 ಲಕ್ಷಗಳ ಗುರಿಯನ್ನು ನಿಗದಿಪಡಿಸಿ, ಬಿಡುಗಡೆ ಮಾಡಲಾಗಿರುತ್ತದೆ. ಬಿಡುಗಡೆಯಾದ ಅನುದಾನದಲ್ಲಿ ಈ ಕೆಳಕಂಡಂತೆ ಯೋಜನೆಗಳ ಅನುಷ್ಠಾನಕ್ಕಾಗಿ ರೂ.5.00 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ ಲೆಕ್ಕ ಶಿರ್ಷಿಕೆ 2851–00–107–0–31

ಕೈಮಗ್ಗಗಳ ಆಧುನೀಕರಣ

ಈ ಯೋಜನೆಯಡಿ ಸಹಕಾರ ಸಂಘಗಳಲ್ಲಿನ ನೇಕಾರರಿಗೆ ತಮ್ಮ ಕೈಮಗ್ಗಗಳಿಗೆ ಬೇಕಾಗುವ ಜಕಾರ್ಡ್, ಥಾಬಿ, ಮತ್ತು ಇತರೆ ಆಧುನೀಕರಣ ಸಲಕರಣೆಗಳನ್ನು/ ಹೊಸ ಮಗ್ಗಗಳನ್ನು ಅಳವಡಿಸಿ ಉತ್ತಮ ಗುಣಮಟ್ಟದ ಹೆಚ್ಚಿನ ಉತ್ಪಾದನೆಯನ್ನು ಕೈಗೊಳ್ಳಲು ಅನುಕೂಲವಾಗುವಂತೆ ಸೌಲಭ್ಯ ಕೇಂದ್ರಗಳಲ್ಲಿ ಸುಧಾರಿತ ಕೈಮಗ್ಗಗಳನ್ನು ಖರೀದಿಸಲು ನೇಕಾರರ ಸಹಕಾರ ಸಂಘಗಳಿಗೆ ಸಹಾಯಧನವನ್ನು ಮಂಜೂರು ಮಾಡಿ ಯೋಜನೆಗಳನ್ನು ಸಹಕಾರ ಸಂಘಗಳ ಮೂಲಕ ಅನುಷ್ಠಾನಗೊಳಿಸಲು ಅನುದಾನ ಬಿಡುಗಡೆ ಮಾಡಲಾಗಿದೆ.

ರೂ. ಲಕ್ಷಗಳಲ್ಲಿ

ಕ್ರ ಸ	ನೇಕಾರರ ಸಹಕಾರ ಸಂಘಗಳ ಹೆಸರು	ಕೈಮಗ್ಗ ಆಧುನೀಕರಣ			ಒಟ್ಟು ಮೊತ್ತ
		ಸಾಮಾನ್ಯ	ಪ.ಜಾತಿ	ಪ.ಪಂಗಡ	
1	ಅರಸೀಕೆರೆ ರೇಷ್ಮೆ ನೇಕಾರರ ಉ&ಮಾ.ಸ.ಸಂಘ ನಿ, ಅಗ್ಗುಂದ ಅರಸೀಕೆರೆ.	25000	25000	25000	75000
2	ಶ್ರೀ ವಿನಾಯಕ ರೇಷ್ಮೆ ನೇಕಾರರ ನೇಕಾರರ ಉ&ಮಾ.ಸ.ಸಂಘ ನಿ,ಕಗ್ಗಲಿಕಾವಲು, ಚನ್ನರಾಯಪಟ್ಟಣ	25000	25000	25000	75000
3	ಶ್ರೀ ರಾಮ ಕೈಮಗ್ಗ ನೇಕಾರರ ಉ&ಮಾ.ಸ.ಸಂಘ ನಿ,ಕೇರಳಾಪುರ, ಅರಕಲಗೂಡು	60000	0	0	60000
4	ಶ್ರೀ ಬನಶಂಕರಿ ರೇಷ್ಮೆ ನೇಕಾರರ ಉ&ಮಾ.ಸ.ಸಂಘ ನಿ,ಗರುಡನಗಿರಿ, ಅರಸೀಕೆರೆ (ತಾ)	50000	0	0	50000
5	ಶ್ರೀ ರಾಮಲಿಂಗ ಚೌಡೇಶ್ವರಿ ನೇಕಾರರ ಉ&ಮಾ.ಸ.ಸಂಘ ನಿ,ಚಿಕ್ಕಹಲ್ಕೂರು, ಅರಸೀಕೆರೆ (ತಾ)	60000	0	0	60000
6	ಶ್ರೀ ದೇವಲ ದಾಸಿಮಯ್ಯ ರೇಷ್ಮೆ ನೇಕಾರರ ಉ&ಮಾ.ಸ.ಸಂಘ ನಿ,ಜಾವಗಲ್, ಅರಸೀಕೆರೆ (ತಾ)	60000	0	0	60000
7	ನೀಲಕಂಠೇಶ್ವರ ನೇಕಾರ ಉ&ಮಾ.ಸ.ಸಂಘ ನಿ,ಚನ್ನರಾಯಪಟ್ಟಣ	60000	0	0	60000
8	ನೀಲಕಂಠೇಶ್ವರ ನೇಕಾರ ಕೈಮಗ್ಗ ನೇಕಾರರ ಸಹಕಾರ ಸಂಘ ನಿ, ಅತ್ತಿಚೌಡನಹಳ್ಳಿ	60000	0	0	60000
	ಒಟ್ಟು	**400000**	**50000**	**50000**	**500000**

ಯೋಜನೇತರ ವೆಚ್ಚ ಲೆಕ್ಕ ಶಿರ್ಷಿಕೆ 2851–00–107–0–29

2020–21 ನೆ ಸಾಲಿನ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ವೇತನ ಭತ್ಯೆ ಗಾಗಿ ಒಟ್ಟು 15.96 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು, ಅದರಲ್ಲಿ ರೂ.14.42 ಲಕ್ಷಗಳು ಬಿಡುಗಡೆಯಾಗಿದ್ದು, ಅದರಲ್ಲಿ ಮಾರ್ಚ್–2021 ರ ಅಂತ್ಯಕ್ಕೆ ಮೊತ್ತ ರೂ.14.35 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ, ಕಛೇರಿ ವೆಚ್ಚಗಳಿಗಾಗಿ 5.35 ಲಕ್ಷಗಳು ಬಿಡುಗಡೆಯಾಗಿದ್ದು, ಅದರಲ್ಲಿ ಮಾರ್ಚ್ ಅಂತ್ಯಕ್ಕೆ ರೂ.5.27 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಹಾಗೂ ಹೋರಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ ನೌಕರರ ವೇತನಕ್ಕಾಗಿ ರೂ.2.17 ಲಕ್ಷ ಬಿಡುಗಡೆಯಾಗಿದ್ದು, ಅದರಲ್ಲಿ ಮಾರ್ಚ್ ಅಂತ್ಯಕ್ಕೆ ರೂ.2.14 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ರಾಜ್ಯ ವಲಯ ಮತ್ತು ಯೋಜನೆಗಳಲ್ಲಿ ಸಾಧಿಸಿದ ಪ್ರಗತಿ ವರದಿ

- ನೂತನ ಜವಳಿ ನೀತಿ ಯೋಜನೆಯಡಿ ಒಟ್ಟು 175 ನಿರುದ್ಯೋಗ ಯುವಕ ಯುವತಿಯರಿಗೆ ಸೀವಿಂಗ್ ಮಿಷನ್ ಆಪರೇಟರ್ ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಲಾಗಿದೆ.
- ನಿಧಿ ಯೋಜನೆಯಡಿ ಒಟ್ಟು21 ಫಲಾನುಭವಿಗಳಿಗೆ ಘಟಕ ವೆಚ್ಚ ರೂ.30,000/–ಗಳಲ್ಲಿ ಶೇ.50 ಅಥವಾ ಗರಿಷ್ಟ ರೂ.15,000/–ಗಳಲ್ಲಿ ಕೈಗಾರಿಕಾ ಹೊಲಿಗೆ ಯಂತ್ರಗಳನ್ನು ಖರೀದಿಸಲು ಸಹಾಯಧನ ಒದಗಿಸಲಾಗಿದೆ.

*****

ಕೈಗಾರಿಕೆ ಇಲಾಖೆ

1) ಕೈಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ವಿಭಾಗ, ಹಾಸನ ಕಛೇರಿಯಿಂದ ಹಾಸನ ಜಿಲ್ಲೆಯಲ್ಲಿಯ ವಿವಿಧ ವೃತ್ತಿಯಲ್ಲಿನ ಕುಶಲಕರ್ಮಿಗಳು ಹಾಗೂ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುತ್ತದೆ. ದಸರಾ ವಸ್ತು ಪ್ರದರ್ಶನ ಹಾಸನ ಜಿಲ್ಲಾ ಪಂಚಾಯತಿಯ ಸ್ಥಬ್ದಚಿತ್ರ ಹಾಗೂ ತಾಲ್ಲೂಕು ಮಟ್ಟದಲ್ಲಿ ವಸ್ತು ಪ್ರದರ್ಶನ ನಡೆಸುತ್ತಿದ್ದು, 2020–21ನೇ ಸಾಲಿನಲ್ಲಿ ಕೋವಿಡ್ ಇರುವುದರಿಂದ ಯೋಜನೆಯನ್ನು ಸರ್ಕಾರದ ಆದೇಶದಂತೆ ಕೈ ಬಿಡಲಾಯಿತು.

2) ಹಾಸನ ಜಿಲ್ಲೆಯಲ್ಲಿನ 40 ಜನ ಗ್ರಾಮೀಣ ಬಡಗಿ ಕುಶಲಕರ್ಮಿಗಳಿಗೆ ಹಾಗೂ 39 ಜನ ಗಾರೆಕೆಲಸದವರಿಗೆ ಸುಧಾರಿತ ಉಪಕರಣಗಳನ್ನು ವಿತರಿಸಿ ಕುಶಲಕರ್ಮಿಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಯಿತು.

3) ಹಾಸನ ಜಿಲ್ಲೆಯ 08 ತಾಲ್ಲೂಕು ಕೇಂದ್ರಗಳಲ್ಲಿ ಗ್ರಾಮಿಣ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಾಡಲು ಹಾಗೂ ಗ್ರಾಮಿಣ ಕೈಗಾರಿಕೆಗಳ ಮಹತ್ವ ಕುರಿತು ಮಾಹಿತಿ ನೀಡಲು ಕೋವಿಡ್ ಇರುವುದರಿಂದ ಕಾರ್ಯಕ್ರಮವನ್ನು ಸರ್ಕಾರದ ಆದೇಶದಂತೆ ಕೈಬಿಡಲಾಯಿತು.

4) ಜಿಲ್ಲಾ ಜೌದ್ಯಮಿಕ ಕೇಂದ್ರ ಯೋಜನೆ ಅಡಿಯಲ್ಲಿ ಜಿಲ್ಲೆಯ 08 ತಾಲ್ಲೂಕು ಒಟ್ಟು 251 ಜನ ಗ್ರಾಮೀಣ ನಿರುದ್ಯೋಗಿ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ನೀಡಿ ಸ್ವಯಂ ಉದ್ಯೋಗಿಗಳಾಗಲು ಯೋಜನೆ ಅನುಷ್ಠಾನಗೊಳಿಸಲಾಯಿತು.

2020–21ನೇ ಸಾಲಿನಲ್ಲಿ ಕೈಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಹಾಸನಮೂಲಕ ವಿವಿಧಯೋಜನೆಯಡಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳ ಸಂಕ್ಷೀಪ್ತ ವಿವರ.

(ರೂ ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	2020–21ನೇ ಸಾಲಿನ ನಿಗಧಿತಗುರಿ	2020–21ನೇ ಸಾಧನೆ	ಸಂಕ್ಷಿಪ್ತ ವಿವರ
1	ಜಿಲ್ಲಾಜೌದ್ಯಮಿಕ ಕೇಂದ್ರಗಳು 2851–00–107–0–27	15.00	14.95	ಗ್ರಾಮಾಂತರ ಪ್ರದೇಶದಲ್ಲಿ ಹೊಲಿಗೆ ವೃತ್ತಿಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಹೊಲಿಗೆ ಯಂತ್ರಗಳನ್ನು 251 ಫಲಾನುಭವಿಗಳಿಗೆ ನೀಡಿಅವರಆರ್ಥಿಕ ಮಟ್ಟವನ್ನು ಸುಧಾರಿಸಲು ಕ್ರಮಕೈಗೊಳ್ಳಲಾಗಿದೆ.
2	ಸುಧಾರಿತ ಉಪಕರಣಗಳ ವಿತರಣೆ 2851–00–107–0–32	7.20	5.14	ಹಾಸನ ಜಿಲ್ಲೆಯ40ಜನಗ್ರಾಮೀಣ ಬಡಗಿ ಕುಶಲಕರ್ಮಿಗಳಿಗೆ ಹಾಗೂ 39ಜನಗಾರೆಕೆಲಸದವರಿಗೆ ಸುಧಾರಿತ ಉಪಕರಣಗಳನ್ನು ವಿತರಿಸಿ ಕುಶಲಕರ್ಮಿಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲುಕ್ರಮ ಕೈಗೊಳ್ಳಲಾಯಿತು.
3	ವಿಚಾರಣಾಗೊಷ್ಠಿ ವಸ್ತು ಪ್ರದರ್ಶನ ಮತ್ತು ಮೈಸೂರುದಸರಾ ವಸ್ತು ಪ್ರದರ್ಶನ 2851–00–107–0–34	6.00	–	ಕೋವಿಡ್ಇರುವುದರಿಂದ ಈ ಯೋಜನೆಯನ್ನು ಸರ್ಕಾರಿಆದೇಶದಂತೆಕೈಬಿಡಲಾಯಿತು.
	ಒಟ್ಟು ರೂ	28.20	20.9	ಶೇಕಡ 100% ರಗುರಿ ಸಾದಿಸಲಾಗಿದೆ

ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ

ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ಹಾಗೂ ಜಿಲ್ಲಾ ಸಾಕ್ಷರತಾ ಸಮಿತಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಡನೆ ಅನುಷ್ಠಾನಗೊಳಿಸಿರುವ ಕಾರ್ಯಕ್ರಮ ಈ ಕೆಳಗಿನಂತಿದೆ.

ಮೂಲ ಸಾಕ್ಷರತಾ ಕಾರ್ಯಕ್ರಮ:

2020–21ನೇ ಸಾಲಿನಲ್ಲಿ ಲಿಂಕ್‌ಡಾಕ್ಯುಮೆಂಟ್‌ನಲ್ಲಿ ಮೂಲಸಾಕ್ಷರತಾ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಭೌತಿಕ 1000 ಜನರ ಗುರಿ ನಿಗಧಿಪಡಿಸಲಾಯಿತು. ಆರ್ಥಿಕ 3.30 ಲಕ್ಷ. ಈ ಕಾರ್ಯಕ್ರಮ ಅನುಷ್ಠಾನಕ್ಕೆ ಸ್ವಯಂ ಸೇವಾ ಸಂಸ್ಥೆಯವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಎನ್.ಜಿ.ಓ ರವರು, ಕಡಿಮೆ ಸಾಕ್ಷರತೆ ಹೊಂದಿರುವ ತಾಲ್ಲೂಕು ಆದ ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ ಮತ್ತು ಕರಗುಂದ ಗ್ರಾಮ ಪಂಚಾಯ್ತಿ, ಹಾಸನ ತಾಲ್ಲೂಕಿನ ಕೋರವಂಗಲ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳ ಮನೆ, ಮನೆ ಸಮೀಕ್ಷೆ ಮಾಡಿ ಒಟ್ಟು 1000 ಜನ ಅನಕ್ಷರಸ್ಥರನ್ನು ಮತ್ತು ಇವರಿಗೆ ಬೋಧಿಸಲು 87 ಜನ ಸ್ವಯಂ ಸೇವಕರನ್ನು ಗುರುತಿಸಿರುತ್ತಾರೆ. 2020–21ನೇ ಸಾಲಿನಲ್ಲಿ ಕೊರೋನ ಇದ್ದುದರಿಂದ ಕಾರ್ಯಕ್ರಮವು ಸ್ಥಗಿತವಾಗಿದೆ.

ಸಿಬ್ಬಂದಿ ವಿವರ

ಲೆಕ್ಕ ಶೀರ್ಷಿಕೆ 2202–00–103–0–36 (ಯೋಜನೇತರ)

ಕ್ರ.ಸಂ	ಹುದ್ದೆ	ಸಂಖ್ಯೆ	ಕೆಲಸ ನಿರ್ವಹಿಸಿರುವವರು	ಷರಾ
1	ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು (ಪ್ರಭಾರ)	01 02	ಶ್ರೀ ಚನ್ನಪ್ಪಗೌಡ ಶ್ರೀ ಲಕ್ಷ್ಮಣ್ ಎಂ.ಬಳೂಟಗಿ	05–11–2018 ರಿಂದ 02–06–2020 02–06–2020 ರಿಂದ 31–03–2021
2	ಕಾರ್ಯಕ್ರಮ ಸಹಾಯಕರು	01 02	ಶ್ರೀ ಬಸವರಾಜು ಶ್ರೀ ಪ್ರದೀಪ್ ಬಿ.ಎಸ್	22–07–2020 ರಿಂದ 14–11–2020 03–11–2020 ರಿಂದ 31–03–2021
3	ದ್ವಿತೀಯ ದರ್ಜೆ ಸಹಾಯಕರು	01	ಹುದ್ದೆ ಖಾಲಿ ಇರುತ್ತದೆ	–
4	'ಡಿ' ಗುಂಪಿನ ನೌಕರ	01	ಹುದ್ದೆ ಖಾಲಿ ಇರುತ್ತದೆ	ಹೊರಗುತ್ತಿಗೆ ಆಧಾರದ ಮೇಲೆ 'ಡಿ' ಗುಂಪಿನ ನೌಕರರನ್ನು ಗೊತ್ತುಪಡಿಸಿಕೊಳ್ಳಲಾಗಿದೆ

ಗುರಿ ಸಾಧನೆ

		ಭೌತಿಕ		ಆರ್ಥಿಕ		ಷರಾ
		ಗುರಿ	ಸಾಧನೆ	ಗುರಿ	ಸಾಧನೆ	
ವಿವರ ಕಛೇರಿ ವೆಚ್ಚ	ಲೆಕ್ಕ ಶೀರ್ಷಿಕೆ 2202–00–103–0–36 ಓ.ಕ ಯೋಜನೇತರ	04	00	2.45	154919	
(ಜನಶಿಕ್ಷಣ ನಿಲಯ)	2202–00–104–0–37 ಕ ಯೋಜನೆ	01	01	11.04	656822	

****

ಸಾರ್ವಜನಿಕ ಶಿಕ್ಷಣ ಇಲಾಖೆ

ಶಿಕ್ಷಣವು ಮೂಲಭೂತ ಹಕ್ಕಾಗಿದ್ದು 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಸಹ ಉಚಿತ ಮತ್ತು ಕಡ್ಡಾಯವಾಗಿ ಶಿಕ್ಷಣ ಕೊಡುವುದು ಸರ್ಕಾರದ ಮತ್ತು ಸಾರ್ವಜನಿಕರ ಗುರಿಯಾಗಿದೆ. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಗುರಿಯನ್ನು ತಲುಪುವ ಉದ್ದೇಶ ಹೊಂದಲಾಗಿದೆ. ಈ ದಿಸೆಯಲ್ಲಿ ಹಾಸನ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಕೊಡ ಮುಂದಾಗಿದೆ ಮತ್ತು ಈ ಕೆಳಕಂಡ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

01. **<u>ಜಿಲ್ಲೆಯಲ್ಲಿರುವ ಶಾಲೆಗಳ ಮಾಹಿತಿ ಬಗ್ಗೆ :–</u>**

01. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು 1256.
02. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು 971.

ಒಟ್ಟು 2227 ಸರ್ಕಾರಿ ಪ್ರಾಥಮಿಕ ಶಾಲೆಗಳು.

03. ಸರ್ಕಾರಿ ಪ್ರೌಡ ಶಾಲೆಗಳು 241.
04. ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳು 49.
05. ಖಾಸಗಿ ಅನುದಾನಿತ ಪ್ರೌಢ ಶಾಲೆಗಳು 129.
06. ಖಾಸಗಿ ಅನುದಾನ ರಹಿತ ಪ್ರಾಥಮಿಕ ಶಾಲೆಗಳು 293.
07. ಖಾಸಗಿ ಅನುದಾನ ರಹಿತ ಪ್ರೌಢ ಶಾಲೆಗಳು 153, ಕಾರ್ಯ ನಿರ್ವಹಿಸುತ್ತಿವೆ.

02. <u>ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು, ಶಿಕ್ಷಕರು ಹಾಗೂ ಸಿಬ್ಬಂದಿಗಳ ವಿವರ :–</u>

1.ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ---------- 5656.
2.ಪ್ರೌಡಶಾಲಾ ಶಿಕ್ಷಕರ ಸಂಖ್ಯೆ ---------- 2350.
3.ಖಾಸಗಿ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ---------- 237.
4.ಖಾಸಗಿ ಅನುದಾನಿತ ಪ್ರೌಡಶಾಲಾ ಶಿಕ್ಷಕರ ಸಂಖ್ಯೆ ---------- 1218.
5.ಸರ್ಕಾರಿ ಪೂರ್ವ ಪ್ರಾಥಮಿಕ ಶಾಲಾ ಮಾತೆಯರು & ಆಯಾ ----- 34.
6.ಉಪನಿರ್ದೇಶಕರ ಕಛೇರಿ ---------- 38.
7.ಕ್ಷೇತ್ರ ಶಿಕ್ಷಣಾದಿಕಾರಿಗಳ ಕಛೇರಿ ---------- 144.

ಈ ಮೇಲಿನ ಅಧಿಕಾರಿಗಳ ಸಿಬ್ಬಂದಿ ವರ್ಗ ಹಾಗೂ ಶಿಕ್ಷಕರಿಗೆ ವೇತನ, ಶಾಲಾ ಕೊಠಡಿಗಳ ನಿರ್ಮಾಣ, ವಿದ್ಯಾರ್ಥಿಗಳ ಶುಲ್ಕ ಮರುಪಾವತಿ, ಸರ್ವ ಶಿಕ್ಷಣ ಅಭಿಯಾನ, ಹಾಗು ಅಕ್ಷರ ದಾಸೋಹ ಕಾರ್ಯಕ್ರಮಕ್ಕಾಗಿ 2020–21 ನೇ ಸಾಲಿನ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ಜಿಲ್ಲಾ ವಲಯ & ತಾಲ್ಲೂಕು ವಲಯ ಯೋಜನೇತರ ಅಡಿಯಲ್ಲಿ ಸರ್ಕಾರದಿಂದ ನಿಗದಿಯಾದ ಅನುದಾನವನ್ನು ಹಂತ ಹಂತವಾಗಿ ಜಿಲ್ಲಾ ಪಂಚಾಯತ್‌ನಿಂದ ತಾಲ್ಲೂಕುವಾರು ಬಿಡುಗಡೆ ಮಾಡಲಾಗಿದೆ.

03. <u>ಸರ್ಕಾರಿ ಪ್ರೌಢ ಶಾಲಾ ಕೊಠಡಿ ದುರಸ್ತಿ ಹಾಗೂ ಮರು ನಿರ್ಮಾಣ :-</u>

ರಾಜ್ಯವಲಯ ಯೋಜನೆಯಡಿಯಲ್ಲಿ 2021-22ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ದುರಸ್ಥಿ ಹಾಗೂ ಮರು ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿರುತ್ತದೆ.

2020-21 ನೇ ಸಾಲಿಗೆ ವಿವಿಧ ಲೆಕ್ಕ ಶೀರ್ಷಿಕೆಯಡಿ ಕಾಮಗಾರಿಗಳಿಗೆ ನಿಗಧಿಯಾಗಿ ಬಿಡುಗಡೆಯಾದ ಅನುದಾನಗಳ ಹಾಗೂ ಎಜೆನ್ಸಿ ವಿವರ.

ಕ್ರ.ಸಂ	ವಿಷಯ	ಭೌತಿಕ (ಕೊಠಡಿಗಳ ಸಂಖ್ಯೆ)	ನಿಗಧಿಯಾದ ಅನುದಾನ ಮೊತ್ತ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	ಎಜೆನ್ಸಿ
1	2020-21ನೇ ಸಾಲಿಗೆ ಮುಂದುವರೆದ ಯೋಜನಾ ಕಾರ್ಯಕ್ರಮಗಳಡಿ ಮೂಲಭೂತ ಸೌಲಭ್ಯ ಒದಗಿಸಲು ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ಮುರುನಿರ್ಮಾಣ ಹಾಗೂ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ (4202-01-202-1-05-386)	12	185.75	92.88	ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ/ಚನ್ನರಾಯಪಟ್ಟಣ
2	2020-21ನೇ ಸಾಲಿಗೆ ಮುಂದುವರೆದ ಯೋಜನಾ ಕಾರ್ಯಕ್ರಮಗಳಡಿ ಮೂಲಭೂತ ಸೌಲಭ್ಯ ಒದಗಿಸಲು ಶಾಲೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ಮುರುನಿರ್ಮಾಣ ಹಾಗೂ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ (4202-01-201-1-04-059)	40	423	211.5	ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ/ಚನ್ನರಾಯಪಟ್ಟಣ
3	2020-21 ನೇ ಸಾಲಿನಲ್ಲಿ ಶಾಲಾ ಶೌಚಾಲಯ ನಿರ್ಮಾಣ. ಬಿಸಿಯೂಟ ಅಡುಗೆ ಕೋಣೆ ನಿರ್ಮಾಣ, ಮಳೆನೀರು ಕೊಯ್ಲು ರಚನೆ, ಶಾಲಾ ಕಾಂಪೌಂಡ್ ನಿರ್ಮಾಣ, ಶಾಲಾ ಆಟದ ಮೈದಾನ ನಿರ್ಮಾಣ ಮತ್ತು ಪೌಷ್ಟಿಕ ತೋಟ ಅಭಿವೃದ್ದಿ ಚಟುವಟಿಕೆಗಳ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುದಾನವನ್ನು ಒಗ್ಗೂಡಿಸುವಿಕೆ ಮೂಲಕ ಅನುಷ್ಠಾನಗೊಳಿಸಲು ಬಿಡುಗಡೆಯಾಗಿರುವ ಅನುದಾನದ ವಿವರ [2202~01~053~0~01~200,/ 2202~02~053 ~0~01~059, /2202~02~053~0~01~422,/ 2202~02~053 ~0~01~423]	129	149.31	149.31	ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ/ಚನ್ನರಾಯಪಟ್ಟಣ
	ಒಟ್ಟು	**181**	**758.06**	**453.69**	

02. <u>ಮಳೆಹಾನಿ:-</u>

2020-21 ನೇ ಸಾಲಿನ ಆಗಸ್ಟ್ 2020 ಮತ್ತು ಸೆಪ್ಟಂಬರ್ 2020ನೇ ಮಾಹೆಯಲ್ಲಿ ಬಿದ್ದ ಮಳೆಯಿಂದ ಹಾನಿಯಾಗಿ ದುರಸ್ಥಿಯಾಗಬೇಕಾದ ಕೊಠಡಿಗಳಿಗೆ ಟಾಸ್ಕ್‌ಫೋರ್ಸ್ ಸಮಿತಿ ಅನುಮೋದನೆ ಪ್ರಕಾರ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ/ಚನ್ನರಾಯಪಟ್ಟಣ ಇವರನ್ನು ಕಾಮಗಾರಿ ಎಜೆನ್ಸಿಯವರನ್ನಾಗಿ ನೇಮಿಸಿರುತ್ತಾರೆ, ಒಟ್ಟು 394 ಶಾಲೆಗಳ 639 ಕೊಠಡಿಗಳ ಮರು ನಿರ್ಮಾಣ ಕಾಮಗಾರಿಗೆ ಒಟ್ಟು ರೂ.1205.00ಲಕ್ಷ ಅನುದಾನ ನಿಗದಿಯಾಗಿ ಉಪನಿರ್ದೇಶಕರು ಸಾ.ಶಿ.ಇ ಹಾಸನ ಇವರ ಖಾತೆಗೆ ಶೇಕಡಾ 70% ರ ಅನುಪಾತದಂತೆ 843.50 ಲಕ್ಷ ರೂಗಳನ್ನು ಬಿಡುಗಡೆಗೊಳಿದ್ದು , ಸದರಿ ಅನುದಾನವನ್ನು ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ/ಚನ್ನರಾಯಪಟ್ಟಣ ಇವರಿಗೆ ಚೆಕ್ ಮೂಲಕ ಹಣ ಜಮಾ ಮಾಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

03. <u>ಪೀಠೋಪಕರಣ ಖರೀದಿ:-</u>

2020-21ನೇ ಸಾಲಿನಲ್ಲಿ ಲಿಂಕ್‌ಡಾಕ್ಯೂಮೆಂಟ್‌ನಲ್ಲಿ ಜಿಲ್ಲಾ ಪಂಚಾಯತ್ ನಿಧಿಯಿಂದ ರೂ. 35.00 ಲಕ್ಷ ನಿಗದಿಯಾಗಿದ್ದು ರೂ 35.00 ರೂ ಬಿಡುಗಡೆಯಾಗಿದ್ದು, ಅಗತ್ಯವಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಪೀಠೋಪಕರಣಗಳನ್ನು ಖರೀಧಿಸಲು ಟೆಂಡರ್ ಮೂಲಕ ಜಿಲ್ಲೆಯ ಆಯ್ದ ಸರ್ಕಾರಿ ಪ್ರೌಢ ಶಾಲೆಗಳಿಗೆ ಡೆಸ್ಕಗಳು ಮತ್ತು ಕಬ್ಬಿಣದ ಅಲ್ಮೇರಾಗಳನ್ನು (ಪೀಠೋಪಕರಣ) ಖರೀದಿಸಲು ಟೆಂಡರ್ ಕರೆದು ಸಂಸ್ಥೆಯವರಿಗೆ ಸರಬರಾಜು ಆದೇಶ ನೀಡಲಾಗಿದ್ದು, ಶಾಲೆಗಳಿಗೆ ಸರಬರಾಜು ಮಾಡಲಾಗಿದೆ.

05. <u>ವಿದ್ಯಾ ವಿಕಾಸ ಯೋಜನೆ:–</u>

ಈ ಯೋಜನೆ ಅಡಿಯಲ್ಲಿ ಶಾಲೆಗಳಿಗೆ ಮಕ್ಕಳನ್ನು ಪೋಷಕರು ಕಳುಹಿಸಿಕೊಡುವಂತೆ ಪ್ರೇರೇಪಿಸಲು ಹಾಗೂ ಶಾಲೆಯ ಬಗ್ಗೆ ಆಕರ್ಷಿತರಾಗಿ ದಾಖಲಾತಿ ಉತ್ತಮಪಡಿಸುವ ಉದ್ದೇಶದಿಂದ 2020–21 ನೇ ಸಾಲಿನಲ್ಲಿ ಎಲ್ಲಾ ವರ್ಗದ 1 ರಿಂದ 10 ನೇ ತರಗತಿವರೆಗೆನ 99557 ಮಕ್ಕಳಿಗೆ ಉಚಿತವಾಗಿ **ಸಮವಸ್ತ್ರ**ಗಳನ್ನು ವಿತರಿಸಲಾಗಿದೆ.

2020–21 ನೇ ಸಾಲಿನಲ್ಲಿ ವಿದ್ಯಾವಿಕಾಸ ಯೋಜನೆಯಲ್ಲಿ ಅನುದಾನಿತ ಶಾಲೆಯ 1 ರಿಂದ 10ನೇ ತರಗತಿಯ 25605 ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರಿ ಶಾಲೆಗಳ 94534 ವಿದ್ಯಾರ್ಥಿಗಳೂ ಸೇರಿದಂತೆ ಒಟ್ಟು 120130 ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ನೀಡಲಾಗಿದೆ.

06. <u>ಉಚಿತ ಬೈಸಿಕಲ್ ವಿತರಣೆ:–</u>

2020–21ನೇ ಸಾಲಿಗೆ ಸರ್ಕಾರದಿಂದ ಬೈಸಿಕಲ್‌ಗಳು ಸರಬರಾಜಾಗಿರುವುದಿಲ್ಲ.

07. <u>ಅಕ್ಷರ ದಾಸೋಹ ಕಾರ್ಯಕ್ರಮದ ಪ್ರಯೋಜನ ಪಡೆಯುವ ವಿದ್ಯಾರ್ಥಿಗಳ ವಿವರ:–</u>

ಸಾರ್ವಜನಿಕ ಶಿಕ್ಷಣ ಇಲಾಖೆಯ ಮಹತ್ತರ ಯೋಜನೆಗಳಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ಮತ್ತು ಕ್ಷೀರ ಭಾಗ್ಯ ಯೋಜನೆಗಳು ಕೂಡ ಒಂದಾಗಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಜಾರಿಯಾಗುತ್ತಿರುವ ಈ ಯೋಜನೆಯು 2003–04 ನೇ ಸಾಲಿನಿಂದ ಮಧ್ಯಾಹ್ನ ಬಿಸಿಯೂಟ ಯೋಜನೆಯು ಪ್ರಾರಂಭವಾಗಿದ್ದು, ರಾಜ್ಯ ಸರ್ಕಾರವು ತನ್ನ ಸಂಪೂರ್ಣ ಅನುದಾನದೊಂದಿಗೆ 2013–14ನೇ ಸಾಲಿನಲ್ಲಿ ವಾರದಲ್ಲಿ ಮೂರು ದಿನದಂತೆ ಕ್ಷೀರಭಾಗ್ಯ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಮುಂದುವರೆದು ಜುಲೈ 2017ರ ಮಾಹೆಯಿಂದ ವಾರದಲ್ಲಿ 05 ದಿನಗಳಂತೆ ಕ್ಷೀರ ಭಾಗ್ಯ ಯೋಜನೆಯನ್ನು ಜಾರಿಗೊಳಿಸಲಾಗಿದೆ.ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಮಕ್ಕಳಿಗೆ ವಿಟಮಿನ್ ಮಾತ್ರೆಗಳು, ಆಲ್‌ಬೆಂಡೈಜೆಲ್ ಮತ್ತು WIFS ಮಾತ್ರೆಗಳನ್ನು ಪೂರೈಸಲಾಗುತ್ತಿದೆ. ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು ವ್ಯವಸ್ಥೆ ಕಲ್ಪಿಸಲಾಗಿದ್ದು, ಸ್ಥಳಾವಕಾಶವಿರುವ ಶಾಲೆಗಳಲ್ಲಿ ಶಾಲಾ ಕೈತೋಟ ನಿರ್ಮಿಸಿಕೊಂಡು ಸೊಪ್ಪು–ತರಕಾರಿಗಳನ್ನು ಬೆಳೆದು ಬಿಸಿಯೂಟ ಯೋಜನೆಗೆ ಬಳಸಿಕೊಳ್ಳಲಾಗುತ್ತಿದೆ. ಅಕ್ಷರ ದಾಸೋಹ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಒಟ್ಟು 2638 ಅಡುಗೆ ಕೇಂದ್ರಗಳಿದ್ದು, ಇವುಗಳ ಪೈಕಿ 631 ಹೈ–ಟೆಕ್ ಅಡುಗೆ ಕೋಣೆಗಳನ್ನು ನಿರ್ಮಿಸಲಾಗಿದೆ.

2020–21 ನೇ ಸಾಲಿನಲ್ಲಿ 1 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಶಾಲೆಗಳ ಮಕ್ಕಳ ಸಂಖ್ಯೆ 98307 ಹಾಗೂ ಅನುದಾನಿತ ಶಾಲೆಗಳ ಮಕ್ಕಳ ಸಂಖ್ಯೆ 24552 ಒಟ್ಟು 1,22,859 ಮಕ್ಕಳಿಗೆ ಬಿಸಿಯೂಟ ನೀಡಲು ರೂ.4878.43 ಲಕ್ಷ ಅನುದಾನ ನಿಗದಿಯಾಗಿದ್ದು, ಹಿಂದಿನ ವರ್ಷದ ಉಳಿಕೆ ಸೇರಿ ರೂ.5803.03 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.3904.05 ಲಕ್ಷ ವೆಚ್ಚವಾಗಿರುತ್ತದೆ.

08. <u>ಮಕ್ಕಳ ದಾಖಲಾತಿ:–</u>

2020–21 ನೇ ಸಾಲಿನಲ್ಲಿ 1 ರಿಂದ 10ನೇ ತರಗತಿವರೆಗೆ ದಾಖಲಾದ ಮಕ್ಕಳಲ್ಲಿ ಗಂಡು ಮಕ್ಕಳು **1,11,122** ಹೆಣ್ಣು ಮಕ್ಕಳು **1,06,710** ಒಟ್ಟು **2,17,832** ಮಕ್ಕಳ ದಾಖಲಾತಿಯಾಗಿರುತ್ತದೆ.

09. <u>ಶೈಕ್ಷಣಿಕ/ಸಾಂಸ್ಕೃತಿಕ ಕಾರ್ಯಕ್ರಮ:–</u>

2020–21 ನೇ ಸಾಲಿನಲ್ಲಿ ಕೊರೋನಾ ವೈರಸ್ ಸಂಬಂಧ ಶೈಕ್ಷಣಿಕ/ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

10. <u>ಕ್ರೀಡಾ ಚಟುವಟಿಕೆ</u> :– 2020–21 ನೇ ಸಾಲಿನಲ್ಲಿ ಕೊರೋನಾ ವೈರಸ್ ಸಂಬಂಧ ಕ್ರೀಡಾ ಚಟುವಟಿಕೆ ಕಾರ್ಯಕ್ರಮಗಳಿಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

11. <u>ಜಿಲ್ಲಾ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಸನ್ಮಾನ:–</u>

2020–21 ನೇ ಸಾಲಿನಲ್ಲಿ ಕೊರೋನಾ ವೈರಸ್ ಸಂಬಂಧ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ಶಿಕ್ಷಕರಿಗೆ ಪ್ರಶಸ್ತಿ ನೀಡಿರುವುದಿಲ್ಲ.

12. <u>ಎಸ್.ಎಸ್.ಎಲ್.ಸಿ. ಫಲಿತಾಂಶ:–</u>

2020–21ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಜಿಲ್ಲೆಯಲ್ಲಿ ಒಟ್ಟು 21010 ವಿದ್ಯಾರ್ಥಿಗಳಿದ್ದು, ಕೊರೋನಾ ವೈರಸ್ ಸಂಬಂಧ ಜುಲೈ–2021 ರ ಮಾಹೆಯಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ.

13. <u>ಸಮಗ್ರ ಶಿಕ್ಷಣ ಕರ್ನಾಟಕ:–</u>

2020-21 ನೇ ಸಾಲಿನಲ್ಲಿ ರೂ. 2870.58 /– ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನವನ್ನು ಎಸ್.ಡಿ.ಎಂ.ಸಿ, ಬಿ.ಆರ್.ಸಿ ಹಾಗೂ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ ನೇಮಕಗೊಂಡ ಶಿಕ್ಷಕರ ವೇತನ, ಕಟ್ಟಡಗಳ ದುರಸ್ಥಿ, ಶಾಲಾ ಹೆಚ್ಚುವರಿ ಕಟ್ಟಡ, ಕುಡಿಯುವ ನೀರು, ಗ್ರಂಥಾಲಯ ಹಾಗೂ ಶೈಕ್ಷಣಿಕವಾಗಿ ಸಂಬಂಧಿಸಿದ ಕಾರ್ಯಕ್ರಮಗಳಿಗಾಗಿ ವೆಚ್ಚ ಭರಿಸಲಾಗಿದೆ.

2020–21 ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕಾರ್ಯಕ್ರಮ ಯೋಜನೆ ಅಡಿ ರೂ. 3931.64 ಲಕ್ಷಗಳಿಗೆ ವಾರ್ಷಿಕ ಕ್ರಿಯಾಯೋಜನೆ ಅನುಮೋದನೆಯಾಗಿದ್ದು ದಿನಾಂಕ 31.03.2020 ರ ಅಂತ್ಯಕ್ಕೆ ರೂ.2451.34 ಲಕ್ಷ ಪ್ರಗತಿಯಾಗಿರುತ್ತದೆ. ಸದರಿ ಯೋಜನೆಯಡಿಯಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಕಿರಿಯ ಪ್ರಾಥಮಿಕ/ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 121 ಶಿಕ್ಷಕರಿಗೆ, 5 ಬಿ.ಆರ್.ಸಿ, 36 ಬಿ.ಆರ್.ಪಿ, 186 ಸಿ.ಆರ್.ಪಿ, 13 ಬಿ.ಐ.ಇ.ಆರ್.ಟಿ, 3 ಕೆ.ಜಿ.ಬಿ.ವಿ ಶಿಕ್ಷಕರು ಹಾಗೂ ಎಸ್.ಎಸ್.ಎ ಕಛೇರಿಯ 9 ಅಧಿಕಾರಿ ಮತ್ತು ಸಿಬ್ಬಂದಿಯ ವೇತನ ಪಾವತಿಸಲಾಗಿದೆ.

ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ ಶಾಲಾ ಎಸ್.ಡಿ.ಎಂ.ಸಿ ಖಾತೆಗಳಿಗೆ ಶಾಲಾ ಅನುದಾನ ಮತ್ತು SATS ಅನುದಾನ ಮತ್ತು SDMC ಅನುದಾನ ನೆರವಾಗಿ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯಿಂದ ಬಿಡುಗಡೆಯಾಗಿರುತ್ತದೆ. ಜಿಲ್ಲಾ ಕಛೇರಿಯಿಂದ ಬಿ.ಆರ್.ಸಿ ಕಛೇರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

14. <u>ಸಾಕ್ಷರತಾ ಪ್ರಮಾಣ :–</u>

ಜಿಲ್ಲೆಯ ಸಾಕ್ಷರತಾ ಪ್ರಮಾಣ 2011ರಲ್ಲಿದ್ದಂತೆ ಗಂಡು 83.64 ಹೆಣ್ಣು 68.60 ಇದ್ದು ಒಟ್ಟು ಪ್ರಮಾಣದ 76.07 ಆಗಿರುತ್ತದೆ. ಈ ಪ್ರಮಾಣವನ್ನು ಹೆಚ್ಚಿಸುವ ದೃಷ್ಟಿಯಲ್ಲಿ ಶೈಕ್ಷಣಿಕ ವರ್ಷದಿಂದ ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವ ಉದ್ದೇಶದಿಂದ ದಾಖಲಾತಿ ಆಂದೋಲನ ಮತ್ತು ಆರ್.ಬಿ.ಸಿ. ಶಿಕ್ಷಣ ಕೇಂದ್ರಗಳು ಮತ್ತು ಗೃಹಾಧಾರಿತ ಶಿಕ್ಷಣ ಕೇಂದ್ರಗಳು ಈ ಕಾರ್ಯಕ್ರಮಗಳಡಿಯಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ. ಉತ್ತಮ ಶಿಕ್ಷಣ ನೀಡಲಾಗುತ್ತಿದೆ. ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರಿಗೆ ಚೈತನ್ಯ ತುಂಬಲು ಜಿಲ್ಲೆಯಾದ್ಯಂತ ಚೈತನ್ಯ ಕಾರ್ಯಕ್ರಮ ಏರ್ಪಡಿಸಿ ತರಬೇತಿ ನೀಡಲಾಗಿದೆ.

2005–06ನೇ ಸಾಲಿನಿಂದ ಚಾಲ್ತಿಯಲ್ಲಿರುವ 7 ರಿಂದ 14 ವಯೋಮಾನದ ಶಿಕ್ಷಣದಿಂದ ವಂಚಿತರಾದ ಮತ್ತು ಶಾಲೆ ಬಿಟ್ಟು ಮಕ್ಕಳನ್ನು ಹಾಲಿ ಚಾಲ್ತಿಯಲ್ಲಿರುವ ಬಾ ಬಾಲೆ ಶಾಲೆಗೆ, ಎಲ್ಲಾ ವಿದ್ಯಾರ್ಥಿಗಳಿಗೆ ವಸತಿಯುತ 12 ತಿಂಗಳ ಕಾರ್ಯಕ್ರಮ, ಎಲ್ಲಿ ವಲಸೆಯೋ ಅಲ್ಲೇ ಟೆಂಟ್ ಶಾಲೆ, ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮದಡಿಯಲ್ಲಿ ಶಾಲೆಗೆ ದಾಖಲಿಸುವಲ್ಲಿ ಕ್ರಮಕೈಗೊಳ್ಳಲಾಗಿದೆ.

15. <u>2019–20 ರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶಿಕ್ಷಣ ಶುಲ್ಕ ವಿತರಣೆ ವಿವರ.</u>

2020–21 ನೇ ಸಾಲಿನಲ್ಲಿ ಕೊರೋನಾ ವೈರಸ್ ಸಂಬಂಧ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶಿಕ್ಷಣ ಶುಲ್ಕ ವಿತರಣೆ ಸಂಬಂಧ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ, ಹಾಗೂ ಯಾವುದೇ ಪ್ರಕರಣಗಳಿರುವುದಿಲ್ಲ.

*****

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ.

ಆರ್.ಐ.ಡಿ.ಎಫ್ ನಬಾರ್ಡ್ 19 ರ ಕಟ್ಟಡಗಳು:

ಈ ಯೋಜನೆಯಡಿಯಲ್ಲಿ ಆಲೂರು ತಾಲ್ಲೋಕಿಗೆ 2 ರೈತ ಸಂಪರ್ಕ ಕೇಂದ್ರ ಕಟ್ಟಡ ಕಾಮಗಾರಿಗಳು ರೂ. 82.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 71.48 ಲಕ್ಷಗಳು ವೆಚ್ಚವಾಗಿರುತ್ತದೆ ಮತ್ತು ಸದರಿ 2 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ಕಟ್ಟಡವನ್ನು ಹಸ್ತಾಂತರಿಸಲಾಗಿದೆ

ಬೇಲೂರು ತಾಲ್ಲೋಕಿಗೆ 1 ರೈತ ಸಂಪರ್ಕ ಕೇಂದ್ರ ಕಟ್ಟಡ ಕಾಮಗಾರಿ ರೂ. 41.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 40.55 ಲಕ್ಷಗಳು ವೆಚ್ಚವಾಗಿರುತ್ತದೆ ಮತ್ತು ಸದರಿ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ಹಸ್ತಾಂತರಿಸಲಾಗಿದೆ

ಆರ್.ಐ.ಡಿ.ಎಫ್ ನಬಾರ್ಡ್ 20 ರ ಕಟ್ಟಡಗಳು:

ಈ ಯೋಜನೆಯಡಿಯಲ್ಲಿ ಸಕಲೇಶಪುರ ತಾಲ್ಲೋಕಿಗೆ 1 ರೈತ ಸಂಪರ್ಕ ಕೇಂದ್ರ ಕಟ್ಟಡ ಕಾಮಗಾರಿ ರೂ. 46.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 45.58 ಲಕ್ಷಗಳು ವೆಚ್ಚವಾಗಿರುತ್ತದೆ ಮತ್ತು ಸದರಿ ಕಾಮಗಾರಿ ಪೂರ್ಣಗೊಂಡಿರುತ್ತದೆ ಹಾಗೂ ಹಸ್ತಾಂತರಿಸಲಾಗಿದೆ

ಆರ್.ಐ.ಡಿ.ಎಫ್ ನಬಾರ್ಡ್ 22 ರ ರಸ್ತೆ :

ಈ ಯೋಜನೆಯಡಿಯಲ್ಲಿ ಅರಕಲಗೂಡು ತಾಲ್ಲೋಕಿಗೆ 1 ಕಾಮಗಾರಿ ರೂ.40.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 34.03 ಲಕ್ಷಗಳು ವೆಚ್ಚವಾಗಿರುತ್ತದೆ ಮತ್ತು ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಬೇಲೂರು ತಾಲ್ಲೋಕಿಗೆ 1 ಕಾಮಗಾರಿ ರೂ 70.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 68.70 ಲಕ್ಷಗಳು ವೆಚ್ಚವಾಗಿರುತ್ತದೆ ಮತ್ತು ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಹಾಸನ ತಾಲ್ಲೋಕಿಗೆ 2 ಕಾಮಗಾರಿಗಳು 80.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 65.27 ಲಕ್ಷಗಳು ವೆಚ್ಚವಾಗಿರುತ್ತದೆ. ಸದರಿ 2 ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಆರ್.ಐ.ಡಿ.ಎಫ್ ನಬಾರ್ಡ್ 22 ರ ಕೆರೆಗಳು:

ಈ ಯೋಜನೆಯಡಿಯಲ್ಲಿ ಆಲೂರು ತಾಲ್ಲೋಕಿಗೆ 1 ಕಾಮಗಾರಿ ರೂ 25.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 18.77 ಲಕ್ಷಗಳು ವೆಚ್ಚವಾಗಿರುತ್ತದೆ. ಸದರಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಈ ಯೋಜನೆಯಡಿಯಲ್ಲಿ ಅರಕಲಗೂಡು ತಾಲ್ಲೋಕಿಗೆ 3 ಕಾಮಗಾರಿಗಳು ರೂ 72.80 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 49.16ಲಕ್ಷಗಳು ವೆಚ್ಚವಾಗಿರುತ್ತದೆ. ಸದರಿ 3 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಈ ಯೋಜನೆಯಡಿಯಲ್ಲಿ ಬೇಲೂರು ತಾಲ್ಲೋಕಿಗೆ 2 ಕಾಮಗಾರಿಗಳು ರೂ 50.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 39.83 ಲಕ್ಷಗಳು ವೆಚ್ಚವಾಗಿರುತ್ತದೆ. ಸದರಿ 2 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಈ ಯೋಜನೆಯಡಿಯಲ್ಲಿ ಹಾಸನ ತಾಲ್ಲೋಕಿಗೆ 2 ಕಾಮಗಾರಿ ರೂ 45.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 32.36 ಲಕ್ಷಗಳು ವೆಚ್ಚವಾಗಿರುತ್ತದೆ. ಸದರಿ 2 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಆರ್.ಐ.ಡಿ.ಎಫ್ ನಬಾರ್ಡ್ 23 ರ ರಸ್ತೆ :

ಈ ಯೋಜನೆಯಡಿಯಲ್ಲಿ ಬೇಲೂರು ತಾಲ್ಲೋಕಿಗೆ 1 ಕಾಮಗಾರಿ ರೂ. 50.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.45.85 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಈ ಯೋಜನೆಯಡಿಯಲ್ಲಿ ಹಾಸನ ತಾಲ್ಲೋಕಿಗೆ 2 ಕಾಮಗಾರಿಗಳು ರೂ. 110.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.98.38 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಈ ಯೋಜನೆಯಡಿಯಲ್ಲಿ ಸಕಲೇಶಪುರ ತಾಲ್ಲೋಕಿಗೆ 1 ಕಾಮಗಾರಿ ರೂ. 60.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.59.17 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಆರ್.ಐ.ಡಿ.ಎಫ್ ನಬಾರ್ಡ್ 24 ರ ರಸ್ತೆ :

ಈ ಯೋಜನೆಯಡಿಯಲ್ಲಿ ಅರಕಲಗೂಡು ತಾಲ್ಲೋಕಿಗೆ 1 ಕಾಮಗಾರಿ ರೂ. 100.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.84.44 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.
ಈ ಯೋಜನೆಯಡಿಯಲ್ಲಿ ಹಾಸನ ತಾಲ್ಲೋಕಿಗೆ 1 ಕಾಮಗಾರಿ ರೂ. 100.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.97.76 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಆರ್.ಐ.ಡಿ.ಎಫ್ ನಬಾರ್ಡ್ 22 ರ ಪದವಿ ಪೂರ್ವ ಶಿಕ್ಷಣ ಇಲಾಖೆ ಕಟ್ಟಡಗಳು:

ಈ ಯೋಜನೆಯಡಿಯಲ್ಲಿ ಅರಕಲಗೂಡು ತಾಲ್ಲೋಕಿಗೆ 3 ಕಾಮಗಾರಿ ರೂ. 149.85 ಲಕ್ಷಗಳಿಗೆ ಮಂಜೂರಾಗಿದ್ದು, ರೂ.130.97 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.
ಬೇಲೂರು ತಾಲ್ಲೂಕಿಗೆ 2 ಕಾಮಗಾರಿ ರೂ.99.90 ಲಕ್ಷಗಳಿಗೆ ಮಂಜೂರಾಗಿದ್ದು, ರೂ.78.89 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.
ಹಾಗೂ ಸಕಲೇಶಪುರ ತಾಲೂಕಿಗೆ 1ಕಟ್ಟಡ 50.55 ಅಂದಾಜು ವೆಚ್ಚದಲ್ಲಿ ಮಂಜೂರಾಗಿದ್ದು, ರೂ.44.76 ಲಕ್ಷಗಳು ವೆಚ್ಚವಾಗಿರುತ್ತದೆ. ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಆರ್.ಐ.ಡಿ.ಎಫ್ ನಬಾರ್ಡ್ 23 ರ ಪದವಿ ಪೂರ್ವ ಶಿಕ್ಷಣ ಇಲಾಖೆ ಕಟ್ಟಡಗಳು:

ಬೇಲೂರು ತಾಲ್ಲೂಕಿಗೆ 1ಕಾಮಗಾರಿ ರೂ.93.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.92.51 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಪಿ.ಯು.ಬೋರ್ಡ್ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಕಟ್ಟಡಗಳು:

ಈ ಯೋಜನೆಯಡಿಯಲ್ಲಿ ಆಲೂರು ತಾಲ್ಲೂಕಿಗೆ 2 ಕಟ್ಟಡ ಕಾಮಗಾರಿಗಳು ರೂ 140.60 ಲಕ್ಷಗಳಿಗೆ ಮಂಜೂರಾಗಿದ್ದು ರೂ.134.29ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಪರಿಶಿಷ್ಟ ಜಾತಿ ಉಪ ಯೋಜನೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಕಟ್ಟಡಗಳು:

ಈ ಯೋಜನೆಯಡಿಯಲ್ಲಿ ಆಲೂರು ತಾಲ್ಲೂಕಿಗೆ 2 ಕಟ್ಟಡ ಕಾಮಗಾರಿಗಳು ರೂ 110.00 ಲಕ್ಷಗಳಿಗೆ, ಅನುಮೋದನೆಗೊಂಡಿದ್ದು, ರೂ.90.28 ಲಕ್ಷಗಳು ವೆಚ್ಚವಾಗಿರುತ್ತದೆ 2 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
ಸಕಲೇಶಪುರ ತಾಲ್ಲೂಕಿಗೆ 1 ಕಟ್ಟಡ ಕಾಮಗಾರಿ ರೂ 55.00 ಲಕ್ಷಗಳಿಗೆ ಮಂಜೂರಾಗಿದ್ದು ರೂ. 54.32 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿ ಪೂರ್ಣಗೊಂಡಿರುತ್ತದೆ.

ರಾಜ್ಯ ಬಂಡವಾಳ ವೆಚ್ಚ ಯೋಜನೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಕಟ್ಟಡಗಳು:

ಈ ಯೋಜನೆಯಡಿಯಲ್ಲಿ ಅರಕಲಗೂಡು ತಾಲ್ಲೂಕಿಗೆ 1 ಕಟ್ಟಡ ಕಾಮಗಾರಿ ರೂ 55.00 ಲಕ್ಷಗಳಿಗೆ, ಮಂಜೂರಾಗಿದ್ದು ರೂ.46.60 ಲಕ್ಷಗಳು ವೆಚ್ಚವಾಗಿರುತ್ತದೆ ಸದರಿ ಕಾಮಗಾರಿ ಪೂರ್ಣಗೊಂಡಿರುತ್ತದೆ.
ಹಾಸನ ತಾಲ್ಲೂಕಿಗೆ 1 ಕಟ್ಟಡ ಕಾಮಗಾರಿ ರೂ 100.00ಲಕ್ಷಗಳಿಗೆ, ಮಂಜೂರಾಗಿದ್ದು ರೂ ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

3054 ಸಿಎಂಜಿ.ಎಸ್.ವೈ:

2020–21ನೇ ಸಾಲಿಗೆ ಸಂಬಂಧಿಸಿದಂತೆ ಆಲೂರು ತಾಲ್ಲೋಕಿಗೆ ಒಟ್ಟು18 ಕಾಮಗಾರಿಗಳು ರೂ. 33.42 ಲಕ್ಷಗಳಿಗೆ ಅನುಮೋದನೆಯಾಗಿದ್ದು 5 ಕಾಮಗಾರಿಗಳಿಗೆ ರೂ.13.45 ಲಕ್ಷಗಳು ವೆಚ್ಚವಾಗಿ, 13 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ವಿಭಾಗ ಕಛೇರಿಯಲ್ಲಿ ಬಿಲ್ಲು ಪಾವತಿಗಾಗಿ ಬಾಕಿ ಇರುತ್ತದೆ.

ಅರಕಲಗೂಡು ತಾಲ್ಲೋಕಿಗೆ ಒಟ್ಟು21 ಕಾಮಗಾರಿಗಳು ರೂ.50.85ಲಕ್ಷಗಳಿಗೆ ಅನುಮೋದನೆಯಾಗಿದ್ದು,

21 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ವಿಭಾಗ ಕಛೇರಿಯಲ್ಲಿ ಬಿಲ್ಲು ಪಾವತಿಗಾಗಿ ಬಾಕಿ ಇರುತ್ತದೆ.

ಬೇಲೂರು ತಾಲ್ಲೋಕಿಗೆ ಒಟ್ಟು38 ಕಾಮಗಾರಿಗಳು ರೂ.52.18 ಲಕ್ಷಗಳಿಗೆ ಅನುಮೋದನೆಯಾಗಿದ್ದು 38 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ವಿಭಾಗ ಕಛೇರಿಯಲ್ಲಿ ಬಿಲ್ಲು ಪಾವತಿಗಾಗಿ ಬಾಕಿ ಇರುತ್ತದೆ.

ಹಾಸನ ತಾಲ್ಲೋಕಿಗೆ ಒಟ್ಟು 74 ಕಾಮಗಾರಿಗಳು ರೂ.117.09 ಲಕ್ಷಗಳಿಗೆ ಅನುಮೋದನೆಯಾಗಿದ್ದು, 24ಕಾಮಗಾರಿಗಳು ಪೂರ್ಣಗೊಂಡು ರೂ.50.86 ಲಕ್ಷಗಳು ವೆಚ್ಚವಾಗಿ, 49 ಕಾಮಗಾರಿಗಳು ಭೌತಿಕವಾಗಿ ಮುಗಿದಿದ್ದು, ವಿಭಾಗ ಕಛೇರಿಯಲ್ಲಿ ಬಿಲ್ಲು ಪಾವತಿಗಾಗಿ ಬಾಕಿ ಇರುತ್ತದೆ. ಮತ್ತು 1 ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಸಕಲೇಶಪುರ ತಾಲ್ಲೋಕಿಗೆ ಒಟ್ಟು 13 ಕಾಮಗಾರಿಗಳು ರೂ.31.46 ಲಕ್ಷಗಳಿಗೆ ಅನುಮೋದನೆಯಾಗಿದ್ದು 13 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ವಿಭಾಗ ಕಛೇರಿಯಲ್ಲಿ ಬಿಲ್ಲು ಪಾವತಿಗಾಗಿ ಬಾಕಿ ಇರುತ್ತದೆ.

2702 ಕೆರೆಗಳು

2020–21 ನೇ ಸಾಲಿಗೆ ಆಲೂರು ತಾಲ್ಲೋಕಿಗೆ 3 ಕಾಮಗಾರಿಗಳು ರೂ.10.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 9.88 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಅರಕಲಗೂಡು ತಾಲ್ಲೋಕಿಗೆ 15 ಕಾಮಗಾರಿಗಳು ರೂ.36.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 32.59 ಲಕ್ಷಗಳು ವೆಚ್ಚವಾಗಿ 13 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 2 ಕಾಮಗಾರಿಗಳನ್ನು ಕೈಬಿಡಲಾಗಿದೆ

ಬೇಲೂರು ತಾಲೋಕಿಗೆ 17 ಕಾಮಗಾರಿಗಳು ರೂ.32.25 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 31.75 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 68 ಕಾಮಗಾರಿಗಳು ರೂ.111.55 ಲಕ್ಷಗಳಿಗೆ ಮಂಜೂರಾಗಿದ್ದು, ರೂ.109.88 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಕಲೇಶಪುರ ತಾಲೋಕಿಗೆ 3 ಕಾಮಗಾರಿಗಳು ರೂ.8.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.7.96 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

2515 ಅಭಿವೃದ್ಧಿ ಅನುದಾನ

2020–21ನೇ ಸಾಲಿಗೆ ಆಲೂರು ತಾಲ್ಲೋಕಿಗೆ 11 ಕಾಮಗಾರಿಗಳು ರೂ.14.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 13.95 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಅರಕಲಗೂಡು ತಾಲ್ಲೋಕಿಗೆ 33 ಕಾಮಗಾರಿಗಳು ರೂ.60.20 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 57.02 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಬೇಲೂರು ತಾಲೋಕಿಗೆ 46 ಕಾಮಗಾರಿಗಳು ರೂ.57.57 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 57.07 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 93 ಕಾಮಗಾರಿಗಳು ರೂ.154.45 ಲಕ್ಷಗಳಿಗೆ ಮಂಜೂರಾಗಿದ್ದು, ರೂ.151.88 ಲಕ್ಷಗಳು ವೆಚ್ಚವಾಗಿ 91 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 1 ಕಾಮಗಾರಿ ಕೈಬಿಡಲಾಗಿರುತ್ತದೆ

ಸಕಲೇಶಪುರ ತಾಲೋಕಿಗೆ 21 ಕಾಮಗಾರಿಗಳು ರೂ.28.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.27.96 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

2020–21ನೇ ಸಾಲಿನ ಲಿಂಕ್ ಡಾಕ್ಯುಮೆಂಡ್ ಕಾಮಗಾರಿಗಳು:

ಕೃಷಿ ಇಲಾಖೆ :

ಆಲೂರು ತಾಲ್ಲೋಕಿಗೆ 02 ಕಾಮಗಾರಿಗಳು ರೂ.3.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.2.95 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಅರಕಲಗೂಡು ತಾಲ್ಲೋಕಿಗೆ 04 ಕಾಮಗಾರಿಗಳು ರೂ.7.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 6.91 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಬೇಲೂರು ತಾಲೋಕಿಗೆ 03 ಕಾಮಗಾರಿಗಳು ರೂ.5.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.4.95 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 15 ಕಾಮಗಾರಿಗಳು ರೂ.27.27 ಲಕ್ಷಗಳಿಗೆ ಮಂಜೂರಾಗಿದ್ದು, ರೂ.26.53 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಕಲೇಶಪುರ ತಾಲೋಕಿಗೆ 02 ಕಾಮಗಾರಿಗಳು ರೂ.4.50 ಲಕ್ಷಗಳಿಗೆ ಮಂಜೂರಾಗಿದ್ದು, ರೂ.4.47 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಕೃಷಿ ಮಾರುಕಟ್ಟೆ :

ಹಾಸನ ತಾಲೋಕಿಗೆ 01 ಕಾಮಗಾರಿಯು ರೂ.0.30 ಲಕ್ಷಗಳಿಗೆ ಮಂಜೂರಾಗಿದ್ದು, ರೂ.0.28 ಲಕ್ಷಗಳು ವೆಚ್ಚವಾಗಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಮೀನುಗಾರಿಕೆ ಇಲಾಖೆ :

ಹಾಸನ ತಾಲೋಕಿಗೆ 09 ಕಾಮಗಾರಿಗಳು ರೂ.16.54 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 16.39 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಆಯುಷ್ ಇಲಾಖೆ :

ಅರಕಲಗೂಡು ತಾಲ್ಲೋಕಿಗೆ 02 ಕಾಮಗಾರಿಗಳು ರೂ.2.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 1.93 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಬೇಲೂರು ತಾಲೋಕಿಗೆ 02 ಕಾಮಗಾರಿಗಳು ರೂ.5.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ.4.83 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 15 ಕಾಮಗಾರಿಗಳು ರೂ.26.50 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 25.86 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಕಲೇಶಪುರ ತಾಲೋಕಿಗೆ 01 ಕಾಮಗಾರಿಯು ರೂ. 2.77 ಲಕ್ಷಗಳಿಗೆ ಮಂಜೂರಾಗಿದ್ದು, ರೂ.2.70 ಲಕ್ಷಗಳು ವೆಚ್ಚವಾಗಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ :

ಅರಕಲಗೂಡು ತಾಲ್ಲೋಕಿಗೆ 02 ಕಾಮಗಾರಿಗಳು ರೂ.3.50 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 3.47 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಬೇಲೂರು ತಾಲೋಕಿಗೆ 05 ಕಾಮಗಾರಿಗಳು ರೂ.6.50 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 5.63 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 13 ಕಾಮಗಾರಿಗಳು ರೂ.19.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 18.76 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಕಲೇಶಪುರ ತಾಲೋಕಿಗೆ 02 ಕಾಮಗಾರಿಗಳು ರೂ 3.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 2.97 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ತೋಟಗಾರಿಕೆ ಇಲಾಖೆ :

ಅರಕಲಗೂಡು ತಾಲ್ಲೋಕಿಗೆ 03 ಕಾಮಗಾರಿಗಳು ರೂ.5.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 4.93 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 07 ಕಾಮಗಾರಿಗಳು ರೂ.12.21 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 12.02 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಕಲೇಶಪುರ ತಾಲೋಕಿಗೆ 01 ಕಾಮಗಾರಿಯು ರೂ.1.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 0.99 ಲಕ್ಷಗಳು ವೆಚ್ಚವಾಗಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಆರೋಗ್ಯ ಇಲಾಖೆ :

ಆಲೂರು ತಾಲ್ಲೋಕಿಗೆ 02 ಕಾಮಗಾರಿಗಳು ರೂ.3.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 2.99 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಅರಕಲಗೂಡು ತಾಲ್ಲೋಕಿಗೆ 04 ಕಾಮಗಾರಿಗಳು ರೂ.6.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 5.97 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಬೇಲೂರು ತಾಲೋಕಿಗೆ 04 ಕಾಮಗಾರಿಗಳು ರೂ.8.50 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 8.45 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 19 ಕಾಮಗಾರಿಗಳು ರೂ.30.50 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 29.93 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಕಲೇಶಪುರ ತಾಲೋಕಿಗೆ 04 ಕಾಮಗಾರಿಗಳು ರೂ.8.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 7.96 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಾಮಾಜಿಕ ಅರಣ್ಯ ಇಲಾಖೆ :

ಅರಕಲಗೂಡು ತಾಲೋಕಿಗೆ 03 ಕಾಮಗಾರಿಗಳು ರೂ.4.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 3.94 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಬೇಲೂರು ತಾಲೋಕಿಗೆ 01 ಕಾಮಗಾರಿಯು ರೂ.2.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 1.98 ಲಕ್ಷಗಳು ವೆಚ್ಚವಾಗಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 15 ಕಾಮಗಾರಿಗಳು ರೂ.28.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 27.69 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಕಲೇಶಪುರ ತಾಲೋಕಿಗೆ 01 ಕಾಮಗಾರಿಯು ರೂ.3.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 2.98 ಲಕ್ಷಗಳು ವೆಚ್ಚವಾಗಿ ಕಾಮಗಾರಿಯು ಪೂರ್ಣಗೊಂಡಿರುತ್ತವೆ.

ಪಶುಪಾಲನೆ ಇಲಾಖೆ :

ಆಲೂರು ತಾಲ್ಲೋಕಿಗೆ 03 ಕಾಮಗಾರಿಗಳು ರೂ.3.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 2.93 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಅರಕಲಗೂಡು ತಾಲ್ಲೋಕಿಗೆ 02 ಕಾಮಗಾರಿಗಳು ರೂ. 3.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 2.97 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಬೇಲೂರು ತಾಲೋಕಿಗೆ 04 ಕಾಮಗಾರಿಗಳು ರೂ. 7.50 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 7.39 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಹಾಸನ ತಾಲೋಕಿಗೆ 15 ಕಾಮಗಾರಿಗಳು ರೂ. 24.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 23.65 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಸಕಲೇಶಪುರ ತಾಲೋಕಿಗೆ 03 ಕಾಮಗಾರಿಗಳು ರೂ. 5.00 ಲಕ್ಷಗಳಿಗೆ ಮಂಜೂರಾಗಿದ್ದು, ರೂ. 4.96 ಲಕ್ಷಗಳು ವೆಚ್ಚವಾಗಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

****

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ.

ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ:–

ಸದರಿ ಯೋಜನೆಯಡಿ ಈ ವಿಭಾಗಕ್ಕೆ ಮುಂದುವರೆದ ಕಾಮಗಾರಿಗಳು ಸೇರಿ ಒಟ್ಟು 142 ಕಾಮಗಾರಿಗಳು ರೂ. 224.08 ಲಕ್ಷಗಳಿಗೆ ಅನುಮೋದನೆಯಾಗಿದ್ದು, 142 ಕಾಮಗಾರಿಗಳು ಪೂರ್ಣಗೊಂಡಿದ್ದು ಒಟ್ಟು ರೂ. 218.06 ಲಕ್ಷಗಳು ವೆಚ್ಚವಾಗಿರುತ್ತದೆ.

3054 ಸಿ.ಎಂ.ಜಿ.ಎಸ್.ವೈ:–

3054 ಸಿ.ಎಂ.ಜಿ.ಎಸ್.ವೈ. ಯೋಜನೆಯಡಿ ಈ ವಿಭಾಗಕ್ಕೆ ಮುಂದುವರೆದ ಕಾಮಗಾರಿಗಳು ಸೇರಿ ಒಟ್ಟು 124 ಕಾಮಗಾರಿಗಳು ರೂ. 200.70 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಒಟ್ಟು 124 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ರೂ. 119.07 ಲಕ್ಷಗಳು ವೆಚ್ಚವಾಗಿರುತ್ತದೆ.

2702 ಕೆರೆಗಳ ಅಭಿವೃದ್ಧಿ :–

ಸದರಿ ಯೋಜನೆಯಡಿ ಈ ವಿಭಾಗಕ್ಕೆ ಮುಂದುವರೆದ ಕಾಮಗಾರಿಗಳು ಸೇರಿ ಒಟ್ಟು 93 ಕಾಮಗಾರಿಗಳು ರೂ. 143.27 ಲಕ್ಷಗಳಿಗೆ ಅನುಮೋದನೆಯಾಗಿದ್ದು, 93 ಕಾಮಗಾರಿಗಳು ಪೂರ್ಣಗೊಂಡಿದ್ದು ಒಟ್ಟು ರೂ. 141.29 ಲಕ್ಷಗಳು ವೆಚ್ಚವಾಗಿರುತ್ತದೆ.

ಸಮಾಜ ಕಲ್ಯಾಣ ಇಲಾಖೆ ಯೋಜನೆ :–

ಸದರಿ ಯೋಜನೆಯಡಿ ಈ ವಿಭಾಗ ವ್ಯಾಪ್ತಿಯಲ್ಲಿ 2020–21ನೇ ಸಾಲಿನಲ್ಲಿ 4 ಅಂಬೇಡ್ಕರ್ ಭವನ ಹಾಗು 1 ಜಗಜೀವನ್ ರಾಂ ಭವನ ಕಟ್ಟಡವನ್ನು ನಿರ್ಮಿಸಲು ಅನುದಾನ ಮಂಜೂರಾಗಿದ್ದು, ಕಾಮಗಾರಿಗಳು ಪೂರ್ಣಗೊಂಡಿದ್ದು ಒಟ್ಟು ರೂ. 142.54 ಲಕ್ಷಗಳ ವೆಚ್ಚ ಭರಿಸಲಾಗಿದೆ

ಸಾರ್ವಜನಿಕ ಶಿಕ್ಷಣ ಇಲಾಖೆ ಯೋಜನೆ:–(4202–01–202–1–056–133)&4202–01–201–1–04–059:–

ಸದರಿ ಯೋಜನೆಯಡಿ ಈ ವಿಭಾಗ ವ್ಯಾಪ್ತಿಯಲ್ಲಿ 2020–21ನೇ ಸಾಲಿನಲ್ಲಿ 4 ಶಾಲ ಕೊಠಡಿಗಳನ್ನು ನಿರ್ಮಿಸಲು ಒಟ್ಟು 47.55 ಲಕ್ಷಗಳ ಅನುದಾನ ಮಂಜೂರಾಗಿದ್ದು 3 ಕಾಮಗಾರಿಗಳು ಪೂರ್ಣಗೊಂಡಿದ್ದು ಒಟ್ಟು ರೂ. 35.38 ಲಕ್ಷಗಳ ವೆಚ್ಚ ಭರಿಸಲಾಗಿದೆ

ಆರ್.ಎಮ್.ಎಸ್.ಎ 4202–01–202–1–07 (ಸಮಗ್ರ ಶಿಕ್ಷಣ ಇಲಾಖೆ):–

ಸದರಿ ಯೋಜನೆಯಡಿ ಈ ವಿಭಾಗ ವ್ಯಾಪ್ತಿಯಲ್ಲಿ 2020–21ನೇ ಸಾಲಿನಲ್ಲಿ 10 ಶಾಲ ಕೊಠಡಿಗಳನ್ನು ನಿರ್ಮಿಸಲು ಒಟ್ಟು 110.00 ಲಕ್ಷಗಳ ಅನುದಾನ ಮಂಜೂರಾಗಿದ್ದು 8 ಕಾಮಗಾರಿಗಳು ಪೂರ್ಣಗೊಂಡಿದ್ದು ಒಟ್ಟು ರೂ. 54.26 ಲಕ್ಷಗಳ ವೆಚ್ಚ ಭರಿಸಲಾಗಿದೆ

****

ಜಿಲ್ಲಾ ಆಯುಷ್ ಇಲಾಖೆ

ಜಿಲ್ಲಾ ಆಯುಷ್ (ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ) ಇಲಾಖೆಯ ಈ ಕಛೇರಿಯ ವ್ಯಾಪ್ತಿಯಲ್ಲಿ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಈ ಕೆಳಗೆ ನಮೂದಿಸಿರುವ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಕ್ರ.ಸಂ	ವೈದ್ಯ ಪದ್ಧತಿಯ ಹೆಸರು	ಆಸ್ಪತ್ರೆಗಳು	ಚಿಕಿತ್ಸಾಲಯಗಳು
1	ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆ	01	–
2	ಆಯುರ್ವೇದ	5	51
3	ಆಯುರ್ವೇದ ಮತ್ತು ಯುನಾನಿ ಸಂಯುಕ್ತ ಚಿಕಿತ್ಸಾಲಯಗಳು	–	02
4	ಯುನಾನಿ	–	04
5	ಹೋಮಿಯೋಪತಿ	01	01
6	ಆಯುರ್ವೇದ ಪಂಚಕರ್ಮ ವಿಭಾಗ (ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ)	01	–
	ಒಟ್ಟು	**08**	**58**

ಸಿಬ್ಬಂದಿಗಳ ವಿವರ

ಕ್ರ.ಸಂ	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಹಿರಿಯ ವೈದ್ಯಾಧಿಕಾರಿಗಳು	7	5	2
2	ವೈದ್ಯಾಧಿಕಾರಿಗಳು	65	31	34
3	ಸಹಾಯಕ ಆಡಳಿತಾಧಿಕಾರಿಗಳು	1	0	1
4	ಅಧೀಕ್ಷಕರು	1	1	0
5	ಪ್ರಥಮ ದರ್ಜೆ ಸಹಾಯಕರು	5	2	3
6	ದ್ವೀತೀಯ ದರ್ಜೆ ಸಹಾಯಕರು	1	1	0
7	ಬೆರಳಚ್ಚುಗಾರರು	1	0	1
8	ಶುಶ್ರೂಷಕಿಯರು	11	1	10
9	ಔಷಧಿ ವಿತರಕರು	12	0	12
10	ಪ್ರಯೋಗ ಶಾಲಾ ತಂತ್ರಜ್ಞರು	1	0	1
11	ಅಡುಗೆಯವರು	1	1	0
12	ಪಂಚಕರ್ಮ ಥೆರಪಿಸ್ಟ್	2	0	2
13	ಪಂಚಕರ್ಮ ಥೆರಪಿಸ್ಟ್/ಮಸಾಜಿಸ್ಟ್	1	0	1
14	ವಾರ್ಡ್ ಅಟೆಂಡರ್	2	0	2
15	ಕೊಠಡಿ ಅನುಚರ/ಆಯಾ	1	0	1
16	ವಾರ್ಡ್ ಆಯಾ	2	1	1
17	ನೈರ್ಮಲ್ಯ ಪಾಲಕರು	2	0	2
18	ಮಸಾಜಿಸ್ಟ್	1	0	1
19	ರಾತ್ರಿ ಕಾವಲುಗಾರ	1	0	1
20	ಸೇವಕ	1	0	1
21	ಗ್ರೂಪ್ ಡಿ	67	16	51
	ಒಟ್ಟು	**186**	**59**	**127**

ಕಟ್ಟಡಗಳ ನಿರ್ವಹಣೆ

2020–21 ನೇ ಸಾಲಿನಲ್ಲಿ ರೂ. 45.77 ಲಕ್ಷ ಅನುದಾನ ನಿಗಧಿಯಾಗಿದ್ದು, ಈ ಕೆಳಕಂಡ ಚಿಕಿತ್ಸಾಲಯಗಳ ನೂತನ ಕಟ್ಟಡ ನಿರ್ಮಾಣ/ಕಟ್ಟಡಗಳ ರಿಪೇರಿ ಕಾರ್ಯಗಳಿಗೆ ಅನುಮೋದನೆಯಾಗಿರುತ್ತದೆ.

ಕ್ರ.ಸಂ	ಆಸ್ಪತ್ರೆ/ಚಿಕಿತ್ಸಾಲಯ ಕಾಮಗಾರಿಯ ಹೆಸರು	ಅನುದಾನ
1	ಹೊಸೂರು ಗ್ರಾಮದ ಆಯುಷ್ ಆಸ್ಪತ್ರೆಯ ಸುಣ್ಣ ಬಣ್ಣ ಕಾಮಗಾರಿ	0.77
2	ದಾಸರ ಕೊಪ್ಪಲು ಗ್ರಾಮದ ಆಯುಷ್ ಆಸ್ಪತ್ರೆ ಕಟ್ಟಡದ ಸುಣ್ಣ ಬಣ್ಣ ಕಾಮಗಾರಿ	2.50
3	ಮುತ್ತತ್ತಿ ಗ್ರಾಮದ ಆಯುಷ್ ಕಟ್ಟಡ ಅಭಿವೃದ್ಧಿ	2.00
4	ಸಿದ್ದಾಪುರಗೇಟ್ ಆಯುರ್ವೇದ ಆಸ್ಪತ್ರೆಯ ದುರಸ್ಥಿ	1.00
5	ಮರ್ಕುಲಿ ಗ್ರಾಮದ ಆಯುಷ್ ಆಸ್ಪತ್ರೆಯ ದುರಸ್ಥಿ	2.00
6	ಬೇಲೂರು ಪಟ್ಟಣದ ಸರ್ಕಾರಿ ಆಯುಷ್ ಆಸ್ಪತ್ರೆಯ ಕಾಮಗಾರಿ	2.00
7	ಕಟ್ಟಾಯ ಗ್ರಾಮ ಪಂಚಾಯಿತಿ ಆಯುಷ್ ಆಸ್ಪತ್ರೆಯ ಕಟ್ಟಡ ದುರಸ್ಥಿ	1.00
8	ಹೊಸೂರು ಗ್ರಾಮದ ಆಯುಷ್ ಆಸ್ಪತ್ರೆಯ ಕಟ್ಟಡ ದುರಸ್ಥಿ	1.00
9	ಸಾರಾಪುರ ಆಯುಷ್ ಆಸ್ಪತ್ರೆ ದುರಸ್ತಿ ಕಾಮಗಾರಿ	2.00
10	ಸಕಲೇಶಪುರ ತಾ॥ ಹೊಸೂರು ಆಯುಷ್ ಆಸ್ಪತ್ರೆಯ ದುರಸ್ಥಿ	1.00
11	ಕಟ್ಟಾಯ ಗ್ರಾಮದ ಆಯುಷ್ ಆಸ್ಪತ್ರೆಯ ದುರಸ್ತಿ	1.00
12	ದಾಸರಕೊಪ್ಪಲು ಗ್ರಾಮದ ಆಯುರ್ವೇದ ಆಸ್ಪತ್ರೆಯ ಕಟ್ಟಡ ದುರಸ್ತಿ	1.00
13	ಸಾಣೇನಹಳ್ಳಿ ಗ್ರಾಮದ ಆಯುಷ್ ಆಸ್ಪತ್ರೆಗೆ ಸುಣ್ಣ ಬಣ್ಣ ಮತ್ತು ಕೌಂಪಾಂಡ್ ಕಾಮಗಾರಿ	3.00
14	ಕೆ.ಹಿರೇಹಳ್ಳಿ ಗ್ರಾಮದ ಆಯುಷ್ ಆಸ್ಪತ್ರೆಯ ಕಟ್ಟಡ ದುರಸ್ತಿ	1.00
15	ಹಾಸನ ನಗರದ ಜಿಲ್ಲಾ ಆಯುಷ್ ಕಛೇರಿ ಕಟ್ಟಡ ದುರಸ್ತಿ	1.00
16	ಗಂಜಿಗೆರೆಪುರ ಗ್ರಾಮದ ಆಯುಷ್ ಆಸ್ಪತ್ರೆ ಕಟ್ಟಡದ ಮೇಲ್ಚಾವಣಿ ಮತ್ತು ದುರಸ್ತಿ	2.00
17	ಕುರುವಂಕ ಗ್ರಾಮದ ಆಯುಷ್ ಆಸ್ಪತ್ರೆಯ ಕಟ್ಟಡ ದುರಸ್ತಿ	1.00
18	ಚನ್ನರಾಯಪಟ್ಟಣ ಟೌನ್‌ನಲ್ಲಿರುವ ಆಯುಷ್ ಆಸ್ಪತ್ರೆಯ ಕಟ್ಟಡದ ಕಾಂಪೌಂಡಿಗೆ ಗ್ರೀಲ್ಸ್ ಅಳವಡಿಸುವ ಕಾಮಗಾರಿ	1.50
19	ದಢೀಘಟ್ಟ ಗ್ರಾಮದ ಸರ್ಕಾರಿ ಆಯುಷ್ ಆಸ್ಪತ್ರೆ ಅಭಿವೃದ್ಧಿ ಕಾಮಗಾರಿ	2.00
20	ಜಾವಗಲ್ ಗ್ರಾಮದ ಆಯುಷ್ ಆಸ್ಪತ್ರೆಯ ಕಟ್ಟಡ ದುರಸ್ತಿ	1.00
21	ಮಾವನೂರು ಗ್ರಾಮದ ಆಯುಷ್ ಆಸ್ಪತ್ರೆಯ ಮುಂದುವರೆದ ದುರಸ್ತಿ ಕಾಮಗಾರಿ	2.00
22	ಅರಕಲಗೂಡು ನಗರ ಆಯುಷ್ ಆಸ್ಪತ್ರೆಯ ಕಟ್ಟಡಕ್ಕೆ ಸುಣ್ಣ ಬಣ್ಣ ಕಾಮಗಾರಿ	1.00
23	ಹಾಸನ ನಗರದ ಹೊಸಲೈನ್ ರಸ್ತೆಯ ಜಿಲ್ಲಾ ಆಯುರ್ವೇದ ಆಸ್ಪತ್ರೆಯ ಅಭಿವೃದ್ಧಿ	1.00
24	ದೊಡ್ಡಗದವಳ್ಳಿ ಆಯುಷ್ ಆಸ್ಪತ್ರೆಯ ಅಭಿವೃದ್ಧಿ	3.00
25	ಚಿಕ್ಕೂರು ಗ್ರಾಮದ ಆಯುಷ್ ಆಸ್ಪತ್ರೆಯ ಅಭಿವೃದ್ಧಿ	2.00
26	ಕೆ.ಹಿರೇಹಳ್ಳಿ ಆಯುಷ್ ಆಸ್ಪತ್ರೆಯ ಅಭಿವೃದ್ಧಿ	4.00
27	ಹಾಸನ ನಗರದಲ್ಲಿರುವ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಕಟ್ಟಡ ದುರಸ್ಥಿ	2.00
28	ಹಾಸನ ಜಿಲ್ಲಾ ಆಯುಷ್ ಕಟ್ಟಡ ದುರಸ್ಥಿ	**1.00**
	ಒಟ್ಟು	**45.77**

ಆಯುಷ್ ಇಲಾಖೆ, ಜಿಲ್ಲಾ ಆಯುಷ್ ಕಛೇರಿಯ ವ್ಯಾಪ್ತಿಯ ಆಸ್ಪತ್ರೆಗಳು/ಚಿಕಿತ್ಸಾಲಯಗಳಲ್ಲಿ ದೊರೆಯುವ ಆಯುಷ್ ಚಿಕಿತ್ಸಾ ವಿವರಗಳು

ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಆಯುರ್ವೇದ, ಹೋಮಿಯೋಪತಿ, ಯುನಾನಿ ವೈದ್ಯ ಪದ್ದತಿಯ ಚಿಕಿತ್ಸೆ ಮತ್ತು ಪಂಚಕರ್ಮ ಚಿಕಿತ್ಸೆ ಒಳಗೊಂಡಂತೆ ಸದ್‌ವೃತ್ತ ದಿನಚರ್ಯ, ಋತುಚರ್ಯ, ಧ್ಯಾನ, ಪ್ರಾಣಯಾಮ ಬಗ್ಗೆ ಮಾಹಿತಿ, ರೋಗಗಳು, ಕಿವಿ, ಮೂಗು ಮತ್ತು ಗಂಟಲು ರೋಗಗಳು, ನೇತ್ರ ರೋಗಗಳು ಮತ್ತು ಚರ್ಮವ್ಯಾಧಿಗಳು, ಉದರ ರೋಗಗಳು ಮತ್ತು ಯಕೃತ್ ಸಮಸ್ಯೆಗಳಿಗೆ ಶಮನ ಮತ್ತು ಶೋಧನಾ ಚಿಕಿತ್ಸೆಗಳನ್ನು ಆಯುರ್ವೇದ ವಿಭಾಗದಲ್ಲಿ ಉಚಿತವಾಗಿ ನೀಡಲಾಗುತ್ತದೆ. ಎಲ್ಲಾ ಖಾಯಿಲೆಗಳಿಗೆ ಸಂಬಂಧಿಸಿದಂತೆ ಹೋಮಿಯೋಪತಿ ಮತ್ತು ಯುನಾನಿಯಲ್ಲಿ ಸಣ್ಣಮಕ್ಕಳು ಹಾಗೂ ವೃದ್ದರಿಗೆ ಸುಲಭ ಚಿಕಿತ್ಸೆಗಳು ಅಲರ್ಜಿ ಇತ್ಯಾದಿ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುತ್ತಿದೆ.

ಪಂಚಕರ್ಮ ವಿಭಾಗ:–

ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಪಂಚಕರ್ಮ ವಿಭಾಗವನ್ನು ಕೇಂದ್ರ ಪರಸ್ಕೃತ ಯೋಜನೆ ಅಡಿಯಲ್ಲಿ ಪ್ರಾರಂಭಿಸಲಾಗಿದ್ದು, ಅಲ್ಲಿನ ಸಿಬ್ಬಂದಿ ವರ್ಗದವರಿಗೆ ಎನ್.ಹೆಚ್.ಎಂ ಯೋಜನೆ ಅಡಿಯಲ್ಲಿ ವೇತನವನ್ನು ಪಾವತಿಸಲಾಗಿದ್ದು, ಈ ವಿಭಾಗವು ಹಾಸನ ವೈದ್ಯಕೀಯ ವಿಜ್ಞಾನಗಳ ಭೋದಕ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಾರ್ವಜನಿಕರಿಗೆ ಆಯುರ್ವೇದ ಚಿಕಿತ್ಸೆ ನೀಡುತ್ತಿದ್ದು, ಅಗತ್ಯ ಪಂಚಕರ್ಮ ಚಿಕಿತ್ಸಾ ಸೌಲಭ್ಯಗಳನ್ನು ಸಹ ಹೊಂದಿದ್ದು, ಈ ವಿಭಾಗದಲ್ಲಿ ಸಾರ್ವಜನಿಕರಿಗೆ ಪಂಚಕರ್ಮ ಚಿಕಿತ್ಸೆ ನೀಡಲಾಗುತ್ತಿದೆ.

ಎನ್.ಹೆಚ್.ಎಂ ಯೋಜನೆ:–

ಎನ್.ಹೆಚ್.ಎಂ ಯೋಜನೆ ಅಡಿಯಲ್ಲಿ ಜಿಲ್ಲಾ ಆಸ್ಪತ್ರೆಯ ಪಂಚಕರ್ಮ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಥೆರಪಿಸ್ಟ್, ಶುಶ್ರೂಷಕಿಯರು ಮತ್ತು ಮಲ್ಟಿಪರ್ಪಸ್ ವರ್ಕರ್ ಹಾಗೂ ಜಿಲ್ಲಾ ಆಯುಷ್ ಕಛೇರಿ, ಹಾಸನ ಇಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್ ಇವರಿಗೆ ಸಂಚಿತ ವೇತನ ಸಂದಾಯ ಮಾಡಲಾಗುತ್ತಿದೆ. ಮತ್ತು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಘಟಕ ತಾಲ್ಲೂಕು ಆಯುರ್ವೇದ ಅರಸೀಕೆರೆ ಇಲ್ಲಿ ಧರ್ಮಸ್ಥಳ ಸಂಸ್ಥೆವತಿಯಿಂದ ನಡೆಯುತ್ತಿದೆ.

ರಾಜ್ಯವಲಯ ಐ.ಇ.ಸಿ ಆಯುಷ್ ಆರೋಗ್ಯ ಕಾರ್ಯಕ್ರಮಗಳು:–

ಸಾರ್ವಜನಿಕರಿಗೆ ಆಯುಷ್ ವೈದ್ಯ ಪದ್ದತಿಗಳ ಬಗ್ಗೆ ವಿವಿಧ ಗ್ರಾಮಗಳಲ್ಲಿ ಐ.ಇ.ಸಿ ಆರೋಗ್ಯ ಮತ್ತು ತರಬೇತಿ ಕಾರ್ಯಕ್ರಮಗಳಾದ ಮನೆಮದ್ದು, ಆರೋಗ್ಯ ಶಿಬಿರಗಳು, ಜಿಲ್ಲಾ/ ತಾಲ್ಲೂಕು ಮಟ್ಟದ ಆಯುಷ್ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಂಡದವರು ಹೆಚ್ಚವಾಸಿಸುವ ಸ್ಥಳಗಳಲ್ಲಿ ಸಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

2020–21 ನೇ ಸಾಲಿನಲ್ಲಿ ತಾಲ್ಲೂಕುವಾರು ಅನುಷ್ಟಾನಗೊಳಿಸಿದ ಕಾರ್ಯಕ್ರಮಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ	ಕಾರ್ಯಕ್ರಮಗಳು	ಹಾಸನ	ಬೇಲೂರು	ಆಲೂರು	ಚನ್ನರಾಯಪಟ್ಟಣ	ಅರಕಲಗೂಡು	ಅರಸೀಕೆರೆ	ಹೊಳೆನರಸೀಪುರ	ಸಕಲೇಶಪುರ
1	ಔಷಧಿ ಸಸ್ಯವನ	01	02	01	01	01	0	01	0
2	ಆಯುಷ್ ಸೇವಾ ಗ್ರಾಮ	02				01			
3	ವಸತಿ ನಿಲಯಗಳ ಮೆಲ್ವಿಚಾರಕರಿಗೆ ಆನ್ ಲೈನ್ ಕಾರ್ಯಕ್ರಮ	03							
	ಒಟ್ಟು	**06**	**02**	**01**	**01**	**02**	**0**	**01**	**00**

ಈ ಕಾರ್ಯಕ್ರಮಗಳ ಮುಖಾಂತರ ಸಾರ್ವಜನಿಕರಿಗೆ ಆಯುಷ್ ವೈದ್ಯಪದ್ದತಿಯಲ್ಲಿ ಪರಿಚಯ ಮಾಡಿಕೊಳ್ಳುವುದರ ಜೊತೆಗೆ ಅವುಗಳ ಉಪಯೋಗ ಬಳಕೆ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆಯನ್ನು ಸಹ ನೀಡಲಾಗುತ್ತಿದೆ. ಸಾರ್ವಜನಿಕರಿಗೆ ಆಯುಷ್ ಪದ್ದತಿಯಡಿಯಲ್ಲಿ ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆ ಹೊಸಲೈನ್ ರಸ್ತೆ, ಹಾಸನ ಇಲ್ಲಿ ಆಯುರ್ವೇದ ಹಾಗೂ ಹೋಮಿಯೋಪತಿಯಲ್ಲಿ ಉತ್ತಮವಾಗಿ ಚಿಕಿಸಲ್ಪಡುವ ರೋಗಗಳನ್ನು ತಿಳುವಳಿಕೆಗಾಗಿ ಹೆಸರಿಸಿ ಪ್ರಕಟಿಸಿದೆ.

2020–21 ನೇ ಸಾಲಿನ ಆಯವ್ಯಯ:– ಆಯುಷ್ ಇಲಾಖೆಯ ಅಭಿವೃದ್ದಿಗಾಗಿ ಜಿಲ್ಲಾ ಪಂಚಾಯತ್‌ನಿಂದ ಈ ಕೆಳಕಂಡಂತೆ ಆಯವ್ಯಯ ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

ಯೋಜನೆಗಳ ವಿವರಗಳು	ಬಿಡುಗಡೆಯಾದ ಮೊತ್ತ	ವೆಚ್ಚ ಮಾಡಲಾದ ಮೊತ್ತ
ಯೋಜನೇತರ ಅಡಿಯಲ್ಲಿ ವೇತನ ಮತ್ತು ವೇತನೇತರ ಬಾಬ್ತಿಗಾಗಿ	719.74	642.18
ಔಷಧಿಗಾಗಿ	55.00	54.98
ಕಟ್ಟಡ ಕಾಮಗಾರಿ	00	00
ಒಟ್ಟು	**774.74**	**697.16**

ಹಾಸನ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕಗಳಲ್ಲಿ ಹಾಗೂ ಎನ್.ಆರ್.ಹೆಚ್.ಎಂ ಅಡಿಯಲ್ಲಿ ಖಾಲಿ ಇರುವ ಅಲೋಪತಿ ವೈದ್ಯರ ಹುದ್ದೆಗಳಲ್ಲಿ ಆಯುಷ್ ವೈದ್ಯರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಈ ಎಲ್ಲಾ ನಿಟ್ಟಿನಲ್ಲಿ ಆಯುಷ್ ಇಲಾಖೆಯು ಸಾರ್ವಜನಿಕ ಆರೋಗ್ಯ ಸುಧಾರಣೆ ಹಾಗೂ ಕ್ಷೇಮಾಭಿವೃದ್ದಿಗೆ ಶ್ರಮಿಸುತ್ತಿದ್ದು, ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಆಯುಷ್ ಪದ್ದತಿಯು ದಿನೇ ದಿನೇ ಹೆಚ್ಚು ಜನಪ್ರಿಯವಾಗುತ್ತದೆ.

****

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಪಶುಸಂಗೋಪನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಹಾಸನ ಜಿಲ್ಲೆಯಲ್ಲಿ ಹಲವು ವರ್ಷಗಳಿಂದಲೂ ಬಹುಮುಖ ಸೇವೆ ಸಲ್ಲಿಸುತ್ತಿದೆ. ಜಾನುವಾರುಗಳಿಗೆ ತಗಲುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು, ರೋಗರುಜಿನಗಳಿಗೆ ಚಿಕಿತ್ಸೆ ನೀಡುವುದು, ಕಸಿ ಮಾಡುವುದು ಮತ್ತು ಕೃತಕ ಗರ್ಭಧಾರಣೆ ಮೂಲಕ ಉತ್ತಮ ಮಿಶ್ರತಳಿ ಕರುಗಳನ್ನು ಪಡೆಯುವುದು ಇವು ಇಲಾಖೆಯ ಕಾರ್ಯ ಚಟುವಟಿಕೆಗಳಾಗಿರುತ್ತದೆ. ಜೊತೆಗೆ ರೋಗ ನಿರೋಧಕ ಚುಚ್ಚು ಮದ್ದುಗಳನ್ನು ಸಕಾಲದಲ್ಲಿ ನೀಡುವುದು, ಸುಧಾರಿತ ತಳಿಯ ಕುರಿಗಳನ್ನು ಜನಪ್ರಿಯಗೊಳಿಸುವುದು. ಇವುಗಳು ಇಲಾಖಾ ವಿಸ್ತರಣಾ ಚಟುವಟಿಕೆಗಳಾಗಿದ್ದು, ಸರ್ಕಾರವು ಇಲಾಖೆಯ ಮುಖಾಂತರ ಕಾರ್ಯಗತಗೊಳಿಸುತ್ತಿರುವ ಹಲವು ಕಾರ್ಯ ಚಟುವಟಿಕೆಗಳಿಂದ ವೇದ್ಯವಾಗುತ್ತದೆ. ಹಸು, ಎಮ್ಮೆ, ಕುರಿ, ಮೇಕೆ, ಹಂದಿ, ಕೋಳಿ ಮತ್ತು ಮೊಲ ಈ ಮೊದಲಾದ ಜಾನುವಾರುಗಳ ಒಟ್ಟು ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಇಲಾಖೆಯು ಸಕ್ರಿಯವಾಗಿ ಭಾಗಿಯಾಗಿದೆ. ಹಾಗೂ ಇತ್ತೀಚಿನ ದಿನಗಳಲ್ಲಿ ಮೇವು ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಲಾಗಿದೆ.

ಹಾಸನ ಜಿಲ್ಲೆಯಲ್ಲಿ 8 ತಾಲ್ಲೂಕುಗಳಿದ್ದು, ಇವುಗಳಲ್ಲಿ ಸಕಲೇಶಪುರ ಮಲೆನಾಡು ಪ್ರದೇಶವಾಗಿರುತ್ತದೆ. ಬೇಲೂರು, ಆಲೂರು ಮತ್ತು ಅರಕಲಗೂಡು ಅರೆ ಮಲೆನಾಡು ಪ್ರದೇಶವಾಗಿರುತ್ತದೆ. ಹಾಸನ, ಚನ್ನರಾಯಪಟ್ಟಣ, ಅರಸೀಕೆರೆ ಮತ್ತು ಹೊಳೆನರಸೀಪುರ ಬಯಲು ಪ್ರದೇಶವಾಗಿದ್ದು ವಿವಿಧ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿ ಸೇರಿವೆ. ಜಿಲ್ಲಾ ವಲಯ ಹಾಗೂ ರಾಜ್ಯ ವಲಯದ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನದಲ್ಲಿ ಉಳಿಕೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆ ಗಿರಿಜನ ಉಪಯೋಜನೆ, ಆಸ್ಕ್ಯಾಡ್, ಜಾನುವಾರು ವಿಮೆ, ಬರಡುರಾಸು ತಪಾಸಣಾ ಶಿಬಿರ ಮತ್ತು ಮಿಶ್ರ ತಳಿ ಕರುಗಳ ಪ್ರದರ್ಶನ ಮುಂತಾದ ಜನೋಪಯೋಗಿ ಯೋಜನೆಗಳು ಇಲಾಖೆಯ ಮೂಲಕ ಕಾರ್ಯಗತವಾಗುತ್ತಿವೆ.

ಹಾಸನ ಜಿಲ್ಲೆಯಲ್ಲಿ 33–ಪಶು ಆಸ್ಪತ್ರೆ, ಪಶು 107,– ಚಿಕಿತ್ಸಾಲಯ, 72– ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಒಟ್ಟಾರೆಯಾಗಿ 212 ಪಶುವೈದ್ಯಕೀಯ ಸಂಸ್ಥೆಗಳಿದ್ದು, ಪಶುಸಂಗೋಪನಾ ಮತ್ತು ಪಶುವೈದ್ಯಕೀಯ ಕಾರ್ಯಚಟುವಟಿಕೆಗಳು ಜಿಲ್ಲಾ ಮಟ್ಟದ ಅಧಿಕಾರಿಯಾದ ಉಪನಿರ್ದೇಶಕರ ನೇತೃತ್ವದಲ್ಲಿ ನಡೆಯುತ್ತದೆ. ಉಪನಿರ್ದೇಶಕರ ಕಛೇರಿಯಲ್ಲಿ ಮುಖ್ಯ ಪಶುವೈದ್ಯಾಧಿಕಾರಿ, ಸಹಾಯಕ ಆಡಳಿತ ಅಧಿಕಾರಿ, ಜಾನುವಾರು ಅಭಿವೃದ್ಧಿ ಅಧಿಕಾರಿ, ಇಬ್ಬರು ಕಛೇರಿ ಅಧೀಕ್ಷಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು, ಇಬ್ಬರು ಬೆರಳಚ್ಚುಗಾರರು, ಒಬ್ಬರು ವಾಹನ ಚಾಲಕರು ಹಾಗೂ ನಾಲ್ಕು ಡಿ ದರ್ಜೆ ನೌಕರರ ಹುದ್ದೆಗಳು ಮಂಜೂರಾಗಿರುತ್ತವೆ. ತಾಲ್ಲೂಕು ಮಟ್ಟದ ಆಡಳಿತವನ್ನು ತಾಲ್ಲೂಕು ಸಹಾಯಕ ನಿರ್ದೇಶಕರು ಹಾಗೂ ಗ್ರಾಮೀಣ ಭಾಗದಲ್ಲಿ ಪಶುವೈದ್ಯಾಧಿಕಾರಿಗಳು ನೋಡಿಕೊಳ್ಳುತ್ತಿದ್ದು, ಇವರ ಅಧೀನದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಜಿಲ್ಲೆಯ ಅರಕಲಗೂಡು ತಾಲ್ಲೂಕು ಪಶು ಆಸ್ಪತ್ರೆ ಆವರಣದಲ್ಲಿ ಪಾಲಿಕ್ಲಿನಿಕ್ ಕಾರ್ಯನಿರ್ವಹಿಸುತ್ತಿರುತ್ತದೆ. ಪಾಲಿಕ್ಲಿನಿಕ್‌ಗೆ ಉಪ ನಿರ್ದೇಶಕರು–1, ವಿಷಯ ತಜ್ಞರು–1, ಪ್ರಥಮ ದರ್ಜೆ ಸಹಾಯಕರು–1, ಎಕ್ಸ್‌ರೇ ಟೆಕ್ನಿಷಿಯನ್–1, ವಾಹನ ಚಾಲಕರು–1 ಮತ್ತು ಡಿ ದರ್ಜೆ ನೌಕರರು–2 ಹುದ್ದೆಗಳು ಮಂಜೂರಾಗಿರುತ್ತವೆ.
ಹಾಸನ ಜಿಲ್ಲೆಯ 8 ತಾಲ್ಲೂಕುಗಳಲ್ಲಿ ಸಂಚಾರಿ ಪಶು ಚಿಕಿತ್ಸಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

"ಇಲಾಖಾ ಕಾರ್ಯಚಟುವಟಿಕೆಗಳು"

2020–21ನೇ ಸಾಲಿನಲ್ಲಿ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳು

Iಜಿಲ್ಲಾ ಪಂಚಾಯತ್ ಯೋಜನಾ ಕಾರ್ಯಕ್ರಮಗಳು:

1. **ಕಾರ್ಯಕಾರಿ ಸಿಬ್ಬಂದಿ 2403–00–101–0–26:–** ಸದರಿ ಲೆಕ್ಕ ಶೀರ್ಷಿಕೆಯಡಿ ರೂ. **195.03** ಲಕ್ಷ ಅನುದಾನ ನಿಗದಿಯಾಗಿದ್ದು, **ರೂ. 195.03** ಲಕ್ಷ ಬಿಡುಗಡೆಯಾಗಿದ್ದು ಈ ಲೆಕ್ಕ ಶೀರ್ಷಿಕೆಯಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ರೂ. **188.81** ಲಕ್ಷ ವೆಚ್ಚ ಮಾಡಲಾಗಿದೆ.

2. **ಕಟ್ಟಡಗಳು; (2403.00.101.0.28)** ಲೆಕ್ಕ ಶೀರ್ಷಿಕೆಯಡಿ ಪ್ರಸಕ್ತ ವರ್ಷಕ್ಕೆ ರೂ. **80.00**ಲಕ್ಷ ಅನುದಾನ ನಿಗಧಿಯಾಗಿದ್ದು ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಅವಶ್ಯವಿರುವ ಕಟ್ಟಡಗಳ ದುರಸ್ತಿ ಕಾಮಗಾರಿ, ಕಟ್ಟಡಗಳಿಗೆ ಸುಣ್ಣಬಣ್ಣ ಮೇಲ್ಛಾವಣಿ ದುರಸ್ತಿ, ಶೌಚಾಲಯ ನಿರ್ಮಾಣ ಹಾಗೂ ಕಾಪೌಂಡ್ ನಿರ್ಮಾಣಗಳಿಗೆ ಜಿಲ್ಲಾ ಪಂಚಾಯತ್ ಹಾಸನದ ವ್ಯಾಪ್ತಿಗೆ ಒಳಪಡುವ ಇಂಜಿನಿಯರಿಂಗ್ 2 ವಿಭಾಗಗಳಿಂದ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ, ಅದರಂತೆ ಚನ್ನರಾಯಪಟ್ಟಣ ವಿಭಾಗಕ್ಕೆ ರೂ.**37.50**ಲಕ್ಷಗಳಲ್ಲಿ ಒಟ್ಟು–21 ಕಾಮಗಾರಿಗಳಿಗಾಗಿ ರೂ.**37.31** ಲಕ್ಷಗಳಿಗೆ ವೆಚ್ಚ ಭರಿಸಿ, ರೂ. 0.19 ಅನುದಾನ ಉಳಿಕೆಯಾಗಿರುತ್ತದೆ ಮತ್ತು ಹಾಸನ ವಿಭಾಗದ ರೂ.42.49ಲಕ್ಷ ಅನುದಾನದಲ್ಲಿ 26 ಕಾಮಗಾರಿಗಳಿಗೆ ರೂ.**42.23**ಲಕ್ಷಗಳನ್ನು ವೆಚ್ಚ ಭರಿಸಿ ರೂ. 0.26 ಅನುದಾನ ಉಳಿಕೆಯಾಗಿರುತ್ತದೆ. ಒಟ್ಟು 2 ವಿಭಾಗಗಳಿಂದ 47 ಸಂಸ್ಥೆಗಳಿಗೆ ರೂ.**79.54**ಲಕ್ಷಗಳ ಅನುದಾನದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

3. **ಔಷಧಾಲಯಗಳು ಮತ್ತು ಕೃತಕ ಗರ್ಭಧಾರಣೆಗಾಗಿ ಸಾಮಾಗ್ರಿಗಳ ಸರಬರಾಜು: (2403.00.101.0.27);** ಪ್ರಸಕ್ತ ವರ್ಷಕ್ಕೆ ರೂ **118.45** ಲಕ್ಷ ನಿಗದಿಯಾಗಿದ ಅನುದಾನದಕ್ಕೆ ಜಿಲ್ಲೆಯಲ್ಲಿ **12.33** ಲಕ್ಷ ಜಾನುವಾರುಗಳಿಗೆ 212 ವಿವಿಧ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಆಗಮಿಸುವ ಜಾನುವಾರುಗಳ ಶುಶ್ರೂಷೆಗಾಗಿ ಜೀವರಕ್ಷಕ ಔಷಧಿಗಳನ್ನು ಆಯುಕ್ತಾಲಯದ, ದರಪಟ್ಟಿ, ಟೆಂಡರ್, ಮುಖಾಂತರ ಹಾಗೂ ಸರ್ಕಾರದ ಸೌಮ್ಯದ ಸಂಸ್ಥೆಯಿಂದ ಖರೀದಿಸಿ ಪೂರೈಸಲಾಗಿದೆ. ಹಾಗೂ ಕೃತಕ ಗರ್ಭಧಾರಣೆಗೆ ಬೇಕಾದ ವೀರ್ಯನಳಿಕೆಗಳನ್ನು ಸಂರಕ್ಷಿಸಲು ಬೇಕಾದ ದ್ರವ ಸಾರಜನಕ ಮತ್ತು ಶೀಥ್ಸ್, ಗ್ಲೌಸ್‌ಗಳನ್ನು ಖರೀದಿಸಿ ಪೂರೈಸಲಾಗಿದೆ. ಒಟ್ಟಾರೆಯಾಗಿ ರೂ **118.32** ಲಕ್ಷ ವೆಚ್ಚ ಮಾಡಲಾಗಿದೆ.

4. **ವಿಸ್ತರಣಾ ಘಟಕ ಬಲಪಡಿಸುವುದು (2403.00.101.0.30)** ಸದರಿ ಲೆಕ್ಕ ಶೀರ್ಷಿಕೆಯಡಿ ಒಟ್ಟು ರೂ **15.30** ಲಕ್ಷ ಅನುದಾನದ ನಿಗಧಿಪಡಿಸಲಾಗಿದೆ. ಈ ಕಾರ್ಯಕ್ರಮದಡಿ ಜಾನುವಾರು ಪ್ರದರ್ಶನ/ಕರುಗಳ ಪ್ರದರ್ಶನ, ರೈತ ಸಂಪರ್ಕ ಸಭೆಗಳು, ಮೈಸೂರು ದಸರಾ ,ತಾಂತ್ರಿಕ ಸಮ್ಮೇಳನ/ವಿಚಾರಗೋಷ್ಟಿ, ಅರೆತಾಂತ್ರಿಕ ಸಿಬ್ಬಂದಿ ಕಾರ್ಯಗಾರ, ಪಶುಮೇಳ/ಕೃಷಿಮೇಳ, ಲಸಿಕಾ ಕಾರ್ಯಕ್ರಮದ ಮಾಹಿತಿ ಬಗ್ಗೆ ಪಶುಪಾಲಕರಿಗೆ ಕರಪತ್ರ, ಕೈಪಿಡಿ, ಮುದ್ರಿಸಿ ಸರಬರಾಜು ಮಾಡುವುದು, ಡಿಜಿಟಲ್ ಉಪಕರಣಗಳಾದ ಡಿಸ್ ಪ್ಲೇ ಬೋರ್ಡ್ಸ್‌ಗಳನ್ನು ಖರೀದಿಸಿ ಪಶುವೈದ್ಯ ಸಂಸ್ಥೆಗಳಿಗೆ ಸರಬರಾಜು ಮಾಡುವುದಲ್ಲದೆ, ಇಲಾಖೆಯ ಮಾಹಿತಿಯನ್ನು ಆಕಾಶವಾಣಿಯಲ್ಲಿ ಬಿತ್ತರಿಸಲು, ಹಾಗೂ ಕಛೇರಿಗೆ ಅವಶ್ಯವಿರುವ ಪರಿಕರಗಳನ್ನು ಖರೀದಿಸಲು ಅನುದಾನ ಉಪಯೋಗಿಸಲಾಗಿದೆ. ಒಟ್ಟಾರೆಯಾಗಿ ರೂ **15.26** ಲಕ್ಷ ವೆಚ್ಚ ಮಾಡಲಾಗಿದೆ. ಮತ್ತು ಗಿಳಿರಾಜ ಕೋಳಿಮರಿ (800ಫಲಾನುಭವಿಗಳು, 4000 ಗಿಳಿರಾಜಕೋಳಿ ವೆಚ್ಚ–440,000 ಭರಿಸಲಾಗಿಸದೆ.)

II ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು:

1. **ಹೊಸದಾಗಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು: (2403.00.101.0.61)** ಸದರಿ ಲೆಕ್ಕ ಶೀರ್ಷಿಕೆಯಡಿ **ರೂ`2918.40** ಲಕ್ಷ ಅನುದಾನ ನಿಗದಿಯಾಗಿದ್ದು, **ರೂ.2679.80** ಲಕ್ಷ ಅನುದಾನ ಬಿಡುಗಡೆಯಾಗಿದ್ದು. `ಈ ಲೆಕ್ಕ ಶೀರ್ಷಿಕೆಯಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು 2626.89 ಲಕ್ಷ ವೆಚ್ಚ ಮಾಡಲಾಗಿದೆ.

2. **ಬರಡು ರಾಸು ಶಿಬಿರಗಳು: (2403.00.101.0.64)** ಸದರಿ ಲೆಕ್ಕ ಶೀರ್ಷಿಕೆಯಡಿ **ರೂ`20.00 ಲಕ್ಷ** ಅನುದಾನ ನಿಗದಿಯಾಗಿದ್ದು ರೂ.20.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು. ಎಲ್ಲಾ 8 ತಾಲ್ಲೂಕಿನ ಆಯ್ದ ಸ್ಥಳಗಳಲ್ಲಿ ಪ್ರತಿ ಶಿಬಿರಕ್ಕೆ ರೂ. **25000.00** ದಂತೆ ಒಟ್ಟು 80 ಬರಡುರಾಸು ಶಿಬಿರಗಳನ್ನು ಏರ್ಪಡಿಸಿ ಬಂಜೆತನ ನಿವಾರಣೆಗೆ ಜಾನುವಾರುಗಳಿಗೆ ಸೂಕ್ತ ಔಷಧೋಪಚಾರ ಮಾಡಿ ಅವುಗಳನ್ನು ಬೆದೆಗೆ ಬರುವಂತೆ ಮಾಡಿ ಅವುಗಳಿಂದ ಸಂತಾನಭಿವೃದ್ಧಿಯಾಗುವಂತೆ ಕ್ರಮಕೈಗೊಳ್ಳುವ ಕಾರ್ಯಕ್ರಮವಾಗಿದ್ದು ಇದಕ್ಕಾಗಿ ಒಟ್ಟು **ರೂ 19.76** ಲಕ್ಷ ವೆಚ್ಚ ಮಾಡಲಾಗಿದೆ.

3. **ಜೀವವೈದ್ಯಕೀಯ ತ್ಯಾಜ್ಯ ನಿರ್ವಹಣೆ (2403.00.101.0.63):–** ಈ ಯೋಜನೆಯಡಿ **ರೂ`4.00** ಲಕ್ಷ ನಿಗದಿಯಾಗಿದ್ದು, ಜಿಲ್ಲೆಯಲ್ಲಿನ 209 ಪಶುವೈದ್ಯಕೀಯ ಸಂಸ್ಥೆಗಳಲ್ಲಿ ನಿರ್ಮಿಸಿರುವ ಡೀಪ್ ಬರಿಯಲ್ ಪಿಟ್, ಶಾರ್ಪ್‌ಪಿಟ್‌ಗಳ ನಿರ್ವಹಣೆಗಾಗಿ ಆಸ್ಪತ್ರೆಯಲ್ಲಿ ಸ್ವಚ್ಛತೆಗಾಗಿ ಹಾಗೂ ತ್ಯಾಜ್ಯ ವಿಲೇವಾರಿಗಾಗಿ ಸದರಿ ಅನುದಾನ ಬಳಸಿಕೊಳ್ಳಲಾಗಿದೆ. ಒಟ್ಟು ರೂ **3.86** ಲಕ್ಷ ವೆಚ್ಚ ಮಾಡಲಾಗಿದೆ.

III ರಾಜ್ಯ ವಲಯ ಕಾರ್ಯಕ್ರಮಗಳು:

1. **ಹವಾಮಾನ ಬದಲಾವಣೆ ಯೋಜನೆ:–** ವಿದ್ಯುತ್ ಚಾಲಿತ ಮೇವು ಕತ್ತರಿಸುವ ಯಂತ್ರ (2 ಹೆಚ್.ಪಿ):– ಹಾಸನ ಜಿಲ್ಲೆಯ 8 ತಾಲ್ಲೂಕಿಗೆ ಒಂದು ತಾಲ್ಲೂಕಿಗೆ ತಲಾ 20 ರಂತೆ ಒಟ್ಟು **160** ವಿದ್ಯುತ್ ಚಾಲಿತ ಮೇವು ಕತ್ತರಿಸುವ ಯಂತ್ರ (2 ಹೆಚ್.ಪಿ)ವನ್ನು ರೈತರಿಗೆ ಸರಬರಾಜು ಮಾಡಲಾಗಿದ್ದು 1 ವಿದ್ಯುತ್ ಚಾಲಿತ ಮೇವು ಕತ್ತರಿಸುವ ಯಂತ್ರಕ್ಕೆ **ರೂ.19800** ಗಳಾಗಿದ್ದು, ಈ ಪೈಕಿ ರೈತರಿಂದ ರೂ.**9.900**/– ರಂತೆ ಹಣಪಡೆಯಲಾಗಿ ಉಳಿದ **ರೂ.9900** ಗಳನ್ನು ಸರ್ಕಾರದಿಂದ ಸಹಾಯಧನವಾಗಿ ನೀಡಲಾಗುತ್ತದೆ.

2. **ಕಿರುಪೊಟ್ಟಣ:–** ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ (ಎಎಪ್‌ಡಿಪಿ) ತ್ವರಿತ ಮೇವು ಅಭಿವೃದ್ಧಿ ಮತ್ತು ಎನ್.ಎಲ್.ಎಂ ಯೋಜನೆಯಡಿ **ರೂ.61.09** ಲಕ್ಷಗಳಲ್ಲಿ **46671** ಕಿರುಪೊಟ್ಟಣಗಳನ್ನು ಜಿಲ್ಲೆಯ 8 ತಾಲ್ಲೂಕುಗಳಿಗೆ ಮೇವಿನ ಬೆಳೆ ಬೆಳೆಯಲು ರೈತರಿಗೆ ಉಚಿತವಾಗಿ ವಿತರಿಸಲಾಗಿದೆ.

3. **ಜಾನುವಾರು ವಿಮೆ:–** 2020–21 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಸಾಮಾನ್ಯ ವರ್ಗದಡಿ **640** ಫಲಾನುಭವಿಗಳಿಗೆ **ರೂ 4.99 ಲಕ್ಷ** ಸಹಾಯಧನ ನಿಗಧಿಪಡಿಸಿದ್ದು, ಪೂರ್ಣ ಪ್ರಗತಿ ಸಾಧಿಸಲಾಗಿದೆ.

4. **ಹೊರಗುತ್ತಿಗೆ "ಡಿ" ದರ್ಜೆ ನೌಕರರ ವಿವರ** :– 2020–21ನೇ ಸಾಲಿನಲ್ಲಿ ಹಾಸನ ಜಿಲ್ಲೆಯ 8 ತಾಲ್ಲೂಕಿನ ವಿವಿಧ ಪಶುವೈದ್ಯ ಸಂಸ್ಥೆಗಳಲ್ಲಿ ಖಾಲಿ ಇರುವ **141** ಡಿ ದರ್ಜೆನೌಕರರ ಹುದ್ದೆಗಳಿಗೆ ಇಲಾಖಾ ಆಯುಕ್ತರ ಆದೇಶದಂತೆ ಮೇ॥ ಮಾತಾ ಟೆಕ್ನಾಜಿಸ್, ಧಾರವಾಡ ಇವರಿಂದ ಹೊರಗುತ್ತಿಗೆ ಆಧಾರದ ಮೇಲೆ ಒಟ್ಟು **141** ಜನ ಹೊರಗುತ್ತಿಗೆ "ಡಿ" ದರ್ಜೆ ನೌಕರರನ್ನು ಪಡೆಯಲಾಗಿ ಸದರಿ ನೌಕರರು ನಿಯೋಜನೆಗೊಂಡ ಜಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

5. **ಎನ್.ಎಲ್.ಎಂ ಗ್ರಾಮೀಣ ಹಿತ್ತಲ ಕುರಿ, ಮೇಕೆ ಹಂದಿ ಅಭಿವೃದ್ಧಿ ಯೋಜನೆ:–** ಸದರಿ ಯೋಜನೆಯಡಿ ಕ್ರಮವಾಗಿ ಕುರಿ, ಮೇಕೆ ಮತ್ತು ಹಂದಿ ಘಟಕಕ್ಕೆ 16, 16 ಮತ್ತು 50 ಒಟ್ಟು 82 ಭೌತಿಕ ಗುರಿ ನಿಗಧಿಪಡಿಸಿದ್ದು, ರೂ 28.45 ಲಕ್ಷ ಒಟ್ಟು ಆರ್ಥಿಕ ಗುರಿ ನಿಗಧಿಪಡಿಸಲಾಗಿರುತ್ತದೆ. ಈ ಯೋಜನೆಯಡಿ ಶೇ 100 ಪ್ರಗತಿ ಸಾಧಿಸಲಾಗಿರುತ್ತದೆ.

ಹಾಸನ ಜಿಲ್ಲೆಯ ಪಶುವೈದ್ಯಕೀಯ ಸಂಸ್ಥೆಗಳ ವಿವರ

1	ಉಪನಿರ್ದೇಶಕರ ಕಛೇರಿ	01
2	ಪಾಲಿಕ್ಲಿನಿಕ್	01
3	ಪಶು ಆಸ್ಪತ್ರೆ	33
4	ಪಶು ಚಿಕಿತ್ಸಾಲಯ	107
5	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	72
6	ಸಂಚಾರಿ ಪಶು ಚಿಕಿತ್ಸಾಲಯ	08
	ಒಟ್ಟು	**222**

20 ಅಂಶಗಳ ಅಭಿವೃದ್ಧಿ ಕಾರ್ಯಕ್ರಮದಲ್ಲಿ, 2018–19, 2019–20 ಮತ್ತು 2020–21ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿ ವರದಿ

ಕ್ರ. ಸಂ	ವಿಷಯ	2018–19		2019–20		2020–21	
		ವಾರ್ಷಿಕ ಗುರಿ	ವಾರ್ಷಿಕ ಸಾಧನೆ	ವಾರ್ಷಿಕ ಗುರಿ	ವಾರ್ಷಿಕ ಸಾಧನೆ	ವಾರ್ಷಿಕ ಗುರಿ	ವಾರ್ಷಿಕ ಸಾಧನೆ
1	ಕೃತಕ ಗರ್ಭಧಾರಣೆ.						
	ಅ. ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮಾಡಿದ ಸಂಖ್ಯೆ.	177000	213036	205000	212998	206000	220358
	ಆ. ಗರ್ಭತಪಾಸಣೆ ಮಾಡಿದ ಪ್ರಾಣಿಗಳ ಸಂಖ್ಯೆ	176518	169494	200450	184424	164800	185570
	ಇ. ಗರ್ಭಧರಿಸಿದ ಜಾನುವಾರುಗಳ ಸಂಖ್ಯೆ.	–	72408	–	72985	–	78678
	ಈ. ಕರುಗಳ ಜನನ	–	47149	–	49510	–	52795
2							
	ಅ. ಕೊಕ್ಕರೆ ರೋಗದ ಲಸಿಕೆ.	404023	406026	404023	389789	405000	389523
	ಆ. ಕಾಲು ಮತ್ತು ಬಾಯಿ ಜ್ವರದ ಲಸಿಕೆ	1291752	1189671	1282686	616815	1280954	563866
	ಇ. ವಿಲೇಜ್ ಸರ್ಚ್	3456	3477	3456	3463	3456	3515
	ಈ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬರುವ ಹಳ್ಳಿಗಳಲ್ಲಿ ದೊಡ್ಡರೋಗ ಪತ್ತೆ ಹಚ್ಚುವುದು	143	143	143	143	143	143
	ಉ. ದಿನವಹಿ ಪುಸ್ತಕ ಪರಿಶೀಲನೆ	360	370	360	379	360	376
3							
	ಅ. ಮೇವಿನ ಅಭಿವೃದ್ಧಿ (ಹೆಕ್ಟೇರ್)	1317	9439.7	3634	10993	4006	6719
	ಆ. ಕಿರು ಪೊಟ್ಟಣ.	9000	101505	18000	42170	18000	46671
4	ಗಿರಿರಾಜ ಕೋಳಿ ಮರಿಗಳ ವಿತರಣೆ.	17500	17500	15000	15000		–
5	ಅ. ಬರಡು ರಾಸು ತಪಾಸಣಾ ಶಿಬಿರ	104	106	80	64	80	88
	ಆ. ಕಿಸಾನ್ ಸಂಪರ್ಕ ಸಭೆಗಳು	192	232	–	00		–
	ಇ. ನಡೆಸಿದ ಗ್ರಾಮ ಸಭೆಗಳು	520	531		97		16
	ಈ. ಜಾನುವಾರು ಮಿಶ್ರತಳಿ ಕರುಗಳು, ಕುಕ್ಕುಟ ಪ್ರದರ್ಶನ	18	19		14	10	10
	ಉ. ಸಂಸ್ಥೆಯಲ್ಲಿ ತಾಂತ್ರಿಕ ಪರಿಶೀಲನೆ	189	189	90	82	144	144

2018–19, 2019–20 ಮತ್ತು 2020–21ನೇ ಸಾಲಿನಲ್ಲಿ ವಿವಿಧ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ನೀಡುವುದು, ಚಿಕಿತ್ಸೆ ಮತ್ತು ತಳಿ ಅಭಿವೃದ್ಧಿ ಕಾರ್ಯಗಳಲ್ಲಿ ಪಶು ವೈದ್ಯಕೀಯ ಸಂಸ್ಥೆಗಳು ನಡೆಸಿದ ಪ್ರಗತಿ ಕೆಳಕಂಡಂತಿದೆ.

ಕ್ರ.ಸಂ	ವಿವರ	2018–19	2019–20	2020–21
1	ಚಿಕಿತ್ಸೆ ಮಾಡಿದ ಜಾನುವಾರುಗಳ ಸಂಖ್ಯೆ.	631424	541657	644651
2	ಕೃತಕ ಗರ್ಭಧಾರಣೆ ಮಾಡಲಾದ ರಾಸುಗಳ ಸಂಖ್ಯೆ	213036	212998	220358
3	ಗರ್ಭ ಪರೀಕ್ಷೆ ಮಾಡಿದ ರಾಸುಗಳು	169494	184424	185570
4	ಗರ್ಭಧರಿಸಿದ ಒಟ್ಟು ರಾಸುಗಳು	72408	72985	78678
5	ಜನಿಸಿದ ಕರುಗಳ ಸಂಖ್ಯೆ	47149	49510	52795
6	ಚುಚ್ಚು ಮದ್ದು ಕಾರ್ಯಕ್ರಮಗಳು			
	ಅ. ಕಾಲು ಮತ್ತು ಬಾಯಿ ರೋಗದ ವಿರುದ್ಧ	1189671	616815	563866
	ಆ. ಕೊಕ್ಕರೆ ರೋಗದ ವಿರುದ್ಧ	406026	389789	389523
	ಇ. ಗಳಲೆ ರೋಗದ ವಿರುದ್ಧ	659039	581600	256031
	ಈ. ಚಪ್ಪೆ ರೋಗದ ವಿರುದ್ಧ	403011	338988	318837
	ಉ. ಕರುಳು ಬೇನೆ ವಿರುದ್ಧ	505008	465190	576399
	ಊ. ರೇಬಿಸ್	913	378	77
	ಋ. ನೆರಡಿ ರೋಗ		0	–
	ಎ. ಪಿ.ಪಿ.ಆರ್.	325287	178920	209224
	ಏ. ಒಳ ಪರಾವಲಂಬಿಗಳ ವಿರುದ್ಧ ಔಷಧಿ ಕುಡಿಸಿದ ಜಾನುವಾರುಗಳ ಸಂಖ್ಯೆ.	698576	687635	822783
	ಐ. ಬ್ರೂಸೆಲ್ಲೋಸಿಸ್	2666	0	–
7	ಕಸಿ ಮಾಡಲಾದ ಜಾನುವಾರುಗಳ ಸಂಖ್ಯೆ.	79297	49094	64209

2018–19, 2019–20 ಮತ್ತು 2020–21ನೇ ಸಾಲಿನ ಅಂತ್ಯದವರೆಗೆ ಯೋಜನಾ ಕಾರ್ಯಕ್ರಮದ ವೆಚ್ಚದ ಪಟ್ಟಿ (ರೂ ಲಕ್ಷಗಳಲ್ಲಿ)

ಕ್ರ ಸಂ	ಕಾರ್ಯಕ್ರಮ ಹಾಗೂ ಲೆಕ್ಕ ಶೀರ್ಷಿಕೆ	2018–19		2019–20		2020–21	
		ನಿಗಧಿ	ಖರ್ಚು	ನಿಗಧಿ	ಖರ್ಚು	ನಿಗಧಿ	ಖರ್ಚು
01	2403.00.101.0.26 ಕಾರ್ಯ ನಿರ್ವಾಹಕ ಅಧಿಕಾರಿ	190.46	183.88	200.82	186.93	195.03	188.81
02	2403–00–101–0–27 ಆಸ್ಪತ್ರೆ ಮತ್ತು ಔಷಧಾಲಯಗಳು	120.00	119.84	140.00	139.34	118.45	118.32
03	2403–00–101–0–28 ಕಟ್ಟಡಗಳು	70.00	64.63	80.00	58.54	80.00	79.54
04	2403–00–101–0–30 ವಿಸ್ತರಣಾ ಘಟಕ ಬಲಪಡಿಸುವುದು	20.00	19.97	22.00	21.82	15.30	15.26
05	2403–00–103–0–31 ಗಿರಿರಾಜ ಕೋಳಿ ಸಾಕಾಣಿಕೆ	15.00	14.96	15.00	15.00	0	0
06	2403–00–101–0–61 ಹೊಸ ಪ್ರಾ.ಪ.ಚಿ., ತೆರೆಯುವುದು ಮತ್ತು ಉನ್ನತೀಕರಿಸುವುದು.	2593.88	2588.92	2758.61	2655.33	2918.40	2626.89
07	2403–00–101–0–64 ಬರಡು ರಾಸು ತಪಾಸಣೆ ಶಿಬಿರ	20.00	19.75	20.00	19.93	20	19.76
08	2403–00–101–0–63_ಜೀವವೈದ್ಯಕೀಯ ತ್ಯಾಜ್ಯ ನಿರ್ವಹಣೆ	0	0	0	0	4.00	3.86
09	ವಿಶೇಷ ಘಟಕ ಯೋಜನೆ ರಾಜ್ಯ ವಲಯ	32.40	32.40	29.43	26.73	0	0
10	ಗಿರಿಜನ ಉಪಯೋಜನೆ ರಾಜ್ಯ ವಲಯ	11.40	11.40	0.405	0.405	0	0
11	ವಿಶೇಷ ಘಟಕ ಯೋಜನೆ ಜಿಲ್ಲಾ ವಲಯ	27.00	27.00	0	0	0	0

12	ಗಿರಿಜನ ಉಪಯೋಜನೆ ಜಿಲ್ಲಾ ವಲಯ	3.75	3.75	0	0	0	0
13	ಹಾ.ಉ.ಪ್ರೋ.ಉಳಿಕೆ ಹಣ ವಿಶೇಷ ಘಟಕ ಯೋಜನೆ	464.025	464.025	0	0	0	0
14	ಹಾ.ಉ.ಪ್ರೋ.ಉಳಿಕೆ ಹಣ ಗಿರಿಜನ ಉಪಯೋಜನೆ	44.34	44.34	0	0	0	0
15	ಪಶುಭಾಗ್ಯ	64.425	64.425	0	0	0	0
16	ಮಹಿಳೆಯರಿಗಾಗಿ ಹೈನುಗಾರಿಕೆ ಕಾರ್ಯಕ್ರಮ (ಸಾಮಾನ್ಯ)	0	0	18.70	16.60	0	0
17	ಮಹಿಳೆಯರಿಗಾಗಿ ಹೈನುಗಾರಿಕೆ ಕಾರ್ಯಕ್ರಮ (ಪ.ಜಾತಿ)	0	0	10.935	10.395	0	0
18	ಮಹಿಳೆಯರಿಗಾಗಿ ಹೈನುಗಾರಿಕೆ ಕಾರ್ಯಕ್ರಮ (ಪ.ಪಂ)	0	0	1.08	1.08	0	0

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಹಾಸನ ಇಲಾಖೆಗೆ ಸಂಬಂಧಿಸಿದಂತೆ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ (ದಿನಾಂಕ 31.03.2021 ರಲ್ಲಿದ್ದಂತೆ)

ಕ್ರ ಸಂ	ಹುದ್ದೆಯ ವಿವರ	ಮಂಜೂರಾದ ಹುದ್ದೆ	ಭರ್ತಿಯಾಗಿರುವ ಹುದ್ದೆ	ಖಾಲಿ ಇರುವ ಹುದ್ದೆ
1	ಉಪನಿರ್ದೇಶಕರು	2	1	1
2	ಮುಖ್ಯ ಪಶುವೈದ್ಯಾಧಿಕಾರಿ/ವಿಷಯ ತಜ್ಞರು (ಸಹಾಯಕ ನಿರ್ದೇಶಕರು)	10	4	4
3	ಮುಖ್ಯ/ಹಿರಿಯ ಪಶುವೈದ್ಯಾಧಿಕಾರಿ	42	24	18
4	ಪಶುವೈದ್ಯಾಧಿಕಾರಿಗಳು	107	56	51
5	ಜಾನುವಾರು ಅಭಿವೃದ್ಧಿ ಅಧಿಕಾರಿ	9	9	0
6	ಜಾನುವಾರು ಅಧಿಕಾರಿ	24	21	3
7	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	116	68	48
8	ಪಶುವೈದ್ಯಕೀಯ ಪರೀಕ್ಷಕರು	73	71	2
9	ಎಕ್ಸ್‌ರೇ ಟೆಕ್ನಿಷಿಯನ್	1	0	1
10	ಪಶುವೈದ್ಯಕೀಯ ಸಹಾಯಕರು	130	66	64
11	ಸಹಾಯಕ ಆಡಳಿತ ಅಧಿಕಾರಿಗಳು	1	1	0
12	ಅಧೀಕ್ಷಕರು	2	2	0
13	ಪ್ರಥಮ ದರ್ಜೆ ಸಹಾಯಕರು	4	4	0
14	ದ್ವಿತೀಯ ದರ್ಜೆ ಸಹಾಯಕರು	9	9	0
15	ಬೆರಳಚ್ಚುಗಾರರು	2	0	2
16	ವಾಹನ ಚಾಲಕರು	10	5	6
17	ಡಿ ದರ್ಜೆ ನೌಕರರು.	334	75	259
	ಒಟ್ಟು	874	415	459
	141 ಜನ ಡಿ ದರ್ಜೆ ನೌಕರರು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ			
	16 ಜನ ಡಿ ದರ್ಜೆ ನೌಕರರು ದಿನಗೂಲಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ			
	5 ಜನ ವಾಹನ ಚಾಲಕರು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ			
	1 ವಾಹನ ಚಾಲಕರು ದಿನಗೂಲಿ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ			

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಹಾಸನ

ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳ ವಿವರ

ಕ್ರ.ಸಂ	ತಾಲ್ಲೂಕು	ಕ್ರ.ಸಂ	ಜಿಲ್ಲಾ ಪಾಲಿಕ್ಲಿನಿಕ್	ಕ್ರ.ಸಂ	ಪ.ಆ	ಕ್ರ.ಸಂ	ಪಶು ಚಿಕಿತ್ಸಾಲಯ	ಕ್ರ.ಸಂ	ಪ್ರಾ.ಪ.ಚಿ.,	ಸಂ ಪ ಚಿ	ಒಟ್ಟು
1	ಆಲೂರು			1	ಪಶು ಆಸ್ಪತ್ರೆ, ಆಲೂರು	1	ಪಶು ಚಿಕಿತ್ಸಾಲಯ, ರಾಯರಕೊಪ್ಪಲು	1	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಕುಂದೂರು	ಆಲೂರು	
				2	ಪಶು ಆಸ್ಪತ್ರೆ, ಕೆ ಹೊಸಕೋಟೆ	2	ಪಶು ಚಿಕಿತ್ಸಾಲಯ, ದೊಡ್ಡಕಣಗಾಲು	2	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಚಿನ್ನಹಳ್ಳಿ		
						3	ಪಶು ಚಿಕಿತ್ಸಾಲಯ, ಗಂಜಿಗೆರೆ	3	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಕಟ್ಟೆಮಡಬಲು		
